ಶಿವಮೊಗ್ಗ ಗುರುವಾರ, 25 ಜೂನ್ 2026 ಸಂಪುಟ 17, ಸಂಚಿಕೆ 62, ಪುಟಗಳು 12
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ RNI: KAR KAN 2010/64051
epaper.hosadigantha.com
hosadigantha.com
₹5

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಕಾಶ್ಮೀರ ಮುಂದೆಯೂ ನಮ್ಮ ಆಂತರಿಕ ವಿಚಾರ

• ಪುಟ ೭

ಶೀಘ್ರ ಮನೆ ಹಂಚಿಕೆಗೆ ಡಿ.ಕೆ.ಶಿವಕುಮಾರ್ ಸೂಚನೆ

ವಸತಿ ವಿಳಂಬಕ್ಕೆ ಸಿಎಂ ಸಿಟ್ಟು

• **ಬೆಂಗಳೂರು:** ಗ್ರಾಮೀಣ ವಸತಿ ಮನೆಗಳ ನಿರ್ಮಾಣ, ನಿವೇಶನಗಳ ಹಂಚಿಕೆಯಲ್ಲಿ ನಿಧಾನಗತಿಗೆ ಅಧಿಕಾರಿಗಳ ವಿರುದ್ಧ ಸಿಟ್ಟಾದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಮನೆಗಾಗಿ ಅರ್ಜಿ ಸಲ್ಲಿಸಿದವರು ಇನ್ನೂ ಎಷ್ಟು ವರ್ಷ ಕಾಯಬೇಕು. ಮೊದಲು ಮನೆ ಹಂಚಿಕೆ ಮಾಡಿ ಎಂದು ಸೂಚನೆ ನೀಡಿದರು.

ವಿಧಾನಸೌಧದಲ್ಲಿ ಬುಧವಾರ ವಸತಿ ಇಲಾಖೆಯ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಅವರು, ಹಲವು ವರ್ಷಗಳ ಹಿಂದೆಯೇ ಮನೆಗಾಗಿ ಅರ್ಜಿ ಸಲ್ಲಿಸಿದವರು ಇನ್ನೂ ಕಾಯುತ್ತಿದ್ದಾರೆ. ಅವರೆಲ್ಲ ಹಣ ಕಟ್ಟಿದ್ದಾರೆ. ಈ ಅರ್ಜಿಗಳ ಮೇಲೆ ಹಿಂದಿನ ಸರ್ಕಾರದ ವಸತಿ ಸಚಿವ ಸೋಮಣ್ಣ ಅವರ ಫೋಟೋ ಇದೆ. ಅವರಿಗಿನ್ನೂ ಮನೆ ಕೊಟ್ಟಿಲ್ಲ. ಪಾಪ ಅವರೆಲ್ಲಾ ಇನ್ನೂ ಎಷ್ಟು ವರ್ಷ ಕಾಯಬೇಕು ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ಫಲಾನುಭವಿಗಳ ಪಟ್ಟಿ ಬೇಗ ಕೊಡಲು ಶಾಸಕರ ಜತೆ ಮಾತನಾಡುವೆ. ನೈಜ ಫಲಾನುಭವಿಗಳಿಗೇ ಸವಲತ್ತು ಸಿಗಬೇಕು.

➡ ಪುಟ 9

> ಯಾವುದೇ ವಸತಿ ಯೋಜನೆಗೆ ಕೈಹಾಕುವ ಮೊದಲೇ ಸ್ಪಷ್ಟ ಯೋಜನೆ ಇಟ್ಟುಕೊಳ್ಳಿ. ಯಾವುದೇ ಪ್ರಮುಖ ತೀರ್ಮಾನಗಳ ಬಗ್ಗೆ ಪಕ್ಷ ಜತೆ ಚರ್ಚೆ ಅಗತ್ಯ. ಮನೆ ನಿರ್ಮಿಸಿದ ನಂತರ ಮಾರಾಟಕ್ಕೆ ಒದ್ದಾಡುವುದು ಬೇಡ. ನೀವು ಗುಣಮಟ್ಟದಲ್ಲಿ ಸ್ಪರ್ಧಾತ್ಮಕವಾಗಿ ಇರಬೇಕು.
> ■ **ಡಿ.ಕೆ.ಶಿವಕುಮಾರ್**, ಮುಖ್ಯಮಂತ್ರಿ

ಕಿರುಸುದ್ದಿ

ಟಿಬಿ ಡ್ಯಾಂ ಗೇಟ್‌ಗೆ ಇಂದು ಚಾಲನೆ
• ಪುಟ ೮

ಭಾರೀ ಮಳೆ: ಮುಂಬೈ, ಅರುಣಾಚಲ ಜನ ತತ್ತರ
• ಪುಟ ೭

ಒಂದೇ ಕುಟುಂಬದ ಐವರು ಕಾವೇರಿ ಪಾಲು
• ಪುಟ ೨

ರಾಮಮಂದಿರ ಸ್ಫೋಟಕ್ಕೆ ಶಂಕಿತ ಉಗ್ರ ಸಂಚು
• ಪುಟ ೮

ಗೃಹಲಕ್ಷ್ಮಿ ಹೆಸರಲ್ಲಿ ಲೂಟಿ: ವಿಜಯೇಂದ್ರ
• ಪುಟ ೮

ರಾಜ್ಯಕ್ಕೆ ಹೊರೆಯಾದರೂ ಜಾರಿ: ಸಚಿವ ಈಶ್ವರ ಖಂಡ್ರೆ ಹೇಳಿಕೆ

ಜು.1ರಿಂದ ವಿಬಿ ಜಿರಾಮ್‌ಜಿ

• **ಬೆಂಗಳೂರು:** ಗ್ರಾಮೀಣ ಭಾಗದ ಕುಟುಂಬಗಳಿಗೆ ಉದ್ಯೋಗದ ಖಾತ್ರಿ ನೀಡಿದ್ದ ನರೇಗಾ ಹೊಸ ಸ್ವರೂಪದ ವಿಕಸಿತ ಭಾರತ್ ಜಿ ರಾಮ್‌ಜಿಯಿಂದ ರಾಜ್ಯ ಸರ್ಕಾರದ ಮೇಲೆ ಹೆಚ್ಚಿನ ಹೊರೆಯಾದರೂ ಗ್ರಾಮೀಣ ಜನರ, ಮಹಿಳೆಯರ, ವಂಚಿತರ, ದುರ್ಬಲರ ಹಿತದೃಷ್ಟಿಯಿಂದ ಜುಲೈ 1ರಿಂದಲೇ ಜಾರಿಗೆ ತರಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಸ್ಪಷ್ಟಪಡಿಸಿದ್ದಾರೆ.

ಬುಧವಾರ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ಉನ್ನತಾಧಿಕಾರಿಗಳೊಂದಿಗೆ ನಡೆದ ಸಭೆಯ ಬಳಿಕ ಮಾತನಾಡಿದ ಅವರು, ಯುಪಿಎ ಸರ್ಕಾರ ಜಾರಿಗೆ ತಂದಿದ್ದ ಮನ್‌ರೇಗಾ ಯೋಜನೆಯಲ್ಲಿ ಕೇಂದ್ರ ಸರ್ಕಾರ 90:10 ಅನುಪಾತದಲ್ಲಿ ವೇತನ ಭರಿಸುತ್ತಿತ್ತು. ರಾಜ್ಯ ಸರ್ಕಾರ ಕೇವಲ 10ರಷ್ಟು ಹಣ ನೀಡುತ್ತಿತ್ತು. ಆದರೆ, ಈಗ 60:40ರ ಅನುಪಾತದಲ್ಲಿ ವೆಚ್ಚ ಭರಿಸಬೇಕಾಗಿದ್ದು ರಾಜ್ಯಗಳ ಮೇಲೆ ಹೆಚ್ಚಿನ ಹೊರೆ ಆಗುತ್ತಿದೆ. ಕಳೆದ 10 ವರ್ಷಗಳಲ್ಲಿ ಕೇಂದ್ರ ಸರ್ಕಾರ ಮನ್‌ರೇಗಾ ಅಡಿಯಲ್ಲಿ 56,492 ಕೋಟಿ ರೂ. ಭರಿಸಿದ್ದರೆ, ರಾಜ್ಯ ಸರ್ಕಾರ 4,821 ಕೋಟಿ ರೂ. ಮಾತ್ರ ಭರಿಸಿ ಸುಮಾರು 182 ಕೋಟಿ ಮಾನವ ದಿನಗಳ ಉದ್ಯೋಗ ಒದಗಿಸಿತ್ತು.

➡ ಪುಟ 9

> ವಿಬಿ ಜಿ ರಾಮ್‌ಜಿ ಕಾಯಿದೆ ತರುವ ಮುನ್ನ ಕೇಂದ್ರ ರಾಜ್ಯಗಳ ಸಲಹೆ ಪಡೆಯಬೇಕಾಗಿತ್ತು. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳನ್ನು ಬಿಟ್ಟು ಕಾಯಿದೆ ರೂಪಿಸಿದ ಬಗ್ಗೆಯೂ ಕರ್ನಾಟಕದ ವಿರೋಧವಿದೆ. ಇದನ್ನು ಸುಪ್ರೀಂನಲ್ಲಿ ಪ್ರಶ್ನಿಸಲಾಗುತ್ತಿದೆ.
> ■ **ಈಶ್ವರ್ ಖಂಡ್ರೆ**, ಸಚಿವ

ಬೇಡಿಕೆ ಆಧಾರದಲ್ಲಿ ಉದ್ಯೋಗ ನೀಡಿ

ಜೂ.28ರಂದು ದೆಹಲಿಯಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರೊಂದಿಗೆ ಎಲ್ಲ ರಾಜ್ಯಗಳ ಸಚಿವರ ಸಭೆ ಇದ್ದು, ಈ ಸಭೆಯಲ್ಲಿ ಈ ಎಲ್ಲ ಅಂಶಗಳ ಬಗ್ಗೆ ಪ್ರಸ್ತಾಪಿಸಲಾಗುವುದು ಎಂದು ಈಶ್ವರ ಖಂಡ್ರೆ ತಿಳಿಸಿದರು. ಬೇಡಿಕೆ ಆಧಾರದಲ್ಲಿ ಉದ್ಯೋಗ ನೀಡಬೇಕು ಎಂಬುದು ನಮ್ಮ ಒತ್ತಾಯವಾಗಿದೆ. ನಮ್ಮ ರಾಜ್ಯದಲ್ಲಿ 375 ರೂ. ಕೂಲಿ ಇದೆ. ರಾಜ್ಯ ಸರ್ಕಾರ ಕನಿಷ್ಠ ವೇತನ ಹೆಚ್ಚಳ ಮಾಡಿದೆ. ಅದಕ್ಕೆ ಹೊಂದುವಂತೆ ಕೇಂದ್ರವೂ ಕನಿಷ್ಠ ಕೂಲಿ ಹೆಚ್ಚಿಸಬೇಕು ಎಂದು ಈಶ್ವರ ಖಂಡ್ರೆ ಒತ್ತಾಯಿಸಿದರು.

➡ ಪುಟ 9

ಬಂಡವಾಳ ಹೂಡಲು ಯುಪಿಗೆ ಬನ್ನಿ: ಯೋಗಿ



• **ಬೆಂಗಳೂರು:** ಭಾರತದ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಜ್ಯ ಉತ್ತರ ಪ್ರದೇಶವು ಬಂಡವಾಳ ಹೂಡಲು ಹೇಳಿ ಮಾಡಿಸಿದಂತಿದೆ. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಪೂರಕ ವಾತಾವರಣವಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಿಳಿಸಿದ್ದಾರೆ. ನಗರದ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಆಯೋಜಿಸಿದ್ದ ಉತ್ತರ ಪ್ರದೇಶ ಜಾಗತಿಕ ಬೆಳವಣಿಗೆ ಸಂವಾದ– 2026 ಹೂಡಿಕೆದಾರರ ರೋಡ್ ಶೋ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನವ ಭಾರತದ ನವ ಉತ್ತರ ಪ್ರದೇಶಕ್ಕೆ ಉದ್ಯಮಿಗಳನ್ನು ಆಹ್ವಾನಿಸಲು ನಾನಿಲ್ಲಿಗೆ ಬಂದಿದ್ದೇನೆ. ಉತ್ತರ ಪ್ರದೇಶದಲ್ಲಿ ವಿಪುಲ ಅವಕಾಶಗಳಿವೆ ಎಂದು ಹೇಳಿದರು.

• ವಿವರ ಪುಟ 9

ರಾಜ್ಯದ 6 ಕಡೆ ಇಡಿ ದಾಳಿ

ಅಬಕಾರಿ ಇಲಾಖೆ ಹೆಚ್ಚುವರಿ ಆಯುಕ್ತ ಮಂಜುನಾಥ ಮನೆ ಸೇರಿ 6 ಕಡೆ ಕಾರ್ಯಾಚರಣೆ

• **ಬೆಳಗಾವಿ/ಮೈಸೂರು:** ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ವೈ.ಮಂಜುನಾಥ್ ಅವರ ಮನೆ, ಕಚೇರಿ ಸೇರಿದಂತೆ ರಾಜ್ಯದ ಆರು ಕಡೆ ಬುಧವಾರ ಏಕಕಾಲಕ್ಕೆ ಜಾರಿ ನಿರ್ದೇಶನಾಲಯ(ಇಡಿ) ದಾಳಿ ನಡೆದಿದ್ದು, ಮಂಜುನಾಥ್ ಅವರ ಅಕ್ಕ [illegible] ಯಮುನಾ ಅವರನ್ನು ಮೈಸೂರಿನಲ್ಲಿ ತೀವ್ರ ವಿಚಾರಣೆ ನಡೆಸಿದರು. ಬೆಂಗಳೂರು, ಗೋವಾ ಇಡಿ ಕಚೇರಿ ಅಧಿಕಾರಿಗಳು ಬುಧವಾರ ಬೆಳಗ್ಗೆ ಈ ದಾಳಿ ನಡೆಸಿದ್ದು, ಶೋಧ ಕಾರ್ಯ ಕೈಗೊಂಡಿದ್ದಾರೆ. ಬಳ್ಳಾರಿ ಮಾಜಿ ಸಂಸದ ದೇವೇಂದ್ರಪ್ಪ ಅವರ ಪುತ್ರ ಹಾಗೂ ಸಚಿವ ಸತೀಶ ಜಾರಕಿಹೊಳಿ ಸಹೋದರಿಯ ಪತಿ ಮಂಜುನಾಥ ಅವರ ವಿರುದ್ಧ ಅಕ್ರಮ ಆಸ್ತಿ ಸಂಪಾದನೆ ಆರೋಪ ಕೇಳಿಬಂದಿದ್ದವು.

• ವಿವರ ಪುಟ 9

SHAKTHI
ADVANCED LEARNING ACADEMY
SHAKTHI NEET ACADEMY
Best choice for true aspirants
Near Shree Gopalakrishna Temple, Shakthinagar, Mangaluru - 575 016
ADMISSIONS OPEN FOR 2026-27
REPEATERS BATCH 2027
NEET-UG MEDICAL
SALIENT FEATURES OF
THE NEET LONG TERM PROGRAMME
Total number of Teaching Hours with experienced inhouse faculty- 1000+ hrs.
Total Number of Test Planned - 150
Unit Tests - 85
Part Tests - 15
Cumulative Full Length Tests - 20
Grand Tests - 30
Low student teacher ratio per Batch with individual attention
Guest faculties from reputed institutions across the country for the paper discussion
High quality study material will be provided with DDP
High quality hygienic food will be provided.
24 hrs in house doctors and health care facility on campus
Supportive and stress free learning environment
Personalized doubt solving and counselling sessions
Separate Hostels for Boys and Girls
Early Bird Offer
FLAT 25% OFF For the July First Batch
Mob: 98450 86790 | 96860 00046 | 73492 44080
Web: shakthi.edu.in Email: info@shakthi.edu.in

ಕರ್ನಾಟಕ ಸರ್ಕಾರ

ಶ್ರೀ ಸಿ. ಆರ್. ಪಾಟೀಲ್
ಸನ್ಮಾನ್ಯ ಕೇಂದ್ರ ಜಲಶಕ್ತಿ ಸಚಿವರು
ಭಾರತ ಸರ್ಕಾರ

ಶ್ರೀ ಡಿ. ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಎನ್. ಚಂದ್ರಬಾಬು ನಾಯ್ಡು
ಸನ್ಮಾನ್ಯ ಮುಖ್ಯಮಂತ್ರಿಗಳು
ಆಂಧ್ರಪ್ರದೇಶ ಸರ್ಕಾರ

ಶ್ರೀ ಎ. ರೇವಂತ್ ರೆಡ್ಡಿ
ಸನ್ಮಾನ್ಯ ಮುಖ್ಯಮಂತ್ರಿಗಳು
ತೆಲಂಗಾಣ ಸರ್ಕಾರ

ಡಾ. ಜಿ. ಪರಮೇಶ್ವರ
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ರಾಮಲಿಂಗಾ ರೆಡ್ಡಿ
ಮಾನ್ಯ ಸಚಿವರು
ಜಲಸಂಪನ್ಮೂಲ ಇಲಾಖೆ
ಕರ್ನಾಟಕ ಸರ್ಕಾರ

ಜಲಸಂಪನ್ಮೂಲ ಇಲಾಖೆ
ಶ್ರೀ ಡಿ. ಕೆ. ಶಿವಕುಮಾರ್, ಸನ್ಮಾನ್ಯ ಮುಖ್ಯಮಂತ್ರಿರವರಿಂದ
ತುಂಗಭದ್ರಾ ಜಲಾಶಯಕ್ಕೆ ನೂತನವಾಗಿ ಅಳವಡಿಸಿದ 33 ಸ್ಪಿಲ್‌ವೇ ಗೇಟುಗಳ
ಲೋಕಾರ್ಪಣೆ ಕಾರ್ಯಕ್ರಮ
ದಿನಾಂಕ : 25-06-2026, ಗುರುವಾರ ಸಮಯ : ಬೆಳಿಗ್ಗೆ 11.00 ಗಂಟೆಗೆ
ಸ್ಥಳ : ಸರ್ಕಾರಿ ಹೈಸ್ಕೂಲ್ ಗ್ರೌಂಡ್, ಮುನಿರಾಬಾದ್, ತಾಲ್ಲೂಕು ಮತ್ತು ಜಿಲ್ಲೆ: ಕೊಪ್ಪಳ

ಘನ ಉಪಸ್ಥಿತಿ

ಶ್ರೀ ಸಿ. ಆರ್. ಪಾಟೀಲ್
ಸನ್ಮಾನ್ಯ ಕೇಂದ್ರ ಜಲಶಕ್ತಿ ಸಚಿವರು
ಭಾರತ ಸರ್ಕಾರ

ಶ್ರೀ ಎನ್. ಚಂದ್ರಬಾಬು ನಾಯ್ಡು
ಸನ್ಮಾನ್ಯ ಮುಖ್ಯಮಂತ್ರಿಗಳು
ಆಂಧ್ರಪ್ರದೇಶ ಸರ್ಕಾರ

ಶ್ರೀ ಎ. ರೇವಂತ್ ರೆಡ್ಡಿ
ಸನ್ಮಾನ್ಯ ಮುಖ್ಯಮಂತ್ರಿಗಳು
ತೆಲಂಗಾಣ ಸರ್ಕಾರ

ಡಾ. ಜಿ. ಪರಮೇಶ್ವರ
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಕೆ. ಪವನ್ ಕಲ್ಯಾಣ್
ಮಾನ್ಯ ಉಪ ಮುಖ್ಯಮಂತ್ರಿಗಳು
ಆಂಧ್ರಪ್ರದೇಶ ಸರ್ಕಾರ

ಶ್ರೀ ಮಲ್ಲು ಭಟ್ಟಿ ವಿಕ್ರಮಾರ್ಕ
ಮಾನ್ಯ ಉಪ ಮುಖ್ಯಮಂತ್ರಿಗಳು
ತೆಲಂಗಾಣ ಸರ್ಕಾರ

ಶ್ರೀ ವಿ. ಸೋಮಣ್ಣ
ಮಾನ್ಯ ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆಗಳ ರಾಜ್ಯ ಸಚಿವರು, ಭಾರತ ಸರ್ಕಾರ

ಶ್ರೀ ರಾಜ ಭೂಷಣ್ ಚೌಧರಿ
ಮಾನ್ಯ ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವರು
ಭಾರತ ಸರ್ಕಾರ

ಶ್ರೀ ಬಸವರಾಜ ಎಸ್. ಹೊರಟ್ಟಿ
ಮಾನ್ಯ ಸಭಾಪತಿಗಳು, ಕರ್ನಾಟಕ
ವಿಧಾನ ಪರಿಷತ್, ಬೆಂಗಳೂರು

ಶ್ರೀ ರಾಮಲಿಂಗಾ ರೆಡ್ಡಿ
ಮಾನ್ಯ ಸಚಿವರು, ಜಲ ಸಂಪನ್ಮೂಲ ಇಲಾಖೆ,
ಕರ್ನಾಟಕ ಸರ್ಕಾರ

ಶ್ರೀ ಬಸವರಾಜ ಬೊಮ್ಮಾಯಿ
ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಹಾಗೂ ಸಂಸದರು, ಹಾವೇರಿ-ಗದಗ ಲೋಕಸಭಾ ಕ್ಷೇತ್ರ

ಡಾ. ನಿಮ್ಮಲ ರಾಮ ನಾಯ್ಡು
ಮಾನ್ಯ ಸಚಿವರು, ಜಲ ಸಂಪನ್ಮೂಲ ಇಲಾಖೆ
ಆಂಧ್ರಪ್ರದೇಶ ಸರ್ಕಾರ

ಶ್ರೀ ಪಯ್ಯಾವುಲ ಕೇಶವ್
ಮಾನ್ಯ ಸಚಿವರು, ಹಣಕಾಸು, ಯೋಜನೆ, ವಾಣಿಜ್ಯತೆರಿಗೆ & ಸಂಸದೀಯ ವ್ಯವಹಾರಗಳ ಖಾತೆ, ಆಂಧ್ರಪ್ರದೇಶ ಸರ್ಕಾರ

ಶ್ರೀ ಎನ್. ಉತ್ತಮ್ ಕುಮಾರ್ ರೆಡ್ಡಿ
ಮಾನ್ಯ ಸಚಿವರು, ನೀರಾವರಿ ಇಲಾಖೆ
& ಸಿಎಡಿ, ತೆಲಂಗಾಣ ಸರ್ಕಾರ

ಶ್ರೀ ಸಲೀಂ ಅಹಮದ್
ಮಾನ್ಯ ಸರ್ಕಾರಿ ಮುಖ್ಯ ಸಚೇತಕರು
ಹಾಗೂ ಶಾಸಕರು (ವಿಧಾನ ಪರಿಷತ್)

ಮುಖ್ಯ ಅತಿಥಿಗಳು

ಶ್ರೀ ಕೆ. ರಾಜಶೇಖರ ಹಿಟ್ನಾಳ್
ಮಾನ್ಯ ಸಂಸದರು
ಕೊಪ್ಪಳ ಲೋಕಸಭಾ ಕ್ಷೇತ್ರ

ಶ್ರೀ ಪಿ. ಸಿ. ಗದ್ದಿಗೌಡರ
ಮಾನ್ಯ ಸಂಸದರು
ಬಾಗಲಕೋಟೆ ಲೋಕಸಭಾ ಕ್ಷೇತ್ರ

ಶ್ರೀ ಈ. ತುಕಾರಾಮ್
ಮಾನ್ಯ ಸಂಸದರು
ಬಳ್ಳಾರಿ ಲೋಕಸಭಾ ಕ್ಷೇತ್ರ

ಡಾ. ಪ್ರಭಾ ಮಲ್ಲಿಕಾರ್ಜುನ್
ಮಾನ್ಯ ಸಂಸದರು
ದಾವಣಗೆರೆ ಲೋಕಸಭಾ ಕ್ಷೇತ್ರ

ಶ್ರೀ ಜಿ. ಕುಮಾರ್ ನಾಯಕ್
ಮಾನ್ಯ ಸಂಸದರು
ರಾಯಚೂರು ಲೋಕಸಭಾ ಕ್ಷೇತ್ರ

ಡಾ. ಸೈಯದ್ ನಾಸಿರ್ ಹುಸೇನ್
ಮಾನ್ಯ ರಾಜ್ಯಸಭಾ ಸದಸ್ಯರು
ಬಳ್ಳಾರಿ

ಹಾಗೂ ಕೊಪ್ಪಳ, ವಿಜಯನಗರ, ಬಳ್ಳಾರಿ, ರಾಯಚೂರು ಮತ್ತು ಗದಗ ಜಿಲ್ಲಾ ವ್ಯಾಪ್ತಿಯ ಎಲ್ಲಾ ಚುನಾಯಿತ ಜನಪ್ರತಿನಿಧಿಗಳು.

ಅಧ್ಯಕ್ಷತೆ
ಶ್ರೀ ಕೆ. ರಾಘವೇಂದ್ರ ಹಿಟ್ನಾಳ್
ಮಾನ್ಯ ಶಾಸಕರು,
ಕೊಪ್ಪಳ ವಿಧಾನಸಭಾ ಕ್ಷೇತ್ರ

ಸ್ವಾಗತ ಕೋರುವವರು
ಶ್ರೀ ಗೌರವ್ ಗುಪ್ತ, ಭಾ.ಆ.ಸೇ.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಇಂಧನ ಮತ್ತು ಜಲಸಂಪನ್ಮೂಲ ಇಲಾಖೆ
ಶ್ರೀ ರಾಜೇಶ್ ಅಮ್ಮಿನಭಾವಿ, ಕೆ.ಇ.ಎಸ್.
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ
ಶ್ರೀ ಕೃಷ್ಣಮೂರ್ತಿ ಬಿ. ಕುಲಕರ್ಣಿ, ಕೆ.ಇ.ಎಸ್.
ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ
ಶ್ರೀ ಎಸ್. ಎನ್. ಪಾಂಡೆ, ಐ.ಇ.ಎಸ್.
ಮಾನ್ಯ ಅಧ್ಯಕ್ಷರು, ತುಂಗಭದ್ರಾ ಮಂಡಳಿ

ತಿಂಗಳೊಳಗೆ ಕೆಕೆಆರ್‌ಡಿಬಿ ಕಾರ್ಯದರ್ಶಿ ನೇಮಿಸಿ: ಹೈಕೋರ್ಟ್ ನಿರ್ದೇಶನ

• ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷರನ್ನಾಗಿ ಜಿಲ್ಲಾ ಉಸ್ತುವಾರಿ ಸಚಿವರನ್ನು ಮಾತ್ರ ನೇಮಕ ಮಾಡಬೇಕು ಎಂಬುದು ದೋಷಪೂರಿತ ವಾದ ಎಂದು ಕರ್ನಾಟಕ ಹೈಕೋರ್ಟ್ ಬುಧವಾರ ಹೇಳಿದ್ದು, ತಿಂಗಳಲ್ಲಿ ಸರ್ಕಾರದ ಕಾರ್ಯದರ್ಶಿ ಮಟ್ಟದ ಅಧಿಕಾರಿಯನ್ನು ಕೆಕೆಆರ್‌ಡಿಬಿ ಕಾರ್ಯದರ್ಶಿಯನ್ನಾಗಿ ನೇಮಿಸಬೇಕು ಎಂದು ನಿರ್ದೇಶಿಸಿದೆ.

ಕೆಕೆಆರ್‌ಡಿಬಿ ಅಧ್ಯಕ್ಷರಾಗಿರುವ ಡಾ.ಅಜಯ್ ಸಿಂಗ್ ನೇಮಕಾತಿ ಮತ್ತು ಕೊಪ್ಪಳ ಜಿಲ್ಲಾಧಿಕಾರಿ ನಳಿನ ಅತುಲ್ ಅವರನ್ನು ಕಾರ್ಯದರ್ಶಿಯನ್ನಾಗಿ ನೇಮಿಸಿರುವುದು ಹಾಗೂ ಕೆಕೆಆರ್‌ಡಿಬಿಯಲ್ಲಿನ ಅಕ್ರಮದ ತನಿಖೆಗೆ ನಿರ್ದೇಶಿಸುವಂತೆ ಕೋರಿ ಅಹಿಂದ ಚಿಂತಕರ ವೇದಿಕೆಯ ಸಾಯಿಬಣ್ಣಾ ಜಮಾದಾರ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು, ಮತ್ತು ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರ ವಿಭಾಗೀಯ ಪೀಠವು ಇತ್ಯರ್ಥಪಡಿಸಿದೆ. ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ 2013 ಆದೇಶಕ್ಕೆ ತಿದ್ದುಪಡಿ ಮಾಡಿ, 2020ರ ಜ. 27ರಂದು ಹೊರಡಿಸಿರುವ ಆದೇಶವನ್ನು ಉಲ್ಲೇಖಿಸಿದರು. ತಿದ್ದುಪಡಿಯಲ್ಲಿ ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳ ಪೈಕಿ ಒಂದು ಜಿಲ್ಲಾ ಉಸ್ತುವಾರಿ ಸಚಿವರು ಎಂದಿದ್ದನ್ನು ಕೈಬಿಟ್ಟು, ನಾಮನಿರ್ದೇಶನ ಮಾಡಲ್ಪಟ್ಟ ಸದಸ್ಯರನ್ನು ಅಧ್ಯಕ್ಷರನ್ನಾಗಿ ನೇಮಿಸಬಹುದು ಎಂದು ತಿದ್ದುಪಡಿ ಮಾಡಲಾಗಿದೆ ಎಂದು ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ ಪೀಠದ ಗಮನಕ್ಕೆ ತಂದರು.

ಇದನ್ನು ಒಪ್ಪಿದ ಪೀಠವು ಸಚಿವರನ್ನು ಮಾತ್ರ ಕೆಕೆಆರ್‌ಡಿಬಿ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕು ಎಂಬ ಅರ್ಜಿದಾರರ ವಾದ ದೋಷಪೂರಿತವಾಗಿದೆ ಎಂದಿತು. ಇನ್ನು ಕಾರ್ಯದರ್ಶಿ ನೇಮಕಕ್ಕೆ ಸಂಬಂಧಿಸಿದಂತೆ 4 ವಾರಗಳಲ್ಲಿ ಅಗತ್ಯವಾದ ಆದೇಶ ಹೊರಡಿಸಲಾಗುವುದು ಎಂದು ಅಡ್ವೊಕೇಟ್ ಜನರಲ್ ತಿಳಿಸಿದರು. ಈ ಹೇಳಿಕೆಯನ್ನು ದಾಖಲಿಸಿಕೊಂಡ ಪೀಠವು 4 ವಾರಗಳಲ್ಲಿ ಕೆಕೆಆರ್‌ಡಿಬಿಗೆ ಸೂಕ್ತ ಅರ್ಹತೆ ಹೊಂದಿರುವ ಅಧಿಕಾರಿಯನ್ನು ಕಾರ್ಯದರ್ಶಿಯನ್ನಾಗಿ ನೇಮಕ ಮಾಡಬೇಕು ಎಂದು ನಿರ್ದೇಶಿಸಿತು.

ರಾಮ ಬಾಣ


ಇನ್ನು ಅವರ ಪಾದರಕ್ಷೆಗಳಾದ ನಾವು ಒಟ್ಟಿಗೆ ಇರುವುದರಲ್ಲಿ ಅರ್ಥವಿಲ್ಲ... ನೀನು ಆ ಕಡೆ ಹೋಗು ! ನಾನು ಈ ಕಡೆ ಹೋಗ್ತೀನಿ !!
ಟಿಎಂಸಿಯಿಂದ ದೀದಿ ಉಚ್ಚಾಟನೆ !?
ರಾಮಕೃಷ್ಣ

ಸ್ವಾತಂತ್ರ್ಯ ದಿನಾಚರಣೆಗೆ ಸ್ಪರ್ಧೆ

• ಬೆಂಗಳೂರು: ಸ್ವಾತಂತ್ರ್ಯ ದಿನಾಚರಣೆ-2026ರ ಅಂಗವಾಗಿ ವಿದ್ಯಾರ್ಥಿಗಳಲ್ಲಿ ದೇಶಪ್ರೇಮ ಮತ್ತು ರಾಷ್ಟ್ರಭಕ್ತಿಯನ್ನು ಉತ್ತೇಜಿಸುವ ಉದ್ದೇಶದಿಂದ ಸಮಗ್ರ ಶಿಕ್ಷಣ ಕರ್ನಾಟಕವು ರಕ್ಷಣಾ ಸಚಿವಾಲಯ, ಮೈ ಗೌ (ಎಂವೈ, ಜಿಒವಿ) ಹಾಗೂ ಮೈ ಭಾರತ್ ಸಹಯೋಗದೊಂದಿಗೆ ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ವಿವಿಧ ಆನ್‌ಲೈನ್ ಸ್ಪರ್ಧೆಗಳನ್ನು ಆಯೋಜಿಸಿದೆ. ಸ್ಪರ್ಧೆಗಳಲ್ಲಿ ಭಾಗವಹಿಸಲು ಜು.17ರವರೆಗೆ ಅವಕಾಶ ಕಲ್ಪಿಸಲಾಗಿದೆ.

2047ರ ಒಳಗೆ ಅಭಿವೃದ್ಧಿ ಹೊಂದಿದ ಭಾರತದ ನಿರ್ಮಾಣದಲ್ಲಿ ಕೃತಕ ಬುದ್ಧಿಮತ್ತೆ (ಎಐ)ಯ ಪಾತ್ರ ವಿಷಯದ ಕುರಿತು ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ. 500 ರಿಂದ 600 ಪದಗಳ ಮಿತಿಯಲ್ಲಿ ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ (ದ್ವಿ ಭಾಷೀಯ) ಪ್ರಬಂಧ ಬರೆಯಬೇಕಿದ್ದು, ಮೊದಲ ಮೂರು ವಿಜೇತರಿಗೆ ತಲಾ 15 ಸಾವಿರ ರೂ. ನಗದು ಬಹುಮಾನ ನೀಡಲಾಗುತ್ತದೆ.

ಇದೇ ವೇಳೆ ಭಾರತ 1947ರಿಂದ ಭಾರತ 2047ರ ವಿಷಯದ ಅಡಿಯಲ್ಲಿ ಚಿತ್ರಕಲೆ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಮೊದಲ ಮೂರು ವಿಜೇತರಿಗೆ ತಲಾ 15 ಸಾವಿರ ರೂ. ಬಹುಮಾನ ಹಾಗೂ 20 ಸಮಾಧಾನಕರ ಬಹುಮಾನಗಳಾಗಿ ತಲಾ 5 ಸಾವಿರ ರೂ. ನೀಡಲಾಗುತ್ತದೆ. ವಿವಿಧ ಕ್ಷೇತ್ರಗಳ ಸಾಧನೆಗಳ ಕುರಿತು ಆನ್‌ಲೈನ್ ರಸಪ್ರಶ್ನೆ ಸ್ಪರ್ಧೆಯನ್ನೂ ಆಯೋಜಿಸಲಾಗಿದೆ. ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಲಭ್ಯವಿರುವ ಈ ಸ್ಪರ್ಧೆಯಲ್ಲಿ 5 ನಿಮಿಷಗಳ ಅವಧಿಯಲ್ಲಿ 20 ಪ್ರಶ್ನೆಗಳಿಗೆ ಉತ್ತರಿಸಬೇಕಿದೆ. ಮೊದಲ ಮೂರು ವಿಜೇತರಿಗೆ ತಲಾ 15 ಸಾವಿರ ರೂ. ಹಾಗೂ 50 ಸಮಾಧಾನಕರ ಬಹುಮಾನಗಳಾಗಿ ತಲಾ 5 ಸಾವಿರ ರೂ. ನೀಡಲಾಗುತ್ತದೆ. ಪ್ರಬಂಧ, ಚಿತ್ರಕಲೆ ಮತ್ತು ರಸಪ್ರಶ್ನೆ ಸ್ಪರ್ಧೆಗಳಲ್ಲಿ ಆಯ್ಕೆಯಾಗುವ ತಲಾ 200 ಅಗ್ರ ಸ್ಪರ್ಧಿಗಳಿಗೆ ಅವರೊಬ್ಬ ಸಹಚರರೊಂದಿಗೆ ಆ.15ರಂದು ದಿಲ್ಲಿಯ ಕೆಂಪುಕೋಟೆಯಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆಯನ್ನು ವೀಕ್ಷಿಸಲು ಇ-ಆಹ್ವಾನ ಪತ್ರಿಕೆ ನೀಡಲಾಗುತ್ತದೆ. ಆದರೆ ಪ್ರಯಾಣ, ವಸತಿ ಮತ್ತು ಆಹಾರ ವೆಚ್ಚವನ್ನು ಸ್ಪರ್ಧಿಗಳೇ ಭರಿಸಬೇಕಾಗುತ್ತದೆ ಎಂದು ಸಮಗ್ರ ಶಿಕ್ಷಣ ಕರ್ನಾಟಕ ಸೂಚನೆ ನೀಡಿದೆ.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ,
ದಕ್ಷಿಣಾಯನ, ಗ್ರೀಷ್ಮ ಋತು,
ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ,
ನಕ್ಷತ್ರ: ಸ್ವಾತಿ

ದಿನದ ಮಾತು

ಕೆಡುಕಿನ ಮನೋಭಾವದವನಿಗೆ ಸಂತಸವೆಂಬುದು ಯಾವಾಗಲೂ ಮರೀಚಿಕೆಯೇ.

▲ ಗೌತಮ ಬುದ್ಧ

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಧರ್ಮದ ಬಗ್ಗೆ ಆಳವಾಗಿ ಅಧ್ಯಯನ ನಡೆಸಿ ಇನ್ನೊಬ್ಬರಿಗೆ ಮಾರ್ಗದರ್ಶನ ಮಾಡಬೇಕೇ ಹೊರತು ಅಲ್ಪ ಜ್ಞಾನಿಗಳು ತಾವು ಹೇಳಿದ್ದೇ ಧರ್ಮ ಅಂತ ಬಿಂಬಿಸಿಕೊಂಡು ಸಮಾಜವನ್ನು ತಪ್ಪು ದಾರಿಗೆ ಎಳೆಯುವುದು ಸರಿಯಲ್ಲ.

- ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ

- ಧರ್ಮವನ್ನು ವ್ಯಾಪಾರವನ್ನಾಗಿ ಮಾಡಿಕೊಳ್ಳುವ ಮಂದಿಗೆ ಅದೆಲ್ಲ ಬೇಕಿಲ್ಲ, ವ್ಯಾಪಾರವೇ ಅವರ ಧರ್ಮ!

ದಿನ ಭವಿಷ್ಯ

ಮೇಷ
ನಿಮ್ಮ ನಡೆ ಕೆಲವರಿಗೆ ತಪ್ಪರ್ಥ ಮೂಡಿಸಬಹುದು. ಅಸಮಾಧಾನ ತರುವ ಬೆಳವಣಿಗೆ. ಆಪ್ತ ಬಂಧು ಭೇಟಿಯಿಂದ ಸಮಾಧಾನ.

ವೃಷಭ
ಕೆಲಸದಲ್ಲಿ ಅಧಿಕ ಒತ್ತಡ. ತಾಳ್ಮೆಯ ವರ್ತನೆ ಅಗತ್ಯ. ಇತರರ ಪ್ರಲೋಭನೆಗೆ ಒಳಗಾಗಿ ವರ್ತಿಸಬೇಡಿ. ಶೀತ, ಜ್ವರದ ಸಮಸ್ಯೆ ಕಾಡಬಹುದು.

ಮಿಥುನ
ಕೆಲದಿನಗಳ ಒತ್ತಡ ನಿವಾರಣೆ. ಮನಸ್ಸಿಗೆ ನಿರಾಳತೆ. ಕೆಲವು ಬೆಳವಣಿಗೆ ಅದಕ್ಕೆ ಕಾರಣ. ಆಪ್ತರ ಜತೆ ಮಾತುಕತೆ ನೆಮ್ಮದಿ ತರಲಿದೆ.

ಕಟಕ
ಆರ್ಥಿಕ ಪ್ರಗತಿ ಉತ್ತಮ. ಆದರೆ ಆಪ್ತರ ಜತೆ ಭಿನ್ನಾಭಿಪ್ರಾಯ ಉಂಟಾದೀತು. ಸ್ನೇಹಿತ ನಿಮ್ಮ ವಿರೋಧಿಯಾಗಿ ಬದಲಾಗಬಹುದು.

ಸಿಂಹ
ಅನ್ಯರ ಮೆಚ್ಚಿಸಲು ಅನವಶ್ಯ ಪ್ರಯತ್ನ ಬೇಡ. ನಿಮ್ಮ ಕಾರ್ಯ ನಿಷ್ಠೆಯಿಂದ ಮಾಡಿ. ಕೌಟುಂಬಿಕ ಬಿಕ್ಕಟ್ಟು ಪರಿಹಾರ ಕಷ್ಟವಾದೀತು.

ಕನ್ಯಾ
ಮನಸ್ಸಿಗೆ ನಿರಾಳತೆ ತರುವಂತಹ ಬೆಳವಣಿಗೆ. ಕಾರ್ಯ ಸಾಫಲ್ಯ, ವಿರಸ ಮುಕ್ತಿ. ಅನಿರೀಕ್ಷಿತ ಖರ್ಚು ಬಂದೀತು. ಆತ್ಮೀಯ ಬಂಧು ಭೇಟಿ.

ತುಲಾ
ನಡೆನುಡಿಯಲ್ಲಿ ಎಚ್ಚರ ವಹಿಸಿ. ಜಗಳಕ್ಕೆ ಆಸ್ಪದ ಕೊಡಬೇಡಿ. ಗೌರವಕ್ಕೆ ಕುಂದು ತರುವ ಬೆಳವಣಿಗೆ ಸಂಭವಿಸಬಹುದು.

ವೃಶ್ಚಿಕ
ಜೀವನದ ಹೊಸ ಪಾಠ ಕಲಿಯುವಂತಹ ಪ್ರಸಂಗ ಸಂಭವ. ಬಿಕ್ಕಟ್ಟು ಎದುರಾದರೂ ಬಳಿಕ ಪರಿಹಾರ ಕಂಡು ನೆಮ್ಮದಿ ಉಂಟಾಗಲಿದೆ.

ಧನು
ನಿಮ್ಮ ನಿರ್ಧಾರ ಬೇರೆಯವರ ಮೇಲೆ ಹೇರಬೇಡಿ. ಅದು ವಿರಸಕ್ಕೆ ಹೇತುವಾದೀತು. ಕೌಟುಂಬಿಕ ಶಾಂತಿಗೆ ಭಂಗ. ಆರ್ಥಿಕ ಕೊರತೆ.

ಮಕರ
ನಿಮ್ಮ ಪಾಲಿಗೆ ಮಹತ್ವದ ದಿನ. ಬಯಸಿದ ಬೆಳವಣಿಗೆ ಸಂಭವ. ದೊಡ್ಡ ಸಮಸ್ಯೆಯೊಂದು ನಿವಾರಣೆ, ಕೆಲಸ ಸುಲಲಿತ. ಧನಪ್ರಾಪ್ತಿ.

ಕುಂಭ
ಪ್ರಮುಖ ವಿಷಯದಲ್ಲಿ ನಿಮ್ಮ ನಿಲುವು ಬದಲಿಸುವ ಸನ್ನಿವೇಶ ಉಂಟಾದೀತು. ದುಡುಕಿನ ನಿರ್ಧಾರ ತಾಳದಿರಿ. ಎಲ್ಲರ ಜತೆ ಸೌಹಾರ್ದತೆ ಇರಲಿ.

ಮೀನ
ಈ ದಿನ ಪ್ರಗತಿ ಸಾಧಿಸಿದರೂ ನಿಮಗೆ ಮಾತ್ರ ತೃಪ್ತಿಯಿಲ್ಲ. ನಿಮ್ಮ ಮನಸ್ಸು ಬೇರೇನನ್ನೋ ಬಯಸುತ್ತದೆ. ಮನೆಯಲ್ಲಿ ಕಲಹವಾದೀತು.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 2,7,5,1

ನಾಲ್ವರು ಜಲಸಮಾಧಿ

• ಮಂಡ್ಯ: ಕಾವೇರಿ ನದಿಯಲ್ಲಿ ಸೆಲ್ಫಿ ತೆಗೆಯಲು ಹೋದ ಒಂದೇ ಕುಟುಂಬದ ಓರ್ವ ವ್ಯಕ್ತಿ, ನಾಲ್ಕು ಮಹಿಳೆಯರು ಸೇರಿದಂತೆ ಐವರು ಜಲ ಸಮಾಧಿಯಾಗಿರುವ ಘಟನೆ ಮಳವಳ್ಳಿ ತಾಲೂಕಿನ ಮುತ್ತತ್ತಿ ಬಳಿ ನಡೆದಿದೆ. ಚನ್ನಪಟ್ಟಣ ತಾಲೂಕಿನ ಬ್ಯಾಡರಹಳ್ಳಿಯ ಚೈತ್ರಾ (20), ಶ್ವೇತಾ(38), ವಿಜಯಮ್ಮ (50), ಪ್ರಿಯಾಂಕ(28) ಹಾಗೂ ಮಹೇಶ್ (30) ಎಂಬುವರೇ ಮೃತಪಟ್ಟ ದುರ್ದೈವಿಗಳಾಗಿದ್ದಾರೆ. ಮುತ್ತತ್ತಿಯ ಮುತ್ತುರಾಯಸ್ವಾಮಿ ದೇವಾಲಯಕ್ಕೆ ಆಗಮಿಸಿದ್ದ ಮಹೇಶ್ ಇತರರು, ಬುಧವಾರ ಸಂಜೆ ಸುಮಾರು 5 ಗಂಟೆ ಸಮಯದಲ್ಲಿ ಕಾವೇರಿ ನದಿ ಬಳಿ ಸೆಲ್ಫಿ ತೆಗೆದುಕೊಳ್ಳಲು ಹೋಗಿದ್ದಾರೆ. ಕಾಲೇಜು ನದಿಯಲ್ಲಿ ಬಿದ್ದು ಜಲಸಮಾಧಿಯಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಉ.ಪ್ರ.ಜಾಗತಿಕ ಬೆಳವಣಿಗೆ ಸಂವಾದ: ಹೂಡಿಕೆದಾರರ ರೋಡ್ ಶೋ

ಉ.ಪ್ರ.ಪ್ರಗತಿಗೆ ಯೋಗಿ ಹೆಮ್ಮೆ

• ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತವು ವಿಕಾಸದ ಹೊಸ ಆಯಾಮ ಸೃಷ್ಟಿಸಿದೆ. ಭಾರತದ ಕುರಿತ ಜಗತ್ತಿನ ದೃಷ್ಟಿಕೋನವನ್ನು ಅವರು ಬದಲಿಸಿದ್ದಾರೆ. ಜಾಗತಿಕ ಹೂಡಿಕೆಯನ್ನು ಭಾರತ ಆಕರ್ಷಿಸುತ್ತಿದೆ. ಉತ್ತರ ಪ್ರದೇಶವು ಕಳೆದ 9 ವರ್ಷಗಳಲ್ಲಿ ಭಾರತದ ಪ್ರಗತಿಯಲ್ಲಿ ಸಹಭಾಗಿಯಾಗಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದರು.

ನಗರದ ಖಾಸಗಿ ಹೋಟೆಲಿನಲ್ಲಿ ಬುಧವಾರ ಆಯೋಜಿಸಿದ ಉತ್ತರ ಪ್ರದೇಶ ಜಾಗತಿಕ ಬೆಳವಣಿಗೆ ಸಂವಾದ- 2026 ಹೂಡಿಕೆದಾರರ ರೋಡ್ ಶೋ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಳೆದ 9 ವರ್ಷಗಳ ಉ.ಪ್ರದೇಶದ ಪ್ರಗತಿಯನ್ನು ಅವಲೋಕನ ಮಾಡಬೇಕು. ಇದಕ್ಕಾಗಿ ಖುದ್ದು ಉ.ಪ್ರದೇಶಕ್ಕೆ ಬಂದು ನಮ್ಮ ರಾಜ್ಯದ ವಿಕಾಸವನ್ನು ಕಣ್ತುಂಬಿಕೊಳ್ಳಬಹುದು. 9 ವರ್ಷಕ್ಕೂ ಮುನ್ನ ಯುಪಿಯಲ್ಲಿ ಸಮರ್ಥ ಆಡಳಿತವಿರಲಿಲ್ಲ, ರಾಜ್ಯದಲ್ಲಿ ಅಭಿವೃದ್ಧಿ ಹೆಸರೇ ಇರಲಿಲ್ಲ. ಉತ್ತರ ಭಾರತದ ರೋಗಗ್ರಸ್ತ ರಾಜ್ಯಗಳಲ್ಲಿ ಉ.ಪ್ರದೇಶವೂ ಒಂದಾಗಿತ್ತು. ಕೆಟ್ಟ ವಾತಾವರಣ ಅಲ್ಲಿತ್ತು. ಈಗಿನ ಉತ್ತರ ಪ್ರದೇಶದ ಬಗ್ಗೆ ಹೇಳಲು ನನಗೆ ಬಹಳ ಸಂತೋಷವಾಗುತ್ತಿದೆ. ಈಗ ಅಲ್ಲಿ ಎಲ್ಲವೂ ಇದೆ, ಅಲ್ಲಿರುವುದು ಬೇರೆ ಕಡೆ ಇಲ್ಲ, ಬೇರೆ ಕಡೆ ಇರುವುದೆಲ್ಲವೂ ಅಲ್ಲಿನ ಯಾವುದಾದರೊಂದು ಕಡೆ ಸಿಗುತ್ತದೆ ಎಂದು ವಿವರಿಸಿದರು.

ಕೇವಲ ಕೈಗಾರಿಕೆಗಳಿಗೆ ಮಾತ್ರವಲ್ಲದೇ ಉತ್ತರ ಪ್ರದೇಶದಲ್ಲಿ ಕೃಷಿಗೂ ಉತ್ತಮ ಅವಕಾಶಗಳಿವೆ. ಐದು ಕೃಷಿ ವಿಶ್ವವಿದ್ಯಾಲಯಗಳಿವೆ. ಕೃಷಿ ಕ್ಷೇತ್ರದಲ್ಲೂ ಪ್ರಗತಿ ಸಾಧಿಸಿದೆ. ಬಂಡವಾಳ ಹೂಡಲು ಉತ್ತರ ಪ್ರದೇಶ ಹೇಳಿ ಮಾಡಿಸಿದಂತಿದೆ. ಭಾರತ, ಉತ್ತರ ಪ್ರದೇಶದ ಪ್ರಗತಿಯಲ್ಲಿ ಉದ್ಯಮಿಗಳ ಪಾತ್ರ ದೊಡ್ಡದು. ಏಕಗವಾಕ್ಷಿ ವ್ಯವಸ್ಥೆ ಉದ್ಯಮಿಗಳಿಗೆ ಸಿಗಲಿದೆ, ಉದ್ಯಮಗಳಿಗೆ ಭಾರೀ ಸುರಕ್ಷೆ ಒದಗಿಸಲಾಗುತ್ತದೆ. ಆದ್ದರಿಂದ ಉತ್ತರ ಪ್ರದೇಶಕ್ಕೆ ಬನ್ನಿ ಎಂದು ಯೋಗಿ ಆದಿತ್ಯನಾಥ್ ಆಹ್ವಾನಿಸಿದರು.

ಕಾರ್ಯಕ್ರಮದಲ್ಲಿ ಉತ್ತರ ಪ್ರದೇಶದ ವಿತ್ತ ಸಚಿವ ಸುರೇಶ್ ಕುಮಾರ್ ಖನ್ನಾ ಹಾಗೂ ಉ.ಪ್ರದೇಶ ಸರ್ಕಾರದ ಉನ್ನತ ಅಧಿಕಾರಿಗಳು ಉಪಸ್ಥಿತರಿದ್ದರು.

ಉತ್ತರ ಪ್ರದೇಶವು ಪ್ರಸಕ್ತ ಸುರಕ್ಷಿತವಾಗಿದೆ. ನಮ್ಮ ಆರ್ಥಿಕ ನೀತಿಗಳಿಂದ ಜಗತ್ತಿಗೆ ನಮ್ಮ ಮೇಲೆ ವಿಶ್ವಾಸ ಬರುತ್ತಿದೆ. ಕಡಿಮೆ ಬೆಲೆ ಭೂಮಿ ಸಿಗುತ್ತಿದೆ. ಉತ್ತಮ ಸಂಪರ್ಕ ವ್ಯವಸ್ಥೆ, ಮೂಲ ಸೌಕರ್ಯವಿದೆ. ರಾಜ್ಯದ ಆರ್ಥಿಕತೆಯನ್ನು 1 ಟ್ರಿಲಿಯನ್ ಡಾಲರ್‌ಗೇರಿಸಲು ಗುರಿ ಇಟ್ಟುಕೊಳ್ಳಲಾಗಿದೆ.

■ ಸುರೇಶ್ ಕುಮಾರ್ ಖನ್ನಾ,
ಉತ್ತರ ಪ್ರದೇಶದ ವಿತ್ತ ಸಚಿವ

ಡಬಲ್ ಡೆಕ್ಕರ್ ಸರ್ಕಾರದಿಂದ ಅಭಿವೃದ್ಧಿ

ಕಳೆದ 9 ವರ್ಷಗಳಿಂದ ಉತ್ತರ ಪ್ರದೇಶದಲ್ಲಿ ಡಬಲ್ ಇಂಜಿನ್ ಸರ್ಕಾರ ಸುರಕ್ಷೆ ಹೆಚ್ಚಿಸಿದೆ. ಉತ್ತರ ಪ್ರದೇಶದ ಆರ್ಥಿಕತೆ ಮೂರು ಪಟ್ಟು ಹೆಚ್ಚಾಗಿದೆ, ತಲಾದಾಯ ಮೂರು ಪಟ್ಟು ಜಾಸ್ತಿಯಾಗಿದೆ. ಹೂಡಿಕೆ ಅವಕಾಶಗಳು ಹಿಂದಿಗಿಂತಲೂ ಹೆಚ್ಚಾಗಿವೆ. 75 ಸಾವಿರ ಎಕರೆಗಳಷ್ಟು ಭೂ ಬ್ಯಾಂಕ್ ಉತ್ತರ ಪ್ರದೇಶದಲ್ಲಿದೆ. ದೇಶದ ಅತೀ ದೊಡ್ಡ ಗಂಗಾ ಎಕ್ಸ್‌ಪ್ರೆಸ್‌ವೇ, ದೇಶದ ಮೊದಲ ಒಳನಾಡು ಜಲಮಾರ್ಗ, ಐದು ಅಂತಾರಾಷ್ಟ್ರೀಯ ಮತ್ತು 16 ದೇಶೀಯ ವಿಮಾನ ನಿಲ್ದಾಣಗಳಿವೆ. ಇನ್ನೂ ಐದು ವಿಮಾನ ನಿಲ್ದಾಣಗಳ ನಿರ್ಮಾಣ ನಡೆಯುತ್ತಿದೆ. ಎರಡು ಐಐಟಿಗಳಿವೆ, ಕೌಶಲಯುತ ಮಾನವಶಕ್ತಿ ಇದೆ. ದೇಶದ ಮೊದಲ ಸ್ಪೀಡ್ ರೈಲು ದಿಲ್ಲಿ ಮೀರತ್ ನಡುವೆ ಓಡುತ್ತಿದೆ ಎಂದು ತಿಳಿಸಿದರು.

ಮತ್ತೊಂದು ಗಾಲ್ಫ್ ಕೋರ್ಸ್ ನಿರ್ಮಿಸಿ

• ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಮತ್ತೊಂದು ಗಾಲ್ಫ್ ಕೋರ್ಸ್ ನಿರ್ಮಿಸಿದರೆ ಕ್ಲಬ್‌ನ 150 ವರ್ಷಗಳ ಸಂಭ್ರಮಕ್ಕೆ ಅರ್ಥ ಬರುತ್ತದೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಸ್ಯಾಂಕಿ ರಸ್ತೆಯ ಗಾಲ್ಫ್ ಕ್ಲಬ್ ನಲ್ಲಿ ಬುಧವಾರ ನಡೆದ ಬೆಂಗಳೂರು ಗಾಲ್ಫ್ ಕ್ಲಬ್‌ನ 150ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, 150 ವರ್ಷದ ಇತಿಹಾಸವಿರುವ ಗಾಲ್ಫ್ ಕ್ಲಬ್, ಇಷ್ಟು ಹೊತ್ತಿಗೆ ಬೆಂಗಳೂರಿನಲ್ಲಿ ಮೂರ್ನಾಲ್ಕು ಗಾಲ್ಫ್ ಕೋರ್ಸ್ ನಿರ್ಮಿಸಬೇಕಾಗಿತ್ತು ಎಂದು ಅಭಿಪ್ರಾಯಪಟ್ಟರು.

ಬೊಮ್ಮಾಯಿ ಅವರಾಗಿದ್ದ ಕಾರಣಕ್ಕೆ ನಿಮಗೆ ನೀಡಲಾಗಿರುವ ಅನುಮತಿಯನ್ನು ನವೀಕರಿಸಿದ್ದಾರೆ. ನಾನಾಗಿದ್ದರೆ ನವೀಕರಣ ಮಾಡುತ್ತಿರಲಿಲ್ಲ, ನಾನು ಅನುಮತಿ ನವೀಕರಿಸಬೇಕಾದರೆ ಮುಂದಿನ ಪೀಳಿಗೆಗೆ ಒಂದೆರಡು ಗಾಲ್ಫ್ ಕೋರ್ಸ್ ಆರಂಭಿಸಿ ಎಂದು ಷರತ್ತು ಹಾಕುತ್ತಿದ್ದೆ. ನಾನು ಇತಿಹಾಸ ಓದುವುದಕ್ಕಿಂತ ಇತಿಹಾಸ ಬರೆಯುವುದರಲ್ಲಿ ಆಸಕ್ತಿ ಹೊಂದಿದ್ದೇನೆ. ಟೀಕೆಗಳು ಸಾಯುತ್ತವೆ ಕೆಲಸಗಳು ಉಳಿಯುತ್ತವೆ. ಟೀಕೆ ಮಾಡುವವರು ಮಾಡುತ್ತಾರೆ ಎಂದರು.

ಗಾಲ್ಫ್ ಕ್ಲಬ್ 150 ವರ್ಷ ಪೂರ್ಣಗೊಳಿಸಿದೆ. ಈ ಸಂದರ್ಭದಲ್ಲಿ ಎಲ್ಲರಿಗೂ ಅಭಿನಂದನೆಗಳು. ನಾನು ಮುಖ್ಯಮಂತ್ರಿಯಾದ ಬಳಿಕ ನಾನು ಭಾಗವಹಿಸುತ್ತಿರುವ ಮೊದಲ ಖಾಸಗಿ ಕಾರ್ಯಕ್ರಮ. ನಾನು ಸಿಎಂ ಎನ್ನುವುದಕ್ಕಿಂತ ಇಲ್ಲಿನ ಸದಸ್ಯ. ಹೀಗಾಗಿ ಬಂದಿದ್ದೇನೆ. ನನ್ನ ಮಾತು ನಿಮಗೆ ಹಿತವಾಗಿರುವುದಿಲ್ಲ, ನಿಮ್ಮ ಚಪ್ಪಾಳೆ ಬೇಡ. ನಿಮಗೆ ಇಷ್ಟವಾಗುತ್ತದೆಯೋ ಇಲ್ಲವೋ ಆದರೆ ನಾನು ಸತ್ಯ ನುಡಿಯಬೇಕು ಎಂದರು.

ಪಾರ್ಕ್ ನಿರ್ಮಾಣ

ಬೆಂಗಳೂರಿನಲ್ಲಿ ಹಸಿರು ಹೆಚ್ಚಿಸಲು ನನಗೆ ಆಸಕ್ತಿ ಇದೆ. ಕಬ್ಬನ್ ಪಾರ್ಕ್, ಲಾಲ್ ಬಾಗ್ ಬಿಟ್ಟರೆ ಬೇರೆ ಎಲ್ಲಿದೆ ಜಾಗ, ಹೀಗಾಗಿ ಅರಣ್ಯ ಇಲಾಖೆ ಜೊತೆ ಚರ್ಚೆ ಮಾಡಿ ಬೆಂಗಳೂರಿನ 18 ಕಿ.ಮೀ ಸುತ್ತಮುತ್ತ ಎಲ್ಲೆಲ್ಲಿ ಅರಣ್ಯ ಇಲಾಖೆ ಜಾಗ ಇದೆಯೋ ಅವುಗಳನ್ನು ಖಾಲಿ ಬಿಡುವ ಬದಲು ಉದ್ಯಾನವನ ನಿರ್ಮಿಸಿ ಎಂದು ಸೂಚಿಸಿದ್ದೇನೆ ಎಂದರು.

ಉದ್ಯಮಶೀಲತೆಗೆ ಉತ್ತೇಜನ ಉದ್ದೇಶ

ಮಹಿಳಾ ಉದ್ಯಮಿಗಳು ಆತ್ಮವಿಶ್ವಾಸದಿಂದ ಉದ್ಯಮ ಕ್ಷೇತ್ರಕ್ಕೆ ಪ್ರವೇಶಿಸಿ ಜಾಗತಿಕ ಮಟ್ಟದಲ್ಲಿ ತಮ್ಮ ಸ್ಥಾನವನ್ನು ನಿರ್ಮಿಸಿಕೊಳ್ಳಬೇಕು.

■ ಕುಮಾರಿ ಸಾಧ್ವಿ ಸೈಲ್,
ಫೆಮಿನಾ ಮಿಸ್ ಇಂಡಿಯಾ 2026ರ ವಿಜೇತೆ

• ಬೆಂಗಳೂರು: ಕರ್ನಾಟಕದಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸುವ ಹಾಗೂ ಉದ್ಯೋಗ ಸೃಷ್ಟಿಗೆ ನೆರವಾಗುವ ಸಮಗ್ರ ವ್ಯವಸ್ಥೆಗಳ ಅಗತ್ಯತೆ ಇದೆ ಎಂದು ಕೆಎಸ್‌ಎಂಸಿಎ ಅಧ್ಯಕ್ಷ ಹಾಗೂ ಶಾಸಕ ಸತೀಶ ಕೃಷ್ಣ ಸೈಲ್ ತಿಳಿಸಿದರು.

ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಕೆಎಸ್‌ಎಂಸಿಎ) ವತಿಯಿಂದ ಸಂಪತ್ತಿ-ದ ಮಂತ್ರ ಫಾರ್ ಅಬಂಡನ್ಸ್ ಎಂಬ ಸಮಗ್ರ ವ್ಯವಹಾರ ಪರಿಸರ ಕಾರ್ಯಕ್ರಮಕ್ಕೆ ನೀಡಿ ಮಾತನಾಡಿ, ಸ್ಟಾರ್ಟ್‌ಅಪ್‌ಗಳು, ಎಂಎಸ್‌ಎಂಇಗಳು, ಮಹಿಳಾ ಉದ್ಯಮಿಗಳು, ವಿದ್ಯಾರ್ಥಿಗಳು, ಶಿಕ್ಷಣ ಸಂಸ್ಥೆಗಳು, ಮಾರ್ಗದರ್ಶಕರು, ಹೂಡಿಕೆದಾರರು ಹಾಗೂ ಕೈಗಾರಿಕಾ ವಲಯವನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮ ರೂಪಿಸಲಾಗಿದೆ ಎಂದು ತಿಳಿಸಿದರು.

ಕೆಎಸ್‌ಎಂಸಿಎ ವ್ಯವಸ್ಥಾಪಕ ನಿರ್ದೇಶಕ ಬಿ. ಆನಂದ್ ಮಾತನಾಡಿ, ಸರ್ಕಾರದ ಮಾರ್ಗದರ್ಶನ ಮತ್ತು ಬೆಂಬಲದೊಂದಿಗೆ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಉದ್ಯಮಿಗಳ ಬೆಳವಣಿಗೆಗೆ ಅಗತ್ಯವಾದ ಮಾರ್ಗದರ್ಶನ, ಮಾರುಕಟ್ಟೆ ಸಂಪರ್ಕ, ಬ್ರ್ಯಾಂಡಿಂಗ್ ಮತ್ತು ವ್ಯವಹಾರ ವಿಸ್ತರಣೆಗೆ ಕೆಎಸ್‌ಎಂಸಿಎ ಸದಾ ಬದ್ಧವಾಗಿದೆ ಎಂದು ತಿಳಿಸಿದರು.

ಸ್ಮಿತಾ ಪ್ರಭು ಮಾತನಾಡಿ, ಸಂಪತ್ತಿ ಕಾರ್ಯಕ್ರಮದ ಸಮಗ್ರ ಪರಿಚಯವನ್ನು ನೀಡಿದರು. ಸ್ಟಾರ್ಟ್‌ಅಪ್‌ಗಳು, ಎಂಎಸ್‌ಎಂಇಗಳು, ಮಹಿಳಾ ಉದ್ಯಮಿಗಳು ಹಾಗೂ ಶಿಕ್ಷಣ ಸಂಸ್ಥೆಗಳಿಗೆ ಲಭ್ಯವಾಗುವ ಅವಕಾಶಗಳ ಕುರಿತು ವಿವರಿಸಿದರು. ವಿಡಿಯೋ ಸಂದೇಶದ ಮೂಲಕ ಮಾತನಾಡಿದ ಮೆಂಟರ್ ಆನ್ ರೋಡ್ ಆ್ಯಂಪ್ ಗ್ಲೋಬಲ್ ನೆಟ್‌ವರ್ಕ್ ಸಂಸ್ಥಾಪಕ ಡಾ. ಜಗತ್ ಶಾ, ಜಾಗತಿಕ ಮಾರುಕಟ್ಟೆ ಅವಕಾಶಗಳು, ಮಾರ್ಗದರ್ಶನದ ಮಹತ್ವ, ರಫ್ತು ಆಧಾರಿತ ಬೆಳವಣಿಗೆ ಹಾಗೂ ವ್ಯವಹಾರ ಜಾಲತಾಣಗಳ ಅಗತ್ಯತೆಯನ್ನು ವಿವರಿಸಿದರು.

ಸಂಪತ್ತಿ ಭವನ ಸಮಗ್ರ ವ್ಯವಹಾರ ಕೇಂದ್ರ: ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ಸಂಪತ್ತಿ ಭವನ ಎಂಬ ಸಮಗ್ರ ವ್ಯವಹಾರ, ನವೀನತೆ ಮತ್ತು ಉದ್ಯಮಶೀಲತಾ ಕೇಂದ್ರ ಘೋಷಿಸಲಾಯಿತು. ಇದು ಉದ್ಯಮಿಗಳು, ಹೂಡಿಕೆದಾರರು, ಮಾರ್ಗದರ್ಶಕರು, ಶಿಕ್ಷಣ ಸಂಸ್ಥೆಗಳು ಮತ್ತು ಕೈಗಾರಿಕಾ ವಲಯವನ್ನು ಸಂಪರ್ಕಿಸುವ ಪ್ರಮುಖ ವೇದಿಕೆಯಾಗಲಿದೆ. ಸಂಪತ್ತಿಯ ಮುಖ್ಯ ಸಲಹೆಗಾರರಾದ ಎಂ.ಕೆ.ಎಚ್.ಎಚ್. ಜಿಲಾನಿ, ಬ್ರಿಕ್ಸ್ ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿಯ ಅಧ್ಯಕ್ಷ ಸಮೀಪ್ ಶಾಸ್ತ್ರಿ, ಪೇಯು (PayU) ಸಂಸ್ಥೆಯ ನಿರ್ದೇಶಕ ಪ್ರೀತಂ ಪ್ರಜಾಪತಿ.

ಜು.1ರಿಂದ ವಿಬಿ ಜಿರಾಮ್‌ಜಿ

ಪುಟ ೧➡ ಆದರೆ ಈಗ ಒಂದೇ ವರ್ಷಕ್ಕೆ 3,806ಕೋಟಿ ರೂ. ವೆಚ್ಚ ಭರಿಸುವ ಸ್ಥಿತಿ ಬಂದಿದೆ. ಇದು ರಾಜ್ಯದ ಮೇಲೆ ಆಗುವ ದೊಡ್ಡ ಹೊರೆ ಎಂದು ತಿಳಿಸಿದರು. ಕೇಂದ್ರ ಸರ್ಕಾರ ವಿಬಿ ಜಿ ರಾಮ್‌ಜಿನಲ್ಲಿ ರಾಜ್ಯಕ್ಕೆ 5,709 ಕೋಟಿ ರೂ. ಹಂಚಿಕೆ ಮಾಡಿದೆ. ಗ್ರಾಮೀಣ ಜನರಿಗೆ ತೊಂದರೆ ಆಗದಂತೆ ಯೋಜನೆಗೆ ರಾಜ್ಯ ಸರ್ಕಾರದ ವತಿಯಿಂದ 3,806 ಕೋಟಿ ರೂ. ಭರಿಸಬೇಕಾಗುತ್ತದೆ. ಈ ಬಗ್ಗೆ ಈಗಾಗಲೇ ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದು, ಅವರು ಸಮ್ಮತಿಸಿದ್ದಾರೆ ಎಂದರು. ಜತೆಗೆ ಕೇಂದ್ರ ಸರ್ಕಾರ ಹಂತ ಹಂತವಾಗಿ ಕನಿಷ್ಠ 80:20ರ ಅನುಪಾತದಲ್ಲಾದರೂ ರಾಜ್ಯಗಳ ನೆರವಿಗೆ ನಿಲ್ಲಬೇಕು ಎಂದು ಆಗ್ರಹಿಸಲಾಗುತ್ತಿದೆ ಎಂದರು. ಕೇಂದ್ರ ಸರ್ಕಾರ ಅವೈಜ್ಞಾನಿಕವಾಗಿ ಬೇಸಾಯದ ಸಮಯದಲ್ಲಿ 60 ದಿನ ಕಾಲ ಉದ್ಯೋಗ ನೀಡದಿರುವಂತೆ ಸೂಚಿಸಿದೆ. ಇದು ಗ್ರಾಮೀಣ ಕುಟುಂಬಗಳಿಗೆ ಮಾರಕವಾಗಿದೆ. ಕಾರಣ ಈಗ ಅತ್ಯಾಧುನಿಕ ಕೃಷಿ ಯಂತ್ರೋಪಕರಣ ಬಂದಿದ್ದು, ಗ್ರಾಮೀಣ ಕುಟುಂಬಗಳಿಗೆ ಬೇಸಾಯದ ಸಮಯದಲ್ಲೂ ಕೃಷಿ ಉದ್ಯೋಗ ಲಭಿಸುವುದಿಲ್ಲ, ಹೀಗಾಗಿ ವಿಬಿ ಜಿ ರಾಮ್‌ಜಿ ಅವರ ಅನ್ನವನ್ನು ಕಸಿದುಕೊಂಡಂತೆ ಮಾಡಿದೆ. ಇದರ ವಿರುದ್ಧ ರಾಜ್ಯ ಸರ್ಕಾರ ಆಕ್ಷೇಪಣೆ ವ್ಯಕ್ತಪಡಿಸಿದೆ ಎಂದರು.

ಬೇಡಿಕೆ ಆಧಾರದಲ್ಲಿ ಉದ್ಯೋಗ ನೀಡಿ

ಪುಟ ೧➡ ಜುಲೈ 1ರಿಂದ ಹೊಸ ಸ್ವರೂಪದ ಮನರೇಗಾ (ವಿಬಿ ಜಿ ರಾಮ್‌ಜಿ) ಜಾರಿ ಮಾಡಲಾಗುವುದು. ಇದರನ್ವಯ ಯಾರೇ ಉದ್ಯೋಗ ಕೇಳಿ ಬಂದರೂ ಅರ್ಹರಿಗೆ ಉದ್ಯೋಗ ನೀಡಲು ಸರ್ಕಾರ ಸನ್ನದ್ಧವಾಗಿದೆ ಎಂದರು. ಕಳೆದ 3 ತಿಂಗಳಲ್ಲಿ ರಾಜ್ಯದಲ್ಲಿ 1.40 ಲಕ್ಷ ಮಾನವ ದಿನ ಸೃಷ್ಟಿಸಲಾಗಿದೆ. 9 ಕೋಟಿ ವಾರ್ಷಿಕ ಗುರಿ ಇಟ್ಟುಕೊಂಡಿದೆ. ಪ್ರತಿ ತಿಂಗಳೂ 80 ರಿಂದ 90 ಲಕ್ಷ ಮಾನವ ದಿನ ಸೃಷ್ಟಿ ನಮ್ಮ ಗುರಿಯಾಗಿದೆ ಎಂದರು. ಈಗಾಗಲೇ ನರೇಗಾದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ 7000ಕ್ಕೂ ಹೆಚ್ಚು ಸಿಬ್ಬಂದಿಯ ಜೀವನೋಪಾಯಕ್ಕೆ ತೊಂದರೆ ಆಗದ ರೀತಿಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಶಿವಮೊಗ್ಗ ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆ

• ಶಿವಮೊಗ್ಗ: ನಗರದ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯಕ್ಕೆ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಬಂದ ಹಿನ್ನೆಲೆಯಲ್ಲಿ ನ್ಯಾಯಾಲಯ ಆವರಣದಲ್ಲಿ ಭದ್ರತಾ ಸಿಬ್ಬಂದಿ, ಶ್ವಾನದಳ ಹಾಗೂ ಎಎಸ್‌ಸಿ ತಂಡಗಳಿಂದ ಬುಧವಾರ ಬೆಳಗ್ಗೆ ವ್ಯಾಪಕ ತಪಾಸಣೆ ನಡೆಸಲಾಯಿತು. ಬೆದರಿಕೆ ಸಂದೇಶದಿಂದ ನ್ಯಾಯಾಲಯದ ಸಿಬ್ಬಂದಿ, ವಕೀಲರು ಹಾಗೂ ಸಾರ್ವಜನಿಕರಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯ ಕಚೇರಿಯ ಅಧಿಕೃತ ಇ-ಮೇಲ್ ವಿಳಾಸಕ್ಕೆ ಅನಾಮಧೇಯ ವ್ಯಕ್ತಿಯಿಂದ ಬಾಂಬ್ ಸ್ಫೋಟದ ಬೆದರಿಕೆ ಸಂದೇಶ ಬಂದಿತ್ತು. ನಿರ್ದಿಷ್ಟ ಸಮಯದಲ್ಲಿ ನ್ಯಾಯಾಲಯ ಆವರಣದಲ್ಲಿ ಬಾಂಬ್ ಸ್ಫೋಟಗೊಳ್ಳಲಿದೆ ಎಂದು ಇ-ಮೇಲ್‌ನಲ್ಲಿ ಉಲ್ಲೇಖಿಸಲಾಗಿತ್ತು ಎನ್ನಲಾಗಿದೆ. ಶ್ವಾನದಳ ಮತ್ತು ಎಎಸ್‌ಸಿ ತಂಡಗಳನ್ನು ಕರೆಸಿ ನ್ಯಾಯಾಲಯದ ಕಟ್ಟಡ, ನ್ಯಾಯಾಂಗ ಕೊಠಡಿಗಳು, ವಾಹನ ನಿಲುಗಡೆ ಪ್ರದೇಶ ಹಾಗೂ ಸಾರ್ವಜನಿಕರು ಸಂಚರಿಸುವ ಸ್ಥಳಗಳಲ್ಲಿ ಸಮಗ್ರ ತಪಾಸಣೆ ನಡೆಸಲಾಯಿತು. ತಪಾಸಣೆ ವೇಳೆ ಯಾವುದೇ ಅನುಮಾನಾಸ್ಪದ ವಸ್ತು ಅಥವಾ ಸ್ಫೋಟಕ ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಮುನ್ನೆಚ್ಚರಿಕಾ ಕ್ರಮವಾಗಿ ನ್ಯಾಯಾಲಯ ಆವರಣದಲ್ಲಿ ಹೆಚ್ಚುವರಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು.

ಆಯುಕ್ತ ವೈ.ಮಂಜುನಾಥ್‌ಗೆ ಇಡಿ ಶಾಕ್

• ಬೆಳಗಾವಿ/ಮೈಸೂರು: ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ವೈ.ಮಂಜುನಾಥ ಅವರಿಗೆ ಸಂಬಂಧಿಸಿದ ಬೆಳಗಾವಿ ಸೇರಿದಂತೆ ರಾಜ್ಯದ ವಿವಿಧ ಭಾಗಗಳ ಒಟ್ಟು ಆರು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ಬುಧವಾರ ಬೆಳಗ್ಗೆ ಏಕಕಾಲದಲ್ಲಿ ದಾಳಿ ನಡೆಸಿ ಶೋಧ ಕಾರ್ಯ ಕೈಗೊಂಡಿದ್ದಾರೆ.

ಬಳ್ಳಾರಿ ಮಾಜಿ ಸಂಸದ ದೇವೇಂದ್ರಪ್ಪ ಅವರ ಪುತ್ರ, ಹಾಗೂ ಸಚಿವ ಸತೀಶ ಜಾರಕಿಹೊಳಿ ಅವರ ಸಹೋದರಿಯ ಪತಿಯಾಗಿರುವ ವೈ. ಮಂಜುನಾಥ ಅವರ ವಿರುದ್ಧ ಅಕ್ರಮ ಆಸ್ತಿ ಸಂಪಾದನೆ ಆರೋಪಗಳು ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಬೆಳಗಾವಿಯ ಹನುಮಾನ್ ನಗರದಲ್ಲಿರುವ ವೈ. ಮಂಜುನಾಥ್ ಅವರ ಐಷಾರಾಮಿ ನಿವಾಸದ ಮೇಲೆ ಇಡಿ ಅಧಿಕಾರಿಗಳು ಬೆಳಗ್ಗೆ ದಾಳಿ ನಡೆಸಿ ದಾಖಲೆಗಳ ಪರಿಶೀಲನೆ ಆರಂಭಿಸಿದರು. ಇದೇ ವೇಳೆ ಅವರಿಗೆ ಸಂಬಂಧಿಸಿದ ಇನ್ನೂ ಐದು ಕಚೇರಿಗಳು ಮತ್ತು ನಿವಾಸಗಳ ಮೇಲೂ ಅಧಿಕಾರಿಗಳು ಏಕಕಾಲದಲ್ಲಿ ಶೋಧ ಕಾರ್ಯ ನಡೆಸಿದ್ದಾರೆ.

ದಾಳಿಯ ವೇಳೆ ಕಾಗದ ಪತ್ರಗಳು, ಬ್ಯಾಂಕ್ ಖಾತೆಗಳ ವಿವರಗಳು, ಆಸ್ತಿ ದಾಖಲೆಗಳು ಹಾಗೂ ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದ ಮಹತ್ವದ ದಾಖಲೆಗಳನ್ನು ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಬೆಳಗಾವಿ, ಮೈಸೂರು, ಬೆಂಗಳೂರು ಹಾಗೂ ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿ ಇರುವ ಸ್ಥಳಗಳಲ್ಲಿ ಶೋಧ ಕಾರ್ಯ ನಡೆದಿದ್ದು, ಮಂಜುನಾಥ ಅವರ ಆಪ್ತರು ಮತ್ತು ಸ್ನೇಹಿತರಿಗೆ ಸಂಬಂಧಿಸಿದ ಮನೆಗಳಲ್ಲಿಯೂ ಅಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿದ್ದಾರೆ.

ವೈ.ಮಂಜುನಾಥ್ ಆಪ್ತೆ ಯಮುನಾ ವಿಚಾರಣೆ

ಮೈಸೂರು: ಮೈಸೂರಿನ ದಟ್ಟಗಳ್ಳಿ ನಿವಾಸದಲ್ಲಿರುವ ಸಚಿವ ಸತೀಶ್ ಜಾರಕಿಹೊಳಿ ಅವರ ಸಂಬಂಧಿ ವೈ. ಮಂಜುನಾಥ್ ಹಾಗೂ ಅವರ ಆಪ್ತೆ ಯಮುನಾ ಅವರನ್ನು ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ವಿಚಾರಣೆ ನಡೆಸಿದರು. ಬುಧವಾರ ಬೆಳಗ್ಗೆ 6ಕ್ಕೆ ಎರಡು ಕಾರುಗಳಲ್ಲಿ ಬಂದ ಇಡಿ ಅಧಿಕಾರಿಗಳು ವೈ. ಮಂಜುನಾಥ್ ನಿವಾಸಕ್ಕೆ ದಾಳಿ ಮಾಡಿದ್ದು, ಎರಡು ಗಂಟೆಗಳಿಗೂ ಹೆಚ್ಚು ಕಾಲ ನಿರಂತರವಾಗಿ ಶೋಧ ಕಾರ್ಯ ನಡೆಸಿದರು. ವಶಕ್ಕೆ ಪಡೆದ ದಾಖಲೆಗಳನ್ನು ಪರಿಶೀಲಿಸಿದರು. ಅಧಿಕಾರಿಗಳ ತಂಡ ಹೆಚ್ಚಿನ ಮಾಹಿತಿಗಾಗಿ ಯಮುನಾ ಅವರನ್ನು ಬ್ಯಾಂಕ್ ಹಾಗೂ ಇನ್ನಿತರ ಸ್ಥಳಗಳಿಗೆ ಕರೆದೊಯ್ದು ವಿಚಾರಣೆ ನಡೆಸಿದರು. ಮತ್ತೆ ದಟ್ಟಗಳ್ಳಿ ನಿವಾಸಕ್ಕೆ ಕರೆತಂದು ವಿಚಾರಣೆ ನಡೆಸಿದರು. ಯಮುನಾ ಅವರು ಈ ಹಿಂದೆ ಅಬಕಾರಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಈಚೆಗೆ ವಿಆರ್‌ಎಸ್ ಪಡೆದಿದ್ದರು.

ವಸತಿ ವಿಳಂಬಕ್ಕೆ ಮುಖ್ಯಮಂತ್ರಿ ಸಿಟ್ಟು

ಪುಟ ೧➡ ಈ ಬಗ್ಗೆ ಎಲ್ಲರೂ ಸ್ಪಷ್ಟತೆ ಇಟ್ಟುಕೊಳ್ಳಿ ಎಂದ ಮುಖ್ಯಮಂತ್ರಿಗಳು, ಮನೆ ಕಟ್ಟಿದರೆ ಸಾಲದು. ಮೂಲ ಸೌಲಭ್ಯಗಳು ಮತ್ತು ಸೂಕ್ತ ಸಂಪರ್ಕ ಕಲ್ಪಿಸುವ ಕಡೆಗೂ ಗಮನಹರಿಸಬೇಕು. ಯಾವುದೇ ವಸತಿ ಯೋಜನೆ ಅನುಷ್ಠಾನಕ್ಕೆ ಯೋಜನಾ ವಿಭಾಗಕ್ಕೆ ಮೊದಲು ಹೋಗಲೇಬೇಕು ಎಂದು ಸೂಚಿಸಿದರು. ಬಡವರಿಗೆ ತಲೆ ಮೇಲೊಂದು ಸೂರು ಬೇಕು. ಅವರಿಗೆ ನಿವೇಶನದ ಬದಲು ಮನೆ ಕಟ್ಟಿ ಕೊಡಲು ಆದ್ಯತೆ ನೀಡಿ. ಮನೆ ಕಟ್ಟಲು ಸರ್ಕಾರದಿಂದ ಕಡಿಮೆ ದರದಲ್ಲಿ ನಿವೇಶನ ಪಡೆದವರು 3 ಅಥವಾ 5 ವರ್ಷದೊಳಗೆ ಮನೆ ನಿರ್ಮಿಸುವ ನಿಯಮ ಪರಿಶೀಲಿಸಿ ಎಂದು ಸಲಹೆ ನೀಡಿದರು. ಕೆಎಚ್‌ಬಿಯಿಂದ 568 ಯೋಜನೆಗಳನ್ನು ಅನುಮೋದಿಸಲಾಗಿದ್ದು, ಇದರಲ್ಲಿ 280 ಅನುಷ್ಠಾನಗೊಂಡಿವೆ. 288 ಬಾಕಿ ಇವೆ. ಈ ಬಾಕಿ ಯೋಜನೆಗಳಿಗೆ ಅಡ್ಡಿ ಆಗಿರುವ ತಾಂತ್ರಿಕ ಅಡಚಣೆಗಳ ನಿವಾರಣೆಗೆ ಕ್ರಮ ವಹಿಸಬೇಕು ಮತ್ತು ದುರುಪಯೋಗ ಆಗದಂತೆ ಜಾಗ್ರತೆ ವಹಿಸಬೇಕು. ಶಿವರಾಮ ಕಾರಂತ ಬಡಾವಣೆಯ ರಾಜೀವ್ ಗಾಂಧಿ ವಸತಿ ಯೋಜನೆಯ ಮನೆಗಳ ನಿರ್ಮಾಣ ಜವಾಬ್ದಾರಿಯನ್ನು ಬಿಡಿಎಗೆ ವಹಿಸಲು ಸೂಚನೆ ನೀಡಿದರು.

ಮುಂಬೈ ಮಾದರಿಯಲ್ಲಿ ಸ್ಲಂ ಅಭಿವೃದ್ಧಿ



ನಿವೇಶನಗಳು ಖಾಲಿ ಬಿದ್ದಷ್ಟೂ ಸ್ಲಂಗಳು ತಲೆ ಎತ್ತುತ್ತವೆ. ಇದಕ್ಕೆ ಅವಕಾಶ ಕೊಡಬೇಡಿ. ಮುಂಬೈ ಮಾದರಿಯಲ್ಲಿ ಸ್ಲಂಗಳ ಮರು ಅಭಿವೃದ್ಧಿಗೆ ಯೋಜನೆ ಸಿದ್ಧಪಡಿಸಿ. ಮುಂಬೈಗಿಂತ ಹೆಚ್ಚು ವಿಸ್ತೀರ್ಣದ ಮನೆಗಳನ್ನು ನಿರ್ಮಿಸಿ. ಮುಂಬೈಗೆ ಹೋಗಿ ಅಧ್ಯಯನ ನಡೆಸಿಕೊಂಡು ಬನ್ನಿ. ಅದಕ್ಕಿಂತ ಉತ್ತಮ ಮಾದರಿಯಲ್ಲಿ ನಾವೇನು ಮಾಡಬಹುದು ಎಂಬ ಬಗ್ಗೆ ಮುಂದಿನ ಕ್ಯಾಬಿನೆಟ್ ಒಳಗೆ ವರದಿ ಸಿದ್ಧಪಡಿಸಿ ಎಂದು ಸಿಎಂ ಡಿ.ಕೆ. ಶಿವಕುಮಾರ್ ಆದೇಶಿಸಿದರು.

ಮನೆ ಅರ್ಹರಿಗೋ, ಹಣವಿದ್ದವರಿಗೋ?

ಮನೆ ಹರಾಜು ಹಾಕಿದರೆ ಅರ್ಹರಿಗೆ ಸಿಗುತ್ತದೋ, ಹಣವಿದ್ದವರಿಗೆ ಸಿಗುತ್ತದೋ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದ ಮುಖ್ಯಮಂತ್ರಿಗಳು, ಲಾಟರಿ ಮೂಲಕ ಮನೆ ಹಂಚುತ್ತೀರೋ, ಹರಾಜಿನ ಮೂಲಕ ಹಂಚುತ್ತೀರೋ ಎನ್ನುವುದಕ್ಕಿಂತ ನೈಜ ಅರ್ಹರಿಗೇ ಮನೆ ಸಿಗಬೇಕು. ಇದಕ್ಕೇನು ವ್ಯವಸ್ಥೆ ಮಾಡಿದ್ದೀರಿ ಎನ್ನುವ ವಿವರ ಸಲ್ಲಿಸಿ ಎಂದರು.

ಆರ್‌ಎಸ್‌ಎಸ್ ಮತ್ತು ತುರ್ತು ಪರಿಸ್ಥಿತಿಯ ಹೋರಾಟದ ಪ್ರಮುಖ ಅಂಕಿ-ಅಂಶಗಳು

25 ಜೂನ್
1975
ತುರ್ತು ಪರಿಸ್ಥಿತಿ ಘೋಷಣೆ

4 ಜುಲೈ
1975
ಆರೆಸ್ಸೆಸ್ ಮೇಲೆ ನಿಷೇಧ

1,30,000
ಒಟ್ಟು ಸತ್ಯಾಗ್ರಹಿಗಳು

1,00,000+
ಸಂಘದ ಸ್ವಯಂಸೇವಕರು

30,000
ಮೀಸಾ ಬಂಧಿತರು

25,000+
ಸಂಘ ಸಂಬಂಧಿತ ಬಂಧಿತರು

23,015
ಮತ್ತೊಂದು ವರದಿಯ ಪ್ರಕಾರ ಆರ್‌ಎಸ್‌ಎಸ್ ಬಂಧಿತರು

80,000
ನಂತರದ ಸತ್ಯಾಗ್ರಹಗಳಲ್ಲಿ ಬಂಧಿತರಾದ ಸ್ವಯಂಸೇವಕರು

100
ಪ್ರಾಣತ್ಯಾಗ ಮಾಡಿದ ಕಾರ್ಯಕರ್ತರು

1975 ರ ಜೂನ್ 25ರಂದು ದೇಶದಲ್ಲಿ ಹೇರಲಾದ ತುರ್ತು ಪರಿಸ್ಥಿತಿ ಭಾರತದ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಅತ್ಯಂತ ಕರಾಳ ಅಧ್ಯಾಯ. ಈ ದಮನಕಾರಿ ಮತ್ತು ಸರ್ವಾಧಿಕಾರಿ ಆಡಳಿತದ ವಿರುದ್ಧ ದೇಶದ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಮರುಸ್ಥಾಪಿಸಲು ನಡೆದ ಹೋರಾಟದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಅತ್ಯಂತ ಪ್ರಮುಖ ಹಾಗೂ ನಿರ್ಣಾಯಕ ಪಾತ್ರವನ್ನು ವಹಿಸಿತ್ತು. ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರ ಸರ್ಕಾರ ಜಾರಿಗೊಳಿಸಿದ್ದ ಸರ್ವಾಧಿಕಾರಿ ಧೋರಣೆಯನ್ನು ವಿರೋಧಿಸಿ, ಸಂಘದ ಸಾವಿರಾರು ಸ್ವಯಂಸೇವಕರು ಬೀದಿಗಿಳಿದರು, ಜೈಲು ಸೇರಿದರು ಮತ್ತು ಅಮಾನವೀಯ ಕಿರುಕುಳಗಳನ್ನು ಎದುರಿಸಿ ಬಲಿದಾನಗೈದರು. ಈ ಹೋರಾಟ ಕೇವಲ ಸಂಘದ ಮೇಲಿನ ನಿಷೇಧವನ್ನು ಹಿಂಪಡೆಯುವುದಕ್ಕಾಗಿರಲಿಲ್ಲ, ದೇಶದಲ್ಲಿ ಪ್ರಜಾಪ್ರಭುತ್ವವನ್ನು ಪುನಃ ಸ್ಥಾಪಿಸುವ ಪವಿತ್ರ ಉದ್ದೇಶ ಇದರ ಹಿಂದಿತ್ತು.

ಕರಾಳ ತುರ್ತು ಪರಿಸ್ಥಿತಿ ವಿರುದ್ಧ ಸಂಘಟಿತ ಪ್ರತಿರೋಧ

ಸಂವಿಧಾನ, ನಾಗರಿಕ ಹಕ್ಕುಗಳಿಗಾಗಿ ಸ್ವಯಂಸೇವಕರ ಬಲಿದಾನ

ಸಂವಿಧಾನ ರಕ್ಷಿಸಲು ಹೋರಾಡಿದ ಸಂಘ

ಡಾ.ಸುಧಾಕರ ಹೊಸಳ್ಳಿ, ಸಂವಿಧಾನ ತಜ್ಞರು, ಮಂಡ್ಯ

ಭಾರತದಲ್ಲಿ ಅಂಬೇಡ್ಕರ್ ಮತ್ತು ಸಂವಿಧಾನ ಈ ಎರಡರ ಕುರಿತು ಅತ್ಯಂತ ಯೋಜನಾ ಬದ್ಧವಾಗಿ ಪಿತೂರಿ ಮಾಡುತ್ತಲೇ ಬರಲಾಗಿದೆ. ಕಾರಣ ಬಹಳ ಸ್ಪಷ್ಟವಾದದ್ದು, ಸಂವಿಧಾನ ಮತ್ತು ಅಂಬೇಡ್ಕರರ ಬಗೆಗೆ ಮೂಲ ಸ್ವರೂಪದ ಮಾಹಿತಿ ಸಮಾಜಕ್ಕೆ ದೊರಕುವುದು ತಮ್ಮ ರಾಷ್ಟ್ರ ವಿಘಟನಾ ಕಾರ್ಯಕ್ಕೆ ತೊಡಕಾಗುತ್ತದೆ ಎಂಬ ಎಡಪಂಥೀಯರ ಆತಂಕ .

ಸದಾ ರಾಷ್ಟ್ರದ ಒಳಿತಿಗಾಗಿ, ರಾಷ್ಟ್ರದ ಐಕ್ಯತೆಗಾಗಿ, ಭಾರತದ ಉನ್ನತಿಗಾಗಿ ತಮ್ಮ ಸಂಶೋಧನೆಯನ್ನು ಮೀಸಲಿಟ್ಟಿದ್ದ ಅಂಬೇಡ್ಕರರಿಗೆ ಭಾರತ ವಿರೋಧಿ ಪಟ್ಟ ಕಟ್ಟುವುದು ಸವಾಲಿನ ಕೆಲಸವೇ ಆಗಿತ್ತು. ಹಾಗೆ ಸಂವಿಧಾನವು ಭಾರತವನ್ನು ಜಾಗತಿಕ ಗುರುವಾಗಿಸಲು ಏಣಿಯಾಗಿತ್ತು ಎಂಬುದನ್ನು ಭಿನ್ನ ಅರ್ಥದಲ್ಲಿ ಸ್ಥಾಪಿಸುವುದು ತೀವ್ರ ಶ್ರಮ ನಿರೀಕ್ಷೆ ಮಾಡುವ ಕಾಯಕವೇ.

ಆದರೆ ಎಡಪಂಥೀಯರು, ಕಮ್ಯುನಿಸ್ಟರು ತಮ್ಮ ಅಧಿಕ ಶ್ರಮದೊಂದಿಗೆ ಇಂತಹ ವಾಮ ಯೋಜನೆಯನ್ನು ಮುಂದುವರಿಸುತ್ತಲೇ ಬಂದಿದ್ದಾರೆ.

ಈಗ ಹೊಸದಾಗಿ ಆರ್‌ಎಸ್‌ಎಸ್ ನೋಂದಣಿ ಎಂಬ ಹಳೆಯ ವಿಷಯ ಹೊಸ ರೂಪದಲ್ಲಿ ಚರ್ಚೆಯಲ್ಲಿದೆ. ಆರ್‌ಎಸ್‌ಎಸ್‌ಗೆ ನೂರು ವರ್ಷ ತುಂಬಿದೆ, ಈ ಸಂದರ್ಭದಲ್ಲಿ ಭಾರತ ಸಂವಿಧಾನದ ಮೇಲೆ ಎಮರ್ಜೆನ್ಸಿ ಎಂಬ ದುರಾಕ್ರಮಣ ಮಾಡಿದ ಕಾರ್ಯಕ್ಕೆ 51 ವರ್ಷಗಳು ತುಂಬಿದೆ.

ಸಂವಿಧಾನ ರಕ್ಷಕರೆಂಬ ಸ್ವ-ಹಣೆಪಟ್ಟಿ ಕಟ್ಟಿಕೊಂಡವರು, ಸಂವಿಧಾನಕ್ಕೆ ಮಾಡಿದ ಅಪಚಾರ, ಮುಂದುವರಿದು ಅತ್ಯಾಚಾರ, ಎಷ್ಟು ಕ್ರೂರ ಎಂಬುದನ್ನು 51 ವರ್ಷಗಳ ನಂತರವೂ ಸಮರ್ಥವಾಗಿ ವಿಶ್ಲೇಷಿಸುವುದು ಕಷ್ಟಸಾಧ್ಯ.

ಇಂತದ್ದೊಂದು ಕಠಿಣ ಗಳಿಗೆಯಲ್ಲಿ ಆರ್‌ಎಸ್‌ಎಸ್ ಭೂಗತ ಹೋರಾಟ ಮಾಡಿ ದೇಶದ ತರುಣರನ್ನು ಪ್ರೇರೇಪಿಸಿ, ಸಂವಿಧಾನ ರಕ್ಷಣೆಗಾಗಿ ಅದರ ಆಶಯಗಳ ಕಾಪಾಡುವ, ಗುರಿಯಡೆಗೆ ಸಾಗುವಂತೆ ಮಾಡುವಲ್ಲಿ ಆರ್‌ಎಸ್‌ಎಸ್ ನಿರ್ವಹಿಸಿದ ಪಾತ್ರವನ್ನು ಸರಳ ರೇಖೆಯಲ್ಲಿ ವಿವರಿಸುವುದು ಕಠಿಣವಾದದ್ದೆ?.

77 ವರ್ಷಗಳ ಹಿಂದೆ ಸ್ವತಂತ್ರ, ಭಾರತದ ಸಾರ್ವಭೌಮತೆಯ ಪ್ರತೀಕವಾಗಿ ಸ್ವಂತ ಸಂವಿಧಾನ ಹೊಂದುವ ಆಶಯದಿಂದ, ಬಾಬು ರಾಜೇಂದ್ರ ಪ್ರಸಾದ್ ನೇತೃತ್ವದ ಸಂವಿಧಾನ ರಚನಾ ಸಭೆ ಹಾಗೂ ಬಾಬಾ ಸಾಹೇಬ್ ಅಂಬೇಡ್ಕರರ ನೇತೃತ್ವದ ಕರಡು ರಚನಾ ಸಮಿತಿಯ ನೇತೃತ್ವದಲ್ಲಿ ಸಂವಿಧಾನವನ್ನು ದೇಶಿಯವಾಗಿ ರಚಿಸಿ, ನವೆಂಬರ್ 26, 1949ರಂದು ಆತ್ಮಾರ್ಪಣೆ ಮಾಡಿಕೊಳ್ಳಲಾಯಿತು.

ಸಂವಿಧಾನದ ಒಳಗೆ ಸುದೀರ್ಘವಾದ ವಿಧಿಗಳು, ನಿಯಮಗಳು, ಇದ್ದಾಗಿಯೂ ಅವುಗಳ ಒಟ್ಟಾರೆ ಪ್ರಧಾನ ಫಲಿತಾಂಶ ಪ್ರಜೆಗಳಿಗೆ ನೀಡಬಹುದಾದ ಗರಿಷ್ಠ ಹಕ್ಕುಗಳೇ ಆಗಿದ್ದವು.

ಸಂವಿಧಾನದ ಕುರಿತು ಮಾತನಾಡುವಾಗ ಅಂಬೇಡ್ಕರರು ನಾವು ಈ ಸಂವಿಧಾನದಲ್ಲಿ ಪ್ರಜೆಗಳಿಗೆ ವಿಶೇಷ ಮೂಲಭೂತ ಹಕ್ಕುಗಳನ್ನು ನೀಡಿದ್ದು, ಅದರಲ್ಲೂ ಅಂತಹ ಹಕ್ಕುಗಳಿಗೆ ಯಾವುದೇ ಧಕ್ಕೆ ತಗಲಿದರೂ, 32ನೇ ವಿಧಿಯ ಅನುಸಾರ ಸರ್ವೋಚ್ಚ ನ್ಯಾಯಾಲಯದ ರಕ್ಷಣೆ ಪಡೆಯುವಂತೆ ನಿಯಮ ಮಾಡಲಾಗಿದೆ, ಇದು ಸಂವಿಧಾನದ ಶ್ರೇಷ್ಠತೆಯ ಸೂಚಕ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು.

1946ರಿಂದ 1949ರ ಸಂವಿಧಾನ ರಚನಾ ಸಭೆಯ ಚರ್ಚೆಯ ವೇಳೆಯಲ್ಲಿ ವ್ಯಕ್ತಿಯ ವೈಯಕ್ತಿಕ ಮತ್ತು ಜೀವಿಸುವ ಹಕ್ಕು (20ಮತ್ತು 21ನೇ ವಿಧಿ) ಯಾವುದೇ ಸಂದರ್ಭದಲ್ಲಿ ನಿರ್ಬಂಧಕ್ಕೆ ಒಳಗಾಗಬಾರದು ಒಂದೊಮ್ಮೆ ದೇಶದಲ್ಲಿ ತುರ್ತು ಪರಿಸ್ಥಿತಿ ಜಾರಿಯಾದಾಗಲೂ ಈ ಹಕ್ಕುಗಳಿಗೆ ನಿರ್ಬಂಧ ಹೇರುವ ಅಧಿಕಾರ ಸರ್ಕಾರಗಳಿಗೆ ಇರುವುದಿಲ್ಲ ಎಂಬ ನಿಯಮವನ್ನು ತುಲನಾತ್ಮಕ ಚರ್ಚೆಯ ಮುಖಾಂತರ ಅಂಗೀಕಾರ ಮಾಡಿದ್ದರು.

ತುರ್ತು ಪರಿಸ್ಥಿತಿಗೆ 352, 356, 360ನೇ ವಿಧಿಗಳಲ್ಲಿ ಅವಕಾಶ ಕಲ್ಪಿಸುವಾಗಲೂ, ವ್ಯಕ್ತಿ ಪ್ರಧಾನವಾದ ಈ ಹಕ್ಕುಗಳು ನಿರ್ಬಂಧವಾಗಲೇ ಬಾರದೆಂಬ ಸದುದ್ದೇಶದಿಂದ ಸಂವಿಧಾನದ ಒಳಗೆ ಆ ನಿಬಂಧನೆಯನ್ನು ಹೇರಲಾಗಿತ್ತು. ಜೀವಿಸುವ ಹಕ್ಕನ್ನು ಕಸಿದುಕೊಳ್ಳುವುದು ಪ್ರಕೃತಿ ನಿಯಮಕ್ಕು ವಿರುದ್ಧವೇ ಹೌದು.

ಆದರೆ, ಇಂದಿಗೆ 51 ವರ್ಷಗಳ ಹಿಂದೆ ಸಂವಿಧಾನದ ಮತ್ತು ಸಂವಿಧಾನ ರಚನಾಕಾರರ ಆಶಯ ಸೋತು ಹೋಗಿತ್ತು ಎಂಬುದನ್ನು ಮರೆಮಾಚಲು ಸಾಧ್ಯವಿಲ್ಲ, ಹೇಗೆ ಪರತಂತ್ರ, ಗೊತ್ತಿಲ್ಲದ ಯುವಕರು ಸ್ವಾತಂತ್ರ್ಯದ ಮಹತ್ವವನ್ನು ಪೂರ್ಣ ಪ್ರಮಾಣದಲ್ಲಿ ಅರಿಯಲಾರರೋ, ಹಾಗೆ ತುರ್ತು ಪರಿಸ್ಥಿತಿಯ ಸ್ವಾನುಭವವಿಲ್ಲದವರು ತುರ್ತು ಪರಿಸ್ಥಿತಿಯ ಕರಾಳತೆಯನ್ನು ಗುರುತಿಸಲಾರರು.

ಅಂದು ಜೂನ್ 25, 1975 ರಂದು ಪ್ರಧಾನಮಂತ್ರಿಯೊಬ್ಬರ ಅಧಿಕಾರದ ಉಳಿವಿಗಾಗಿ ಸಂವಿಧಾನ ಸೋತಿತ್ತು, ಪ್ರಜೆಗಳು ಸೋತಿದ್ದರು, ಹಕ್ಕುಗಳು ಅಸ್ತಿತ್ವವನ್ನು ಕಳೆದುಕೊಂಡಿದ್ದವು.

AKHIL BHARATIYA
VIDYARTHI PARISHAD
JAMNAGAR BRANCH

ತುರ್ತು ಪರಿಸ್ಥಿತಿ ವೇಳೆ ಆರೆಸ್ಸೆಸ್ ಯುವ ಪ್ರಚಾರಕರಾಗಿದ್ದ ನರೇಂದ್ರ ಮೋದಿ

ಜೂನ್ 12, 1975 ಅಲಹಾಬಾದ್ ಹೈಕೋರ್ಟ್‌ನ ನ್ಯಾಯಾಧೀಶರಾದ ಜಗ ಮೋಹನ್ ಲಾಲ್ ಸಿನ್ಹಾ ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಇಂದಿರಾ ಗಾಂಧಿಯವರ ಚುನಾವಣಾ ದಾವೆಯನ್ನು ಪರಿಶೀಲಿಸಿ, ಅವರ ಆಯ್ಕೆಯನ್ನು ಅಸಿಂಧುಗೊಳಿಸಿದರು, ಮುಂದುವರಿದು, ಮುಂದಿನ ಆರು ವರ್ಷಗಳವರೆಗೆ ಚುನಾವಣೆಗೂ ನಿಲ್ಲಬಾರದೆಂದು ಆದೇಶ ನೀಡಲಾಗಿತ್ತು.

ಇಂಥದ್ದೊಂದು ನ್ಯಾಯಾಂಗ ಆದೇಶದ ವಿರುದ್ಧ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಸಾಂವಿಧಾನಿಕ ನಿಯಮಗಳನ್ನೇ ಬುಡಮೇಲು ಮಾಡಿದ್ದು ಭಾರತದ ಸಾಂವಿಧಾನಿಕ ಇತಿಹಾಸದಲ್ಲಿ ಅತ್ಯಂತ ಕರಾಳ ಅಧ್ಯಾಯ. ಹೈಕೋರ್ಟ್‌ನ ಆದೇಶದ ವಿರುದ್ಧ ಸುಪ್ರೀಂ ಕದ ತಟ್ಟಿದ್ದ ಇಂದಿರಾ ಗಾಂಧಿ ಅವರಿಗೆ ಜೂನ್ 24 ,1975ರಲ್ಲಿ ನ್ಯಾಯಮೂರ್ತಿ ವಿ.ಆರ್. ಕೃಷ್ಣ ಅಯ್ಯರ್‌ರವರು ಷರತ್ತು ಬದ್ಧ ತಡೆಯಿತ್ತಿದ್ದರು, ಸಂಸತ್ತಿನ ಯಾವುದೇ ಚಟುವಟಿಕೆಯಲ್ಲಿ ಭಾಗವಹಿಸುವಂತಿಲ್ಲ ಎಂಬ ಆದೇಶವಿತ್ತಿದ್ದರು, ಜೂನ್ 25ರ ತಡರಾತ್ರಿಯಲ್ಲಿ ತುರ್ತು ಪರಿಸ್ಥಿತಿ ಎಂಬ ಸಂವಿಧಾನದ ಜಾಗೃತಿಕ ಶಕ್ತಿ ತಂತ್ರವನ್ನು ಕೇವಲ ಅಧಿಕಾರದ ಉಳಿವಿಗಾಗಿ ರಾಷ್ಟ್ರದ ಮೇಲೆ ಹೇರಲಾಯಿತು.

1973ರ ಕೇಶವಾನಂದ ಭಾರತಿ/ವರ್ಸಸ್ ಕೇರಳ ಭಾರತದ ನ್ಯಾಯಾಂಗ ಇತಿಹಾಸದಲ್ಲೇ ಅತ್ಯಂತ ಪ್ರಮುಖ ನ್ಯಾಯಿಕ ವಿಮರ್ಶಾಧಿಕಾರಕ್ಕೆ ಸಾಕ್ಷಿಯಾದಂತ ಪ್ರಕರಣದಲ್ಲಿ ಸಂಸತ್ತು ಮಾಡುವ ಯಾವುದೇ ಸಾಂವಿಧಾನಿಕ ತಿದ್ದುಪಡಿಗಳು ಸಂವಿಧಾನದ ಮೂಲ ರಚನೆಗೆ ಧಕ್ಕೆ ತರುವಂತಿಲ್ಲ ಎಂಬ ತೀರ್ಪಿನ ನಡುವೆಯೂ, ಜುಲೈ 24, 1975ಕ್ಕೆ ತಂದ 38ನೇ ತಿದ್ದುಪಡಿ(ರಾಷ್ಟ್ರಪತಿಗಳ ಘೋಷಿಸುವ ತುರ್ತು ಪರಿಸ್ಥಿತಿಯನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ), ಆಗಸ್ಟ್ 5 1975ರ 39ನೇ ತಿದ್ದುಪಡಿ (ರಾಷ್ಟ್ರಪತಿ, ಪ್ರಧಾನ ಮಂತ್ರಿ, ಸಭಾಪತಿ, ಉಪರಾಷ್ಟ್ರಪತಿಗಳ ಬಗ್ಗೆ ನ್ಯಾಯಾಲಯಗಳು ವಿಚಾರಣೆ ನಡೆಸುವಂತಿಲ್ಲ), 40ನೇ ತಿದ್ದುಪಡಿ (ದೇಶದ ಮಾಧ್ಯಮಗಳ ಮೇಲೆ ನಿರ್ಬಂಧ), ಆಗಸ್ಟ್ 9, 1975 41ನೇ ತಿದ್ದುಪಡಿ (ಪ್ರಧಾನಿ, ರಾಷ್ಟ್ರಪತಿ ಸ್ಪೀಕರ್, ರಾಜ್ಯಪಾಲರು ಅವರು ಹುದ್ದೆಗೆ ಬರುವುದಕ್ಕಿಂತ ಮೊದಲಿನ ಪ್ರಕರಣಗಳನ್ನು ನ್ಯಾಯಾಲಯಗಳು ವಿಚಾರಣೆ ಮಾಡುವಂತಿಲ್ಲ)

ಈ ತಿದ್ದುಪಡಿಗಳು ಇಂದಿರಾಗಾಂಧಿಯವರ ಅಧಿಕಾರವನ್ನು ರಕ್ಷಣೆ ಮಾಡುವಲ್ಲಿ ಯಶಸ್ವಿಯಾದದ್ದು ದಿಟ. ಆದರೆ, ಒಟ್ಟು ಭಾರತ ಅಪಾಯ ಕಂಡಿತ್ತು.

ಸಂವಿಧಾನ ಶಿಲ್ಪಿ ಅಂಬೇಡ್ಕರರ ಮಾತೊಂದು ಮಾತು ನೆನಪಾಗುತ್ತದೆ, ಸಂವಿಧಾನವೆಂಬ ಪ್ರಗತಿಯ ತೇರನ್ನು ಇಲ್ಲಿಯವರೆಗೆ ಎಳೆದು ತಂದಿದ್ದೇನೆ, ಸಾಧ್ಯವಾದರೆ ಮುಂದಕ್ಕೆ ತಳ್ಳಿ, ಆದರೆ ಹಿಂದಕ್ಕೆ ತಳ್ಳುವ ಕೆಲಸ ದಯವಿಟ್ಟು ಯಾರು ಮಾಡಬೇಡಿ.

ತುರ್ತು ಪರಿಸ್ಥಿತಿ ಇದಿಷ್ಟೇ ಅಸಂವಿಧಾನಿಕ ನಡೆಗಳಿಗೆ ನಿದರ್ಶನವೇ ಎಂದು ಅವಲೋಕಿಸಿದರೆ, ಪಟ್ಟಿ ಬೆಳೆಯುತ್ತದೆ, ಡಿಸೆಂಬರ್ 18, 1975 ಸಂವಿಧಾನಕ್ಕೆ ತಂದ 42ನೇ ತಿದ್ದುಪಡಿ, ಈ ತಿದ್ದುಪಡಿ ಮೂಲ ಸಂವಿಧಾನದ ಆಶಯಗಳಿಗೆ ತಿಲಾಂಜಲಿ ಇಟ್ಟ ಅಪಕೀರ್ತಿಗೆ ಭಾಜನವಾಗಿದೆ, ಎರಡು ವರ್ಷ 11 ತಿಂಗಳು 18 ದಿವಸ ಸಂವಿಧಾನ ರಚನಾಕಾರರು ತಮ್ಮ ಅದಮ್ಯವಾದ ಜ್ಞಾನ, ಚರ್ಚೆ, ಮೌಲ್ಯಮಾಪನದ ಜತೆಗೆ ಸಂವಿಧಾನಕ್ಕೆ ಕಟ್ಟಿಕೊಟ್ಟಿದ್ದ 395 ವಿಧಿಗಳಲ್ಲಿ 59 ವಿಧಿಗಳನ್ನು ಒಟ್ಟಿಗೆ ತಿರುಚಿದ ಕಪ್ಪು ದಿವಸವದು.

ಕೆಟಿಷಾ ಎಂಬುವವರು 15, ನವೆಂಬರ್ 1948ರಲ್ಲಿ ಎರಡನೇ ಬಾರಿಗೆ ಅಂಬೇಡ್ಕರರ ಎದುರಿಗೆ ನಿಂತು ಜಾತ್ಯತೀತತೆ ಮತ್ತು ಸಮಾಜವಾದಿ ಪದವನ್ನು ಸಂವಿಧಾನದ ಭಾಗವನ್ನಾಗಿ ಮಾಡಬೇಕೆಂಬ ತಿದ್ದುಪಡಿ ಮಂಡಿಸಿದಾಗ, ಅಂಬೇಡ್ಕರರು ಅತ್ಯಂತ ಕಠೋರವಾಗಿ ಸದರಿ ತಿದ್ದುಪಡಿಗಳಿಗೆ ವಿರೋಧ ವ್ಯಕ್ತಪಡಿಸಿ ಈ ನೆಲದ ಗುಣಕ್ಕೆ ವಿರುದ್ಧವಾದ ಜಾತ್ಯತೀತತೆಯನ್ನು ಸಂವಿಧಾನದ ಭಾಗವನ್ನಾಗಿ ಮಾಡಲಾರೆ ಎಂದಿದ್ದರು.

ಇಂತಹ ಆಶಯವನ್ನು ಕಡೆಗಣಿಸಿ ಪ್ರಸ್ತಾವನೆಗೆ ಎರಡು ಅಂಶಗಳನ್ನು ತುರುಕಲಾಯಿತು. (ಇದರ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆ) ಒಂದೇ ತಿದ್ದುಪಡಿಯಲ್ಲಿ ಅದು ಕೇವಲ 26 ವರ್ಷಗಳ ಅಂತರದಲ್ಲಿ 59 ವಿಧಿಗಳನ್ನು ಮಾರ್ಪಡಿಸುವುದು ಎಂದರೆ, ಒಂದು ಸಂವಿಧಾನ ಅಷ್ಟು ಅಶಕ್ತವಾಗಿತ್ತೇ? ಅಥವಾ ಉದ್ದೇಶಪೂರ್ವಕವಾಗಿ ಅಶಕ್ತವಾಗಿಸಲಾಯಿತೇ? ಚರ್ಚಿತ ವಿಷಯ.

ಏಪ್ರಿಲ್ 28, 1976 ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎ.ಎನ್. ರೇ, ಎಚ್‌ಎಮ್ಬೇಗ್, ವೈ.ವಿ. ಚಂದ್ರಚೂಡ್, ಪಿ.ಎನ್. ಭಗವತಿ ಒಳಗೊಂಡ ನ್ಯಾಯಪೀಠವು ಅಂಬೇಡ್ಕರ್ ನೀಡಿದ್ದ ಹೇಬಿಯಸ್ ಕಾರ್ಪಸ್ (ನಾಗರೀಕನ ಅಕ್ರಮ ಬಂಧನ ಕುರಿತು ರಕ್ಷಣೆ) ಅರ್ಜಿಯನ್ನು ದಾಖಲಿಸುವ ಅಧಿಕಾರ ನಾಗರಿಕರಿಗಿಲ್ಲ ಎಂಬ ತೀರ್ಪು ನೀಡಿತು. (ನ್ಯಾಯಮೂರ್ತಿ ಎಚ್.ಆರ್. ಖನ್ನ ವಿರೋಧ ವ್ಯಕ್ತಪಡಿಸಿದ್ದರು).

ಬಹಳ ಮುಖ್ಯವಾಗಿ ಆ ಕಾಲಘಟ್ಟದಲ್ಲಿ ತಂದ ಮೀಸಾ ಕಾನೂನು1.1 ಲಕ್ಷ ಜನರನ್ನು ಬಂಧಿಸಿತ್ತು. ಈ ಕಾನೂನು ಜಗತ್ತಿನ ಯಾವ ಪ್ರಜಾಪ್ರಭುತ್ವ ರಾಷ್ಟ್ರ ಇಂದಿಗೂ ಜಾರಿಗೆ ತರಲಾರದಂತಹ ಅನಿರೀಕ್ಷಿತವಾದದ್ದು, ಬಂಧನದ ಉದ್ದೇಶ, ಬಂಧಿತರ ಬಗೆಗಿನ ಮಾಹಿತಿ ಕೇಳುವುದೇ ಅಪರಾಧ ಎನ್ನುವ ಈ ಕಾನೂನು, ಅಂಬೇಡ್ಕರರ, ಸಂವಿಧಾನದ ಮಾನವ ಸ್ವಾತಂತ್ರ್ಯವನ್ನೇ ತಿರಸ್ಕರಿಸಿ ನಿಂತಿದ್ದು.

ಸಂಸತ್ತು ನಡೆಸಲು ಕೋರಮ್ ಅಗತ್ಯವಿಲ್ಲವೆಂಬ ನಿಯಮ ಜಾರಿ, ಕೇವಲ ನಾಲ್ಕು ದಿನಗಳಲ್ಲಿ ಸಂವಿಧಾನಕ್ಕೆ ಮಹತ್ವದ ತಿದ್ದುಪಡಿಗಳನ್ನು ತಂದದ್ದು, 253 ಪತ್ರಕರ್ತರ ಬಂಧನ, ಈ ಎಲ್ಲಾ ಅವಘಡಗಳನ್ನು ಗಮನಿಸಿದಾಗ ಇಂದಿರಾಗಾಂಧಿಯವರನ್ನು ಅಲಹಾಬಾದ್ ಕೋರ್ಟ್ ಸೋಲಿಸುವ ಬದಲು ಗೆಲ್ಲಿಸಿ ಬಿಡಬೇಕಿತ್ತೇನೋ ಎನಿಸುತ್ತದೆ.

ಕೋರ್ಟ್ ಇಂದಿರಾ ಗಾಂಧಿಯನ್ನು ಸೋಲಿಸಿದಾಗ, ತಾನು ಸೋಲಬಹುದು, ಪ್ರಜಾಪ್ರಭುತ್ವವು ಸೋಲಬಹುದು, ಸಂವಿಧಾನವು ಸೋಲಬಹುದು, ದೇಶವೇ ಸೋಲಬಹುದೆಂದು ಎಣಿಸಿರಲಾರರು.

ಸಂವಿಧಾನ ಮೀರುವ, ಪ್ರಜಾಪ್ರಭುತ್ವ ವಿರೋಧಿಸುವ, ಪ್ರವೃತ್ತಿ ಕಾಂಗ್ರೆಸ್‌ಗೆ ಆರಂಭದಿಂದಲೂ ಬಂದ ಬಳುವಳಿ. ಏಕಾಏಕಿ 1975ರಲ್ಲಿ ಹೇರಿದ್ದಲ್ಲ, ಬದಲಾಗಿ ಇದಕ್ಕೊಂದು ದೊಡ್ಡ ಹಿನ್ನೆಲೆಯೂ ಇದೆ. ಕೀನ್ಯಾ ದೇಶಕ್ಕೆ ಭೇಟಿ ಕೊಟ್ಟಾಗ ಇಂದಿರಾ ಗಾಂಧಿಯವರು, ದೇಶವನ್ನು ಬಲಾಢ್ಯವಾಗಿ ಕಟ್ಟಲು, ಬಡತನವನ್ನು ದೂರ ಮಾಡಲು ನಿರಕ್ಷರತೆಯನ್ನು ಕೊನೆಗಾಣಿಸಲು ಯಾವ ಪ್ರತಿಪಕ್ಷವೂ ಇಲ್ಲದಿರುವುದೇ ವಾಸಿ ಎಂಬ ಸರ್ವಾಧಿಕಾರದ ಸಮರ್ಥನೆ ಮಾತನ್ನು ಆಡಿದ್ದರು. (ವೈ ಎಮರ್ಜೆನ್ಸಿ? - ಅಮಿಯ ರಾವ್)

1973ರಲ್ಲಿ ಕಾಂಗ್ರೆಸ್ ಸಂಸತ್ ಸದಸ್ಯ ಶಶಿಭೂಷಣ್ ಭಾರತಕ್ಕೆ ಮರ್ಯಾದಾಧಾರಿತ ಸರ್ವಾಧಿಕಾರಿ ಸೂಕ್ತ ಎಂದು ಹೇಳಿದ್ದರು.

ಬಾಂಗ್ಲಾದೇಶದಲ್ಲಿ ಶೇಖ್ ಮುಜುಬುರ್, ಸಂಸದೀಯ ಪ್ರಜಾಪ್ರಭುತ್ವವನ್ನು ಕೊನೆಗೊಳಿಸಿ ಅಧ್ಯಕ್ಷ ಪದ್ಧತಿಯನ್ನು ಜಾರಿಗೆ ತಂದಾಗ ಇಂದಿರಾಗಾಂಧಿ ಅವರು ಆ ಕ್ರಮವನ್ನು ಸ್ವಾಗತಿಸಿ 1975ರಲ್ಲಿ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಗೆ ಸಂದರ್ಶನ ನೀಡಿದ್ದರು.

ಈ ವೇಳೆ ಮಾತನಾಡುತ್ತಾ ಮೂಲಭೂತ ಕಾರ್ಯಕ್ರಮಗಳನ್ನು ಕೈಗೊಳ್ಳುವಾಗ ಹಲವಾರು ದೇಶಗಳು ಜನತಂತ್ರ ವಿಧಾನವನ್ನು ಕೈಬಿಟ್ಟಿವೆ. ಏಕೆಂದರೆ ಆಗ ದೇಶದ ಅಭಿಪ್ರಾಯವನ್ನು ಹಾಕಬೇಕಾಗಿರುತ್ತದೆ ಅಭಿಪ್ರಾಯ ಆಗದಿದ್ದರೆ, ಮುಂದೆ ಏನು ಮಾಡಲಿಕ್ಕೂ ಆಗದು ಎಂದಿದ್ದರು.

ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಬರುವಾ, ಭಾರತದಲ್ಲಿ ಸದ್ಯಕ್ಕೆ ವಿರೋಧ ಪಕ್ಷ ಅಪ್ರಸ್ತುತ ಎನ್ನುತ್ತಾ, 1975 ಜೂನ್ 18ರ ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆಯಲ್ಲಿ ಇಂದಿರಾ ಅಂದರೆ ಇಂಡಿಯಾ ಅಂದರೆ ಇಂದಿರಾ ಎಂಬ ಸರ್ವಾಧಿಕಾರಿ ಹೇಳಿಕೆ ನೀಡಿದ್ದರು. ಇಂತಹ ಘಟನಾವಳಿಗಳನ್ನು ಪರಾಮರ್ಶೆ ಮಾಡಿದರೆ, ಕಾಂಗ್ರೆಸ್ ಮತ್ತು ಅದರ ನಾಯಕರು ಸಂವಿಧಾನದ ಮೇಲೆ ಮಾಡಿದ ಆಕ್ರಮಣ ಪೂರ್ವ ನಿಯೋಜಿತ ಎಂಬುದು ಲಭ್ಯವಾಗುವ ಸತ್ಯ.

ದೇಶ ಇಂತ ಕಠಿಣ ಪರಿಸ್ಥಿತಿ ಎದುರಿಸುತ್ತಿದ್ದಾಗ ಆರ್‌ಎಸ್‌ಎಸ್ ನಂತರ ಸಾಮಾಜಿಕ ಸಂಘಟನೆ ಎಂದು ಭೂಗತವಾಗಿ ತಮ್ಮ ಮೇಲೆ ಆಗಬಹುದಾದ ಎಲ್ಲಾ ಆಕ್ರಮಣಗಳನ್ನು ಸಹಿಸಿಯೂ, ಸಂವಿಧಾನದ ರಕ್ಷಣೆಗೆ ಹೋರಾಟ ಮಾಡುವ ಮನೋಭಾವವನ್ನು ತನ್ನ ಕಾರ್ಯಕರ್ತರಲ್ಲಿ ಉಗಮಿಸುವಂತೆ ಮಾಡಿದ್ದು ಆರ್‌ಎಸ್‌ಎಸ್, ಸಂವಿಧಾನದ ಮೇಲೆ ಇರುವ ಗೌರವ ಮತ್ತು ಭಕ್ತಿಯನ್ನು ಅಭಿವ್ಯಕ್ತಗೊಳಿಸುತ್ತದೆ.

ಒಟ್ಟು ತುರ್ತು ಪರಿಸ್ಥಿತಿಯ ವಿರುದ್ಧದ ಹೋರಾಟದಲ್ಲಿ ಅತಿ ಹೆಚ್ಚು ಜನ ಬಂಧನಕ್ಕೊಳಗಾದವರು ಆರ್‌ಎಸ್‌ಎಸ್ ಕಾರ್ಯಕರ್ತರು ಮತ್ತು ಸ್ವಯಂಸೇವಕರು.

ಪತ್ರಿಕಾ ಮಾಧ್ಯಮದ ಮೇಲು ಅತೀವ ಎನ್ನುವಷ್ಟರಮಟ್ಟಿಗೆ ನಿರ್ಬಂಧ ಹೇರಿದಾಗಲೂ, ಭೂಗತವಾಗಿಯೇ ಕಹಳೆ ಪತ್ರಿಕೆಯ ಮೂಲಕ ಇಡೀ ದೇಶದೆಲ್ಲೆಡೆ ಜಾಗೃತಿ ಮೂಡಿಸಿದ್ದು ಸ್ವಯಂಸೇವಕರ ಅಪಾರ ಶ್ರಮದಿಂದ.

ಜಯಪ್ರಕಾಶ್ ನಾರಾಯಣರ ಲೋಕಸಂಘರ್ಷ ಸಮಿತಿಯ ನೇತೃತ್ವ, ಸುಂದರ್ ಸಿಂಗ್ ಭಂಡಾರಿ, ಆಂಧ್ರದ ಸಂಜೀವ್ ರೆಡ್ಡಿ, ತಮಿಳುನಾಡಿನ ಕೆ ಕೃಷ್ಣಮೂರ್ತಿ, ಜನ ಸಂಘದ ರಾಮಾ ಜೋಶಿ ಮುಂತಾದವರ ಹೋರಾಟ ಮತ್ತು ಮಾರ್ಗದರ್ಶನದ ಹೊರತಾಗಿಯೂ ಸರ್ವಾಧಿಕಾರಿಗಳು ತಲೆತಗ್ಗುವಂತೆ ಮಾಡಿದ್ದು ಆರ್‌ಎಸ್‌ಎಸ್‌ನ ಸ್ವಯಂಸೇವಕರು ಎಂಬುದರಲ್ಲಿ ಯಾವುದೇ ಉತ್ಪ್ರೇಕ್ಷೆ ಇರದು.

ನವೆಂಬರ್ 14, 1975ರಂದು ಸರ್ವಾಧಿಕಾರದ ವಿರುದ್ಧ ದೇಶವ್ಯಾಪ್ತಂತ ಸತ್ಯಾಗ್ರಹ ಸ್ಫೋಟವಾಯಿತು. ಸೆರೆಮನೆ ಒಳಗೆ, ಇದ್ದವರು ಉಪವಾಸ ಸತ್ಯಾಗ್ರಹ ಪ್ರಾರಂಭ ಮಾಡಿದರು.

ಬಂಧಿತರ ಪ್ರವಾಹವೇ, ಸುರುವಿಟ್ಟುಕೊಂಡಿತು. ದೇಶದ ಜೈಲುಗಳೆಲ್ಲ, ಹೌಸ್ ಫುಲ್. ವಿವಿಧ ಸಂಘಟನೆಗಳ ಕಾರ್ಯಕರ್ತರ ಜೊತೆಗೆ ಆರ್‌ಎಸ್‌ಎಸ್‌ನ ಸ್ವಯಂಸೇವಕರ ಜೈಲು ನೋಟ, ಮದುವೆ ಮನೆಗೆ ಗಂಡಿನ ದಿಬ್ಬಣ ಬರುವಂತೆ, ಭಾಸವಾಗುತ್ತಿತ್ತು. ಸ್ವಯಂಸೇವಕರು ಚೀಲ ಹಿಡಿದು ಹಾಡು –ಶೀಕಾಗಿ, ಕೇಕೆ ಹಾಕುತ್ತಾ ಜೈಲು ಸೇರುತ್ತಿದ್ದರು. ಸೆರೆಮನೆಯೊಳಗು ಸ್ವಯಂಸೇವಕರಿಂದ ಸಾಮೂಹಿಕವಾಗಿ ಪ್ರಾರ್ಥನೆಗಳ ಪುಸ್ತಕ ವಾಚನ ಮತ್ತು ಆಟ ಆಡುವುದು ಸಂಘದ ಶಾಖೆಯನ್ನೇ ನೆನಪು ಮಾಡುವಂತಿತ್ತು.

ಸಂಘದ ಸರಸಂಘಚಾಲಕರಾದ, ಬಾಳ ಸಾಹೇಬ ದೇವರಸ್ ವಿಶೇಷ ಮಾರ್ಗದರ್ಶನ ಮಾಡಿದ್ದರು. ಮುಂದೆ ಇಂಥದೊಂದು ವಿಷಕಾಲ ಮುಕ್ತಾಯವಾದ ಮೇಲೆ 1977ರಲ್ಲಿ ಸಂಘದ ಪ್ರೇರಣೆಯಿಂದ ದೇಶದ ಅನೇಕ ನಾಯಕರುಗಳು ಇಂದಿರಾ ಗಾಂಧಿ ಅವರ ವಿರುದ್ಧ ಚುನಾವಣೆಯಲ್ಲಿ ಜನತಾ ಪಕ್ಷದ ಮೂಲಕ ಜಯಭೇರಿ ಬಾರಿಸಿ,

1976ರಲ್ಲಿ 42ನೇ ತಿದ್ದುಪಡಿಯ ಮೂಲಕ ವಿರೂಪ ಗೊಳಿಸಿದ್ದ ಸಂವಿಧಾನದ ಅನೇಕ ವಿಧಿಗಳನ್ನು ಜನತಾ ಸರ್ಕಾರವು 44ನೇ ತಿದ್ದುಪಡಿಯಲ್ಲಿ ಸಂವಿಧಾನದಿಂದ ಹೊರದಬ್ಬಿತು ಇದರಲ್ಲೂ ಕೂಡ ಆರ್‌ಎಸ್‌ಎಸ್ ಪಾತ್ರ ಮತ್ತು ಪ್ರೇರಣೆ ಹಿರಿದಾದದ್ದೆ.

ಹೀಗೆ ತಾನು ಮಾಡಿದ ಸಂವಿಧಾನ ರಕ್ಷಣೆಯ ಕಾರ್ಯ, ಸಮಾಜ ಮುಖಿ ಕಾರ್ಯಗಳ ಕಾರಣದಿಂದಲೇ ಇಂದು ಆರೆಸ್ಸೆಸ್ ಅಂಬೇಡ್ಕರರ ಆಶಯದಂತೆ ಹಳ್ಳಿ ಹಳ್ಳಿಗೂ ಭಾರತದ ಮೂಲೆ ಮೂಲೆಗೂ ವಿಸ್ತಾರಗೊಳ್ಳಲು ಸಾಧ್ಯವಾಗಿದೆ.

ಸಂಘಕ್ಕೆ ನೂರು ವರ್ಷ ತುಂಬಿದ ಈ ದಿನಮಾನಗಳಲ್ಲಿ ನೈಜ ಸಂವಿಧಾನ ರಕ್ಷಕ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದು ಅವಿಸ್ಮರಣೀಯ ನಡಾವಳಿ.

ಆಧಾರ

ತುರ್ತು ಪರಿಸ್ಥಿತಿ, ಭಾರತದ ಪ್ರಜಾಪ್ರಭುತ್ವದ ಕರಾಳ ಅವಧಿ, ಪುಸ್ತಕ, ಲೇಖಕರು: ಎ ಸೂರ್ಯ ಪ್ರಕಾಶ್.

ಭುಗಿಲು, ರಾಷ್ಟ್ರೋತ್ಥಾನ ಸಾಹಿತ್ಯ, ಸಂವಿಧಾನ ರಚನಾ ಸಭೆಯ ಚರ್ಚೆಗಳು, ವೈ ಎಮರ್ಜೆನ್ಸಿ- ಅಮಿಯಾ ರಾವ್.

ಸಂಪಾದಕೀಯ

ಮರುಕಳಿಸುವ ಅಗ್ನಿದುರಂತಗಳು

ಕೆಲವು ದಿನಗಳ ಹಿಂದೆ ಲಕ್ನೋದ ಅಲಿಗಂಜ್‌ನಲ್ಲಿ ಕೋಚಿಂಗ್ ಸೆಂಟರ್ ಒಂದರಲ್ಲಿ ಸಂಭವಿಸಿದ ಅಗ್ನಿದುರಂತದಲ್ಲಿ 14 ಮಂದಿ ತರುಣರು ಸಾವನ್ನಪ್ಪಿದರು. ಕಟ್ಟಡಕ್ಕೆ ಬೆಂಕಿ ವ್ಯಾಪಿಸಿದಾಗ ಅಲ್ಲಿಂದ ಹೊರಬರಲಾಗದೆ ಹೋಗಿದ್ದ, ಕೆಲವರು ಕಿಟಕಿಯಿಂದಲೇ ಕೆಳಕ್ಕೆ ಹಾರಿದ ದೃಶ್ಯ ಮನಕಲಕುವಂತಿತ್ತು. ಸಂಭವನೀಯ ದುರಂತ ಸಂಭವಿಸಿದಾಗ ಕ್ಷಿಪ್ರವಾಗಿ ಹೊರಗೆ ಬರಲು ತುರ್ತು ನಿರ್ಗಮನ ದ್ವಾರಗಳೇ ಅಲ್ಲಿರಲಿಲ್ಲ... ಮೂರು ವಾರಗಳ ಮೊದಲಷ್ಟೇ ದಿಲ್ಲಿಯಲ್ಲಿ ಕೂಡಾ ಇದೇ ಬಗೆಯ ದೃಶ್ಯಗಳು ಕಂಡುಬಂದಿದ್ದವು. ಅಲ್ಲಿ ಸಣ್ಣ ಹೋಟೆಲೊಂದರಲ್ಲಿ ಇಂತಹುದೇ ಅಗ್ನಿದುರಂತ ಸಂಭವಿಸಿತ್ತು. 21 ಮಂದಿ ಸಾವಿಗೀಡಾಗಿದ್ದರು. ಅಲ್ಲೂ ಆ ಕಟ್ಟಡಕ್ಕೆ ಇಕ್ಕಟ್ಟಾದ ಮೆಟ್ಟಿಲು ವ್ಯವಸ್ಥೆ ಇತ್ತು. ಎಮರ್ಜೆನ್ಸಿ ಬಾಗಿಲು ಇರಲಿಲ್ಲ. ಎರಡೂ ಪ್ರಸಂಗಗಳಲ್ಲಿ ಸುರಕ್ಷಾ ನಿಯಮಗಳನ್ನು ಮತ್ತು ಇನ್ನಿತರ ಸರಕಾರಿ ನಿಯಮಗಳನ್ನು ಉಲ್ಲಂಘಿಸಿ ವ್ಯವಹಾರ ನಡೆಯುತ್ತಿತ್ತು. ಲಕ್ನೋ ಪ್ರಸಂಗದಲ್ಲಂತೂ ಕೆಲವು ವರ್ಷಗಳ ಹಿಂದೆ ಆ ಕಟ್ಟಡವನ್ನು ಕೆಡಹುವಂತೆ ಸ್ಥಳೀಯಾಡಳಿತದಿಂದ ನೋಟಿಸು ಜಾರಿಯಾಗಿತ್ತು. ಆದರೆ ಎರಡೇ ತಿಂಗಳಲ್ಲಿ ರಾಜಕೀಯ ಪ್ರಭಾವ ಬೀರಿ ಆ ನೋಟಿಸು ರದ್ದುಪಡಿಸುವಲ್ಲಿ ಕಟ್ಟಡ ಮಾಲಕರು ಸಫಲರಾಗಿದ್ದರು. ಒಟ್ಟಿನಲ್ಲಿ ಇಂತಹ ದುರಂತಗಳು ಸಂಭವಿಸಲು ಸಂಬಂಧಪಟ್ಟ ಕಟ್ಟಡಗಳ ಮಾಲಕರು, ಅಲ್ಲಿ ವ್ಯವಹಾರ ನಡೆಸುವ ಮಂದಿ ಎಷ್ಟು ಹೊಣೆಗಾರರೋ, ಸ್ಥಳೀಯಾಡಳಿತ ಸಂಸ್ಥೆಗಳ ಭ್ರಷ್ಟಾಚಾರಿ ವ್ಯವಸ್ಥೆ, ರಾಜಕೀಯ ಭ್ರಷ್ಟಾಚಾರ ಕೂಡಾ ಅಷ್ಟೇ ಹೊಣೆಗಾರನಾಗಿದೆ. ಕಟ್ಟಡಕ್ಕೆ ಕಣ್ಣುಮುಚ್ಚಿ ನಿರ್ವಹಣಾ ಪರವಾನಿಗೆ ನೀಡುವುದು, ಕಟ್ಟಡಗಳ ಸುರಕ್ಷಾ ವ್ಯವಸ್ಥೆಯನ್ನು ಪರಿಶೀಲಿಸದೆಯೇ ಅಲ್ಲಿ ವ್ಯವಹಾರ ನಿರ್ವಹಣೆಗೆ ಅನುಮತಿ ನೀಡುವುದು, ತುರ್ತು ಸಂದರ್ಭದಲ್ಲಿ ಅಗ್ನಿಶಾಮಕ ವ್ಯವಸ್ಥೆ ಸಮರ್ಪಕವಾಗಿ ಕಾರ್ಯಾಚರಿಸಲು ಬೇಕಾದಂತಹ ಸ್ಥಳಾವಕಾಶ ಇದೆಯೆ ಎಂದು ಪರಿಶೀಲಿಸದಿರುವುದು... ಇವೆಲ್ಲವೂ ವ್ಯವಸ್ಥೆಯ ಕಡೆಯಿಂದಾಗುವ ಲೋಪಗಳು. ಸ್ಥಳೀಯಾಡಳಿತವು ಕ್ರಮ ಕೈಗೊಳ್ಳಲು ಮುಂದಾಗುವಾಗ ರಾಜಕೀಯ ಹಸ್ತಕ್ಷೇಪ ನಡೆದು ಅದಕ್ಕೆ ತಡೆ ಬೀಳುವುದೂ ಇದೆ. ಇದು ಎಲ್ಲೋ ಒಂದೆರಡು ಕಡೆ ನಡೆಯುವ ವಿಚಾರವಲ್ಲ, ದೇಶದಲ್ಲೆಲ್ಲೇ ಇಂತಹ ಅವ್ಯವಸ್ಥೆಗಳು ನಡೆಯುವುದಿದೆ.

ಕಟ್ಟಡ ನಿರ್ಮಾಣದಲ್ಲಿ ಮತ್ತು ಅಲ್ಲಿ ನಡೆಯುವ ವಾಣಿಜ್ಯಕ ವ್ಯವಹಾರಗಳಲ್ಲಿ ನಡೆಯುವ ನಿಯಮ ಉಲ್ಲಂಘನೆ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳದ ಹೊರತು, ಇದರಲ್ಲಿ ರಾಜಕೀಯ ಹಸ್ತಕ್ಷೇಪ ನಿಲ್ಲದ ಹೊರತು ಇಂತಹ ದುರ್ಘಟನೆಗಳು ನಡೆಯುತ್ತಲೇ ಇರುತ್ತವೆ. ರಾಜ್ಯ, ಪ್ರದೇಶ, ಕಟ್ಟಡ, ಸಂದರ್ಭ ಭಿನ್ನವಾಗಿರಬಹುದು ಅಷ್ಟೆ. ವಾಣಿಜ್ಯಕವಾಗಿ ಕಾರ್ಯ ನಿರ್ವಹಿಸುವ ಪ್ರತಿಯೊಂದು ಕಟ್ಟಡ, ಅಲ್ಲಿನ ವ್ಯವಹಾರ ಕ್ಷೇತ್ರವು ಸೂಕ್ತ ಸುರಕ್ಷಾ ಕ್ರಮಗಳನ್ನು ಒಳಗೊಂಡಿರುವಂತೆ, ತುರ್ತು ಸಂದರ್ಭಗಳಲ್ಲಿ ಕ್ಷಿಪ್ರ ನಿರ್ಗಮನಕ್ಕೆ ಅವಕಾಶ ಕಲ್ಪಿಸುವ ವ್ಯವಸ್ಥೆ ಹೊಂದಿರುವಂತೆ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರುವುದು ಅತ್ಯಗತ್ಯವಾಗಿದೆ.

ಬರಗಾಲದಲ್ಲಿ ಚರ್ಚಿಲ್ ನರಮೇಧದ ಕರಾಳ ನೆನಪು

ಗುರುತರ
▪ ಸೋಮಶೇಖರ ಸಿ.ಜೆ.
sompreethi@gmail.com

ಬ್ರಿಟನ್ ಜಗತ್ತಿಗೆ ಪತ್ರಿಕಾ ಸ್ವಾತಂತ್ರ್ಯದ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಪಾಠ ಹೇಳುವ ದೇಶ. ಆದರೆ ಆ ದೇಶದ ಹೃದಯ ಭಾಗದ ವಸ್ತುಸಂಗ್ರಹಾಲಯವೊಂದು, ಕೇವಲ ಒಂದು ವಿಡಿಯೋವನ್ನು ಸಹಿಸಲಾರದೆ ಹೋಯಿತು. ಲಂಡನ್‌ನ ನ್ಯಾಷನಲ್ ಪೋರ್ಟ್ರೇಟ್ ಗ್ಯಾಲರಿಯಲ್ಲಿ ಕಳೆದ ಸೆಪ್ಟೆಂಬರ್‌ನಿಂದ ಪ್ರದರ್ಶನದಲ್ಲಿದ್ದ, ಟರ್ನರ್ ಪ್ರಶಸ್ತಿ ವಿಜೇತ ಕಲಾವಿದೆ ಹೆಲೆನ್ ಕ್ಯಾಮಕ್ ಅವರ 40 ನಿಮಿಷದ ಪರ್ಗೆಸ್ಟ್ನ್ ಎಂಬ ವಿಡಿಯೋ ಕೃತಿಯನ್ನು, ಈ ವಾರ ಗ್ಯಾಲರಿ ಹಿಂಪಡೆದಿದೆ. ಕಾರಣ ಎಂದರೆ ಆ ಕೃತಿ ಅಲ್ಲಿನ ಮಾಜಿ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ ಮತ್ತು 1943ರ ಬಂಗಾಳ ಕ್ಷಾಮದ ಬಗ್ಗೆ ಆಡಿದ ಮಾತುಗಳು.

ಆ ವಿಡಿಯೋ, ಬಂಗಾಳ ಕ್ಷಾಮವನ್ನು ಚರ್ಚಿಲ್‌ರಿಂದ ಭಾರತೀಯರ ಉದ್ದೇಶಪೂರ್ವಕ ನಡೆಸಿದ ಹತ್ಯೆ ಎಂದು ಬಣ್ಣಿಸಿತ್ತು. ಜೊತೆಗೆ ಚರ್ಚಿಲ್‌ರ ನಡೆಯನ್ನು ಐರ್ಲೆಂಡ್‌ನಲ್ಲಿ ಕ್ರಾಮ್‌ವೆಲ್ ನಡೆಸಿದ ದಂಡಯಾತ್ರೆಗೆ ಹೋಲಿಸಿತ್ತು. ಚರ್ಚಿಲ್‌ರ ಜೀವನಚರಿತ್ರಕಾರ ಆಂಡ್ರ್ಯೂ ರಾಬರ್ಟ್ಸ್ ಮುಂದಾಳತ್ವದಲ್ಲಿ, ಚರ್ಚಿಲ್‌ರ ಮೊಮ್ಮಗ ಸರ್ ನಿಕೋಲಸ್ ಸೋಮ್ಸ್ ಸೇರಿದಂತೆ 50ಕ್ಕೂ ಹೆಚ್ಚು ಹೌಸ್ ಆಫ್ ಲಾರ್ಡ್ಸ್ ಸದಸ್ಯರು ಗ್ಯಾಲರಿಗೆ ಬಹಿರಂಗ ಪತ್ರ ಬರೆದು, ಅದನ್ನು ಸೈದ್ಧಾಂತಿಕ ಪ್ರೇರಿತ ಅಸಂಬದ್ಧ ಕೂಗು, ಹೀನ ಮತ್ತು ನೀಚ ಎಂದು ಜರಿದರು. ಕಡೆಯದಾಗಿ, ಒತ್ತಡ ಹೆಚ್ಚಿದಾಗ ಕಲಾವಿದೆ ಸ್ವತಃ ಕೃತಿ ಹಿಂಪಡೆದರು. ಆದರೆ ಆ ಸ್ವಯಂ ನಿರ್ಧಾರದ ಹಿಂದಿನ ಕೈ ಯಾವುದು ಎಂಬುದು ಎಲ್ಲರಿಗೂ ಗೊತ್ತು.

ಇಲ್ಲಿ ನಿಜವಾದ ಪ್ರಶ್ನೆ ಕಲೆಯದ್ದಲ್ಲ, ಬದಲಾಗಿ ಬ್ರಿಟನ್ ತನ್ನದೇ ಮುಖವನ್ನು ಕನ್ನಡಿಯಲ್ಲಿ ನೋಡಲು ಏಕೆ ಹೆದರುತ್ತದೆ ಎಂಬುದು. ಏಕೆಂದರೆ 1943 ಎಂಬುದು ಕೇವಲ ಒಂದು ಇಸವಿಯಲ್ಲ, ಅದು ಬಂಗಾಳದ ರಸ್ತೆಗಳಲ್ಲಿ ಮೂಳೆಚಕ್ಕಳವಾಗಿ ಬಿದ್ದ ಸುಮಾರು 30 ಲಕ್ಷ ಜೀವಗಳ ಕಥನ. ತಾಯಿಯ ಬರಿದಾದ ಎದೆಯನ್ನು ಚೀಪುತ್ತಲೇ ಪ್ರಾಣ ಬಿಟ್ಟ ಕಂದಮ್ಮಗಳ, ಅನ್ನದ ಒಂದು ತುತ್ತಿಗಾಗಿ ಕೋಲ್ಕತ್ತಾದ ಚರಂಡಿಯಂಚಿನಲ್ಲಿ ಕುಸಿದ ಬಡವರ ಕಥನ. ಮತ್ತು ಇದು ಪ್ರಕೃತಿಯ ಆಕಸ್ಮಿಕ ಅಲ್ಲ, ಬದಲಾಗಿ ಬಹುಪಾಲು ಇದು ಮಾನವ ನಿರ್ಮಿತ ದುರಂತ.

ಕ್ಷಾಮಕ್ಕೆ ಹಲವು ಕಾರಣಗಳಿದ್ದವು ನಿಜ. 1942ರ ಚಂಡಮಾರುತ, ಜಪಾನ್ ವಶಪಡಿಸಿಕೊಂಡ ಬರ್ಮಾದಿಂದ ಅಕ್ಕಿ ಆಮದು ಸ್ಥಗಿತ, ಅಕ್ರಮ ದಾಸ್ತಾನು ಹಾಗೂ ಯುದ್ಧಕಾಲದ ಹಣದುಬ್ಬರ ಪ್ರಮುಖ ಕಾರಣಗಳಾಗಿದ್ದವು. ಆದರೆ ಈ ಎಲ್ಲದರ ಮೇಲೆ ಕುಳಿತದ್ದು ಬ್ರಿಟಿಷ್ ಯುದ್ಧ ಮಂತ್ರಿಮಂಡಲದ ತೀರ್ಮಾನಗಳು. ಜಪಾನ್ ದಂಡೆತ್ತಿ ಬಂದರೆ ಅವರಿಗೆ ಸಿಗಬಾರದು ಎಂಬ ನೆಪದಲ್ಲಿ ಕರಾವಳಿ ಬಂಗಾಳದ ದೋಣಿಗಳನ್ನೂ ಅಕ್ಕಿಯನ್ನೂ ಕಿತ್ತುಕೊಂಡ ನಿರಾಕರಣ ನೀತಿ ರೈತನ ಬದುಕನ್ನೇ ಮುರಿಯಿತು. ಬಂಗಾಳ ಹಸಿವಿನಿಂದ ಸಾಯುತ್ತಿರುವಾಗಲೂ ಭಾರತದಿಂದ ಧಾನ್ಯ ರಫ್ತಾಗುತ್ತಿತ್ತು ಎಂದರೆ ಅವರ ಕಟುಕತನ ಹೇಗಿರಬೇಕು ಎಂಬುದನ್ನು ಊಹಿಸಿಕೊಳ್ಳಿ. ಆಸ್ಟ್ರೇಲಿಯಾ ಹಾಗೂ ಕೆನಡಾಗಳು ನೀಡಲು ಮುಂದಾದ ಗೋಧಿಯ ಹಡಗುಗಳನ್ನು ಯುದ್ಧಕ್ಕೆ ಹಡಗು ಬೇಕು ಎಂದು ತಿರಸ್ಕರಿಸಲಾಯಿತು. ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ತೋರಿಸಿಕೊಟ್ಟಂತೆ, ಆಹಾರ ಇತ್ತು. ಆದರೆ ಬಡವರ ಕೈಗೆ ಅದು ಎಟುಕದಂತೆ ವ್ಯವಸ್ಥೆಯೇ ನೋಡಿಕೊಂಡಿತು. ಕ್ಷಾಮ ಎಂಬುದು ಎಂದಿಗೂ ಬರೀ ಹವಾಮಾನದ ಫಲವಲ್ಲ, ಅದು ರಾಜಕೀಯ ಆಯ್ಕೆಯ ಫಲ ಎಂಬುದು ಅಂದು ಸಾಬೀತಾಯಿತು.

ಆ ಆಯ್ಕೆಯ ಬೇರು ಇದ್ದದ್ದು ಭಾರತೀಯನ ಬಗ್ಗೆ ಬ್ರಿಟಿಷ್ ಆಡಳಿತಗಾರರು ಇಟ್ಟಿದ್ದ ತಿರಸ್ಕಾರದಲ್ಲಿ. ಸ್ವತಃ ಚರ್ಚಿಲ್ ಭಾರತೀಯರನ್ನು ತೀರಾ ಕ್ಷುಲ್ಲಕವಾಗಿ ನೋಡುತ್ತಿದ್ದರು. ಭಾರತೀಯರು ಮೊಲಗಳಂತೆ ಹೆಚ್ಚುತ್ತಾರೆ ಎಂದು ಕರೆದಿದ್ದರು. ಬಂಗಾಳದಲ್ಲಿ ಲಕ್ಷಗಟ್ಟಲೆ ಜನ ಸಾಯುತ್ತಿದ್ದಾರೆ ಎಂಬ ವರದಿ ಬಂದಾಗ, ಹಾಗಾದರೆ ಗಾಂಧಿ ಇನ್ನೂ ಏಕೆ ಸತ್ತಿಲ್ಲ? ಎಂದು ಅತಿ ಕೆಟ್ಟ, ಅಮಾನುಷ, ಅಮಾನವೀಯ ಪ್ರಶ್ನೆ ಕೇಳಿದಾತ ಇವರು. ಅಂದಿನ ಬ್ರಿಟಿಷ್ ಸಾಮ್ರಾಜ್ಯಕ್ಕೆ ಭಾರತೀಯನ ಜೀವ ಒಂದು ಜೀವವಾಗಿರಲಿಲ್ಲ, ಅದು ಲೆಕ್ಕಪತ್ರದ ಒಂದು ಸಂಖ್ಯೆ ಅಷ್ಟೇ ಆಗಿತ್ತು. ಯುದ್ಧ ಯಂತ್ರಕ್ಕೆ ಹೋದ ಧಾನ್ಯ ಬಂಗಾಳಿಯ ಹೊಟ್ಟೆಗೂ ಹೋಗಬಹುದಿತ್ತು. ಆ ಆಯ್ಕೆ ಮಾಡದೇ, ಭಾರತೀಯರನ್ನು ವರ್ಣಾಧಾರಿತವಾಗಿ ಗುರುತಿಸಿ, ತೀರಾ ಕೆಟ್ಟದಾಗಿ ಬಳಸಿಕೊಂಡರು. ಅವರ ಈ ತಿರಸ್ಕಾರ ಒಂದು ವ್ಯಕ್ತಿಯ ಮನೋಭಾವವಾಗಿರಲಿಲ್ಲ, ಅದು ಇಡೀ ವಸಾಹತುಶಾಹಿ ವ್ಯವಸ್ಥೆಯ ತಿರುಳಾಗಿತ್ತು. ಶತಮಾನಗಳ ಕಾಲ ಭಾರತದ ಸಂಪತ್ತನ್ನು ಬಸಿದು ಬ್ರಿಟನ್‌ಗೆ ಸಾಗಿಸಿದ ಆ ಸಂಪತ್ತಿನ ಬಸಿತದ ಮುಂದುವರಿಕೆಯೇ 1943ರ ಹಸಿವು. ಬಂಗಾಳಿಯ ಹೊಟ್ಟೆ ಖಾಲಿಯಾದರೆ ಪರವಾಗಿಲ್ಲ, ಲಂಡನ್‌ನ ಯುದ್ಧ ಬಜೆಟ್ ತುಂಬಬೇಕು ಎಂಬುದೇ ಆ ಆಡಳಿತದ ಲೆಕ್ಕಾಚಾರವಾಗಿತ್ತು.

ಇಷ್ಟಾದರೂ, ಎಂಟು ದಶಕ ಕಳೆದರೂ, ಬ್ರಿಟನ್ ಈ ಪಾಪಕ್ಕೆ ಒಂದು ಬಾರಿಯೂ ಕ್ಷಮೆ ಕೇಳಿಲ್ಲ. ಚರ್ಚಿಲ್ ಕೇಳಲಿಲ್ಲ, ಅವರ ನಂತರ ಬಂದವರೂ ಕೇಳಲಿಲ್ಲ. ಪ್ರತಿಮೆಗಳಲ್ಲಿ, ನೋಟುಗಳಲ್ಲಿ ಹಾಗೂ ಪಠ್ಯಪುಸ್ತಕಗಳಲ್ಲಿ ಚರ್ಚಿಲ್ ಯುದ್ಧ ನಾಯಕನಾಗಿ ವಿಜೃಂಭಿಸುತ್ತಲೇ ಇದ್ದಾರೆ. ಮತ್ತೊಂದೆಡೆ ಬಂಗಾಳದ 30 ಲಕ್ಷ ಮಂದಿ ಒಂದು ಅಡಿಟಿಪ್ಪಣಿಯಾಗಿ ಮಸುಕಾಗಿದ್ದಾರೆ. ಗ್ಯಾಲರಿಯಿಂದ ವಿಡಿಯೋ ತೆಗೆದದ್ದು ಇದೇ ನಿರಾಕರಣೆಯ ಹೊಸ ಅಧ್ಯಾಯ. ನಾವು ಕೇಳುತ್ತಿರುವುದು ಸೇಡಲ್ಲ, ಸತ್ಯದ ಸ್ವೀಕಾರ ಮಾತ್ರ. ಇತಿಹಾಸವನ್ನು ಅಳಿಸಿ ಹಾಕುವ ಮೂಲಕ ಅಪರಾಧವನ್ನು ಪವಿತ್ರಗೊಳಿಸಲಾಗದು.

ಈ ಹಳೆಯ ಗಾಯವನ್ನು ಈಗಲೇ ಏಕೆ ಕೆದಕಬೇಕು? ಇದಕ್ಕೆ ಉತ್ತರಗಳೂ ಇವೆ. ಅಲ್ಲಿನ ಸಂಗ್ರಹಾಲಯದಿಂದ ವಿಡಿಯೋ ತೆಗೆದ ಹೊತ್ತಲ್ಲೇ, ಭಾರತವೂ ಸೇರಿದಂತೆ ಜಗತ್ತು ಎಲ್ ನಿನೋದ ಅಟ್ಟಹಾಸ ಎದುರಿಸಲು ಕುಳಿತಿದೆ. ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಈ ಬಾರಿ ಸಾಧಾರಣಕ್ಕಿಂತ ಕಡಿಮೆ, ಅಂದರೆ ದೀರ್ಘಾವಧಿ ಸರಾಸರಿಯಾದ 870 ಮಿ.ಮೀ.ಗೆ ಬದಲು ಸುಮಾರು 800 ಮಿ.ಮೀ. ಮಳೆಯ ಮುನ್ಸೂಚನೆ ನೀಡಿದೆ. ಇದರೊಂದಿಗೆ ಬರದ ಸಾಧ್ಯತೆ ಸಾಮಾನ್ಯಕ್ಕಿಂತ ದುಪ್ಪಟ್ಟಾಗಿದೆ. 2015 ರಿಂದ 2016ರ ಅವಧಿಯ ಪ್ರಬಲ ಎಲ್ ನಿನೋ ತಂದ ಬರ ಹಾಗೂ 2002ರ ಭೀಕರ ಕೊರತೆ ಇನ್ನೂ ನೆನಪಿನಲ್ಲಿವೆ. ದೇಶದ ಶೇ.60ರಷ್ಟು ರೈತರು ಇಂದಿಗೂ ಮುಂಗಾರಿನ ಮೇಲೆಯೇ ಅವಲಂಬಿತರು. ಬರ ಮತ್ತೆ ಬಾಗಿಲು ತಟ್ಟುತ್ತಿದೆ. ಕರ್ನಾಟಕದಂತಹ ರಾಜ್ಯಗಳಲ್ಲಿ ಮಳೆ ಕೈಕೊಟ್ಟರೆ ಉತ್ತರ ಕರ್ನಾಟಕ ಮತ್ತು ಬಯಲುಸೀಮೆಯ ರೈತ ಮೊದಲ ಬಲಿಪಶು. ಜಲಾಶಯಗಳ ನೀರಿನ ಮಟ್ಟ, ಬಿತ್ತನೆ ಬೀಜ ಮತ್ತು ಮೇವಿನ ದಾಸ್ತಾನು ಇವೆಲ್ಲ ಈಗಿನಿಂದಲೇ ನಿಗಾ ಬೇಡುವ ಸಂಗತಿಗಳು.

ಆದರೆ 1943 ಮತ್ತು 2026ರ ನಡುವೆ ಒಂದು ಮೂಲಭೂತ ವ್ಯತ್ಯಾಸವಿದೆ. ಆ ವ್ಯತ್ಯಾಸದಲ್ಲೇ ನಮ್ಮ ಭರವಸೆ ಅಡಗಿದೆ. ಅಂದು, ಯಾವ ಭಾರತೀಯನಿಗೂ ಉತ್ತರದಾಯಿಯಲ್ಲದ ವಸಾಹತುಶಾಹಿ ಆಡಳಿತ ಜನರನ್ನು ಸಾಯಲು ಬಿಟ್ಟಿತು. ಇಂದು, ಆಹಾರ ಭದ್ರತೆಯ ಒಂದಿಡೀ ರಚನೆ ನಮ್ಮ ಬಳಿಯಿದೆ. ಭಾರತೀಯ ಆಹಾರ ನಿಗಮದ ಬಫರ್ ದಾಸ್ತಾನು, ಸಾರ್ವಜನಿಕ ಪಡಿತರ ವ್ಯವಸ್ಥೆ, ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ, ಉದ್ಯೋಗ ಖಾತರಿ ಯೋಜನೆ, ಬೆಳೆ ವಿಮೆ, ಮುಂಚಿತ ಎಚ್ಚರಿಕೆ ವ್ಯವಸ್ಥೆ ಹಾಗೂ ನೀರಾವರಿ ಜಾಲ ನಮ್ಮಲ್ಲಿವೆ. ಇಂದು ಭಾರತದಲ್ಲಿ ಕ್ಷಾಮ ಸಂಭವಿಸಿದರೆ ಅದು ವಿಧಿಯ ಆಟವಲ್ಲ, ಅದು ಆಡಳಿತದ ವೈಫಲ್ಯ. ಆದರೂ ಆತ್ಮತೃಪ್ತಿ ಸಲ್ಲದು. ಹವಾಮಾನ ಬದಲಾವಣೆ, ಸಣ್ಣ ರೈತರ ಸಂಕಷ್ಟ, ಅಂತರ್ಜಲ ಕುಸಿತ ಹಾಗೂ ವಿತರಣೆಯ ಸೋರಿಕೆ ಇವು ಇನ್ನೂ ನಮ್ಮ ದೌರ್ಬಲ್ಯಗಳು.

ಸೇನ್ ಹೇಳಿದ ಪಾಠ ಇಂದಿಗೂ ಪ್ರಸ್ತುತ. ಪ್ರಜಾಪ್ರಭುತ್ವ, ಮುಕ್ತ ಪತ್ರಿಕೋದ್ಯಮ ಮತ್ತು ಉತ್ತರದಾಯಿತ್ವ ಇರುವಲ್ಲಿ ಕ್ಷಾಮ ಸಂಭವಿಸುವುದಿಲ್ಲ. ಆದ್ದರಿಂದ ಸಿದ್ಧತೆ ಎಂಬುದು ಬರೀ ಗೋದಾಮಿನ ಲೆಕ್ಕವಲ್ಲ, ಅದು ರಾಜಕೀಯ ಇಚ್ಛಾಶಕ್ತಿ. ಬರಪೀಡಿತ ತಾಲ್ಲೂಕುಗಳ ಶೀಘ್ರ ಘೋಷಣೆ, ಪಡಿತರ ಸಮಯಕ್ಕೆ ಸರಿಯಾಗಿ ತಲುಪುವಂತೆ ನೋಡಿಕೊಳ್ಳುವುದು, ಕುಡಿಯುವ ನೀರಿನ ಟ್ಯಾಂಕರ್ ಜಾಲ, ಜಾನುವಾರು ಶಿಬಿರ, ಉದ್ಯೋಗ ಖಾತರಿಯಡಿ ಕೆಲಸದ ಭರವಸೆ ಹಾಗೂ ರೈತರ ಸಾಲ ಮನ್ನಾ ಇವೆಲ್ಲವೂ ಒಂದು ಹಸಿವನ್ನು ತಡೆಯುವ ಗೋಡೆಗಳು. ಈ ಗೋಡೆಗಳನ್ನು ಮಳೆ ಕೈಕೊಡುವ ಮೊದಲೇ ಕಟ್ಟಬೇಕು. ನಂತರ ಅಲ್ಲ. ಈಗಿನ ಸರ್ಕಾರಗಳು ಇದನ್ನು ಯಶಸ್ವಿಯಾಗಿ ಮಾಡುವ ಶಕ್ತಿಯನ್ನು ಹೊಂದಿವೆ ಎಂಬುದರಲ್ಲಿ ಅನುಮಾನವಿಲ್ಲ.

ಆದ್ದರಿಂದ 1943 ಬರೀ ಇತಿಹಾಸವಲ್ಲ, ಅದು ಒಂದು ಕನ್ನಡಿಯೂ ಹೌದು. ಜೊತೆಗೆ ಒಂದು ಎಚ್ಚರಿಕೆಯೂ ಹೌದು. ಚರ್ಚಿಲ್‌ರ ಪಾಪವನ್ನು ನೆನಪಿಸಿಕೊಳ್ಳುವುದು ದ್ವೇಷವಲ್ಲ, ಬದಲಿಗೆ ಅಂದು ನಮ್ಮ ಮೇಲೆ ಅವರು ನಡೆಸಿದ ಅಮಾನವೀಯ ಸವಾರಿಯ ಕರಾಳ ನೆನಪಷ್ಟೇ. ಹಾಗೆಯೇ, ತೀರಾ ಈಗ ಮಾನವತೆಯ ವಕ್ತಾರರಂತೆ ಮಾತನಾಡುವ ಈ ಪಾಶ್ಚಿಮಾತ್ಯರಿಗೆ ಆಗಾಗ ನೆನಪಿಸಬೇಕಾದ ಸಂಗತಿಯೂ ಹೌದು.

◆

ಲಕ್ಷ್ಮಿ ಯಾರ ಸಮೀಪ ಸುಳಿಯುವುದಿಲ್ಲ?

ಶ್ಲೋಕ ಸಾಗರ
ಡಾ. ಸೋಂದಾ ಭಾಸ್ಕರ ಭಟ್

ಅತ್ಯಾರ್ಯಂ ಅತಿದಾತಾರಂ ಅತಿಶೂರಂ ಅತಿವ್ರತಮ್ ।
ಪ್ರಜ್ಞಾಭಿಮಾನಿನಂ ಚೈವ ಶ್ರೀರ್ಭಯಾನ್ನೋಪಸರ್ಪತಿ ॥ -ಮಹಾಭಾರತ

ಅತಿಯಾದ ಸೌಜನ್ಯವಿರುವವನು, ಅತಿ ದಾನಿ, ಅತಿಶೂರ, ಅತಿಯಾದ ನಿಯಮಶೀಲ, ಪಂಡಿತ, ಅಭಿಮಾನಿ–ಇವರುಗಳನ್ನು ಲಕ್ಷ್ಮಿಯು (ಸಂಪತ್ತು) ಹೆದರಿ ಹತ್ತಿರ ಹೋಗುವುದಿಲ್ಲ - ಎಂಬುದು ಶ್ಲೋಕಾರ್ಥ.

ಎಲ್ಲರೂ ಸಂಪತ್ತನ್ನು ಬಯಸಿದರೂ ಎಲ್ಲರಲ್ಲಿಯೂ ಸಂಪತ್ತಿರುವುದಿಲ್ಲ. ಬಯಸುವವರೆಲ್ಲರನ್ನೂ ಹುಡುಕಿಕೊಂಡು ಸಂಪತ್ತು ಬರುವುದಿಲ್ಲ. ಸಂಪತ್ತು ನೆಲೆ ನಿಲ್ಲಬೇಕಾದರೂ ಕೆಲವು ಅಂಶಗಳಿರಬೇಕು. ಲಕ್ಷಣಗಳನ್ನು ಹೊಂದಿರಬೇಕು. ಇದನ್ನು ಪ್ರಕೃತ ಶ್ಲೋಕದಲ್ಲಿ ಹೇಳಲಾಗಿದೆ. ಇಂಥವರ ಸಮೀಪ ಲಕ್ಷ್ಮಿ ಹೋಗುವುದಿಲ್ಲವಂತೆ. ಇದಕ್ಕೆ ಕಾರಣ ಅವರನ್ನು ಕಂಡರೆ ಲಕ್ಷ್ಮಿಗೆ ಹೆದರಿಕೆ. ಹಾಗಿದ್ದರೆ ಯಾರನ್ನೆಲ್ಲ ಕಂಡರೆ ಹೆದರಿಕೆ ಎಂಬುದನ್ನು ಇಲ್ಲಿ ನೀಡಲಾಗಿದೆ.

ಅತಿಯಾದ ಸೌಜನ್ಯವಿರುವವನ ಸಮೀಪ ಲಕ್ಷ್ಮಿ ಸುಳಿಯಲಾರಳು. ಇದಕ್ಕೆ ಕಾರಣ ಅತಿಯಾದ ಸೌಜನ್ಯವೇ ಆಗಿದೆ. ಸೌಜನ್ಯವಿರುವವರಿಗೆ ಸಂಪತ್ತನ್ನು ಇಟ್ಟುಕೊಳ್ಳಬೇಕು, ಕೂಡಿಡಬೇಕು ಎಂಬ ಭಾವನೆ ಇರದು. ಯಾರಾದರೂ ಕಷ್ಟವನ್ನು ಹೇಳಿಕೊಂಡರೆ ಎಲ್ಲವನ್ನೂ ಕೊಟ್ಟುಬಿಡುತ್ತಾರೆ. ಪೂರ್ವಾಪರವನ್ನು ಕೂಲಂಕಷವಾಗಿ ವಿಚಾರಿಸದೇ ನೀಡುತ್ತಾರೆ. ಹೀಗೆ ಎಷ್ಟಿದ್ದರೂ ಸಾಲದು. ಈ ಕಾರಣಕ್ಕಾಗಿಯೇ ಹೆದರಿದ ಲಕ್ಷ್ಮಿ ಅವರ ಸಮೀಪ ಸಾರಲಾರಳು.

ಅತಿದಾತಾರ ಎಂದರೆ ಧಾರಾಳಿ. ಇವನ ಸ್ವಭಾವವೂ ಅಷ್ಟೇ! ತನ್ನಲ್ಲಿ ಇರುವುದನ್ನು ಧಾರಾಳವಾಗಿ ನೀಡುವುದು. ಮುಂದೆ ಬೇಕಾದೀತು... ಇತ್ಯಾದಿಯಾಗಿ ಯೋಚನೆಯನ್ನು ಮಾಡದೆ ಕೊಡುತ್ತಾನೆ. ಹೀಗಿರುವಾಗ ಲಕ್ಷ್ಮಿ ನೆಲೆನಿಲ್ಲಲು ಹೇಗೆ ಸಾಧ್ಯ? ಅಲ್ಪಸ್ವಲ್ಪವಾದರೂ ಕೂಡಿಡುವ ಸ್ವಭಾವವಿದ್ದರೆ ಲಕ್ಷ್ಮಿ ನೆಲೆಸುತ್ತಾಳೆ. ಅದೇ ಇಲ್ಲದಿದ್ದರೆ ನೆಲೆಸುವುದಾದರೂ ಹೇಗೆ?

ಅತಿ ಶೂರನಲ್ಲಿಯೂ ಲಕ್ಷ್ಮಿ ನೆಲೆ ಕಾಣಳು. ಜೀವನವನ್ನೆಲ್ಲ ಸಾಹಸ ಕಾರ್ಯದಲ್ಲಿ, ಶೌರ್ಯ ಪ್ರದರ್ಶನದಲ್ಲಿಯೇ ಕಳೆದರೆ, ಅದಕ್ಕೆ ಬೇಕಾದ ಸಿದ್ಧತೆಗೆ ಗಳಿಸಿದ ಹಣವೆಲ್ಲ ಬಳಕೆಯಾಗುತ್ತದೆ. ಹೀಗಿರುವಾಗ ಲಕ್ಷ್ಮಿ ಹೇಗೆ ನಿಂತಾಳು?

ಅತಿಯಾದ ನಿಯಮಶೀಲನಲ್ಲೂ ಲಕ್ಷ್ಮಿ ನೆಲೆ ನಿಲ್ಲಲು ಸಾಧ್ಯವಾಗುವುದಿಲ್ಲ. ಅಲ್ಲಿ ಅವಳಿಗೆ ಸ್ಥಾನವಿಲ್ಲ. ಹೀಗಿರುವಾಗ ನೆಲೆಸಲು ಹೇಗೆ ಸಾಧ್ಯ? ಪಂಡಿತರ ಗಮನ ಹರಿಯುವುದು ಪಾಂಡಿತ್ಯದತ್ತ. ಅದಕ್ಕೆ ಬೇಕಾದುದನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಾರೆ. ಜ್ಞಾನಾರ್ಜನೆಯತ್ತಲೇ ವಿನಾ ಸಂಪತ್ತನ್ನು ಗಳಿಸುವತ್ತ ಗಮನವಿರುವುದಿಲ್ಲ. ಲೌಕಿಕ ಸಂಪತ್ತಿನತ್ತ ತಿರಸ್ಕಾರ. ಇಂಥವರೊಂದಿಗೆ ಲಕ್ಷ್ಮಿ ಹೇಗೆ ವಾಸಿಸುತ್ತಾಳೆ?

ಅಭಿಮಾನಿಯು ಎಂದೆಂದಿಗೂ ಅಭಿಮಾನವನ್ನು ಬಿಟ್ಟು ಸಂಪತ್ತು ಗಳಿಸುವುದಕ್ಕೆ ಹಾತೊರೆಯಲಾರ. ಯಾರೆದುರೂ ಕೈಚಾಚಲಾರ. ಅಭಿಮಾನಕ್ಕೆ ಭಂಗ ತರುವ ಕೆಲಸದಲ್ಲಿ ತೊಡಗಲಾರ. ಅಭಿಮಾನ ಬಿಟ್ಟು ವ್ಯವಹಾರ ಮಾಡಲಾರ. ಇಂಥವರತ್ತ ಗೌರವಾದರಗಳು ಹರಿದು ಬರುತ್ತವೆಯೇ ವಿನಾ ಸಂಪತ್ತು ಬರದು.

ಇವರಿಗೆಲ್ಲ ಜಿಪುಣತನ, ಕೂಡಿಡುವ ಬುದ್ಧಿ, ಇನ್ನೊಬ್ಬರಿಗೆ ವಂಚನೆಯಾದರೂ ಹಣ ಮಾಡಬೇಕು, ಹಣ ಗಳಿಸುವುದಕ್ಕೆ ಯಾವ ಮಾರ್ಗವಾದರೂ ಸರಿ ಇತ್ಯಾದಿ ಮನೋಭಾವ ಇಲ್ಲದಿರುವುದರಿಂದ ಭಯದಿಂದ ಇವರತ್ತ ಲಕ್ಷ್ಮಿಯು ಬರಲಾರಳು.

ಬಂಗಾಳದಲ್ಲಿ ಮತ್ತೊಮ್ಮೆ 'ವಂದೇ ಮಾತರಂ ಕ್ಷಣ!'

▸ **ಡಾ. ಮನಮೋಹನ ವೈದ್ಯ,**
ಅಖಿಲ ಭಾರತೀಯ ಕಾರ್ಯಕಾರಿಣಿ ಸದಸ್ಯ, ಆರೆಸ್ಸೆಸ್

ನಾನು ಡಿಸೆಂಬರ್ 2025 ಮತ್ತು ಫೆಬ್ರವರಿ 2026ರಲ್ಲಿ ಪಶ್ಚಿಮ ಬಂಗಾಳಕ್ಕೆ ಭೇಟಿ ನೀಡುವ ಅವಕಾಶ ಲಭಿಸಿತ್ತು. ಅಲ್ಲಿನ ಹೆಚ್ಚಿನ ಜನರು ಆಡಳಿತ ಬದಲಾವಣೆಯನ್ನು ಅಪೇಕ್ಷಿಸುತ್ತಿರುವುದು ಅವರೊಡನೆಯ ಮಾತುಕತೆಯಿಂದ ಅರಿವಾಯಿತು. ಆದರೆ ಇಂತಹ ಬದಲಾವಣೆ ಸಾಧ್ಯವಾದೀತು ಎಂಬುದರ ಬಗ್ಗೆ ಹೆಚ್ಚಿನವರಿಗೆ ವಿಶ್ವಾಸವಿರಲಿಲ್ಲ. ಪರಿಸ್ಥಿತಿ ಹೇಗಿತ್ತೆಂದರೆ ಬದಲಾವಣೆ ನಡೆದರೆ ಅದುವೇ ಪವಾಡ ಎಂಬಂತಿತ್ತು. ಅಲ್ಲಿ ಮುಕ್ತ ಮತ್ತು ನ್ಯಾಯೋಚಿತ ಚುನಾವಣೆ ನಡೆಯಲು ಸೂಕ್ತವಾದ ವಾತಾವರಣ ನಿರ್ಮಿಸುವುದೇ ಅತೀ ದೊಡ್ಡ ಸವಾಲಾಗಿತ್ತು. ಆದರೆ ಚುನಾವಣಾ ಆಯೋಗ, ಸುಪ್ರೀಂಕೋರ್ಟ್, ಕೇಂದ್ರ ಗೃಹ ಸಚಿವಾಲಯ ಹಾಗೂ ಭದ್ರತಾ ಸಿಬ್ಬಂದಿಗಳ ಸಹಕಾರದಿಂದ ಇದು ಸಾಧ್ಯವಾಯಿತು.

ಈ ಬಾರಿ ಬಂಗಾಳದ ಜನತೆ ಭಾರಿ ಪ್ರಮಾಣದಲ್ಲಿ ಮತ ಚಲಾಯಿಸಿದರು. ಕಳೆದ ಐದು ಚುನಾವಣೆಗಳಲ್ಲಿ ಸರಾಸರಿ ಮತದಾನ ಶೇ.79.22 ಆಗಿದ್ದರೆ ಈ ಬಾರಿ ಶೇ. 92.47 ಮತದಾನವಾಯಿತು. ಜನರು ಈ ಚುನಾವಣೆಯು ಒಂದು ನಾಗರಿಕ ಸಮರ ಎಂದು ಪರಿಗಣಿಸಿ ತಮ್ಮ ಮತ ಚಲಾಯಿಸಿದರು. ಫೆಬ್ರವರಿಯಲ್ಲಿ ನಾನು ಹಿರಿಯ ಪತ್ರಕರ್ತೆಯೊಬ್ಬರನ್ನು ಕೋಲ್ಕತ್ತಾದಲ್ಲಿ ಭೇಟಿಯಾಗಿದ್ದೆ. ಆಕೆ ಎಡಪಂಥೀಯ ಧೋರಣೆಯವರು. ಮೇ 29ರಂದು ಮತ್ತೆ ಆಕೆಯನ್ನು ಭೇಟಿಯಾಗುವ ಅವಕಾಶ ಸಿಕ್ಕಿತು. ತಾನು 18ರ ಹರೆಯದಲ್ಲಿ ಮೊತ್ತ ಮೊದಲಾಗಿ ಮತದಾನ ಮಾಡಿದ್ದಾಗಿಯೂ ಆ ಬಳಿಕ ಎರಡನೆಯದಾಗಿ ಈ ವರ್ಷ ಮತದಾನ ಮಾಡಿದ್ದಾಗಿಯೂ ಆಕೆ ನುಡಿದರು. ಪ್ರಸ್ತುತ ಆಕೆಗೆ 46 ವರ್ಷ. ಬಂಗಾಳದ ಪರಿಸ್ಥಿತಿಯಿಂದ ರೋಸಿ ದೀರ್ಘ ಕಾಲ ಮತದಾನ ಮಾಡದಿದ್ದ ಆಕೆ ಈಗ ಬದಲಾವಣೆ ಬಯಸಿ ಮತದಾನ ಮಾಡಿದ್ದರು.

ಈ ಚುನಾವಣೆಯು ಕೇವಲ ಬಿಜೆಪಿಯ ಗೆಲುವಲ್ಲ, ಬಂಗಾಳದ ಜನರು ಭಾರತದ ಧಾರ್ಮಿಕ ಪರಂಪರೆ ಮತ್ತು ಹಿಂದುತ್ವದ ಸಿದ್ಧಾಂತವನ್ನೂ ಗೆಲ್ಲಿಸಿದ್ದಾರೆ. ಪಶ್ಚಿಮ ಬಂಗಾಳದ ಅಸ್ಮಿತೆಯು ಮತ್ತೊಮ್ಮೆ ಜಾಗೃತಗೊಂಡಂತಾಗಿದೆ. ಈ ಗೆಲುವು ಬಂಗಾಳದ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಶ್ರೀ ಅರವಿಂದ, ಬಂಕಿಂಚಂದ್ರ, ರವೀಂದ್ರನಾಥ ಟಾಗೋರ್, ಜಗದೀಶ್‌ಚಂದ್ರ ಬೋಸ್ ಮುಂತಾದ ಮಹನೀಯರೆಲ್ಲರ ವಿಜಯವಾಗಿದೆ.

ಈ ಸಂದರ್ಭದಲ್ಲಿ ನನಗೆ ಬಂಗಾಳ ವಿಭಜನೆಯ ವಿರುದ್ಧ 1905ರಲ್ಲಿ ನಡೆದ ಕ್ರಾಂತಿಯು ನೆನಪಾಗುತ್ತದೆ. ಆ ಸಂದರ್ಭದಲ್ಲಿ ವಂದೇ ಮಾತರಂ ಘೋಷಣೆಯೊಂದಿಗೆ ಬಂಗಾಳದ ಜನರು ಸಿಡಿದೆದ್ದಿದ್ದರು. ಪ್ರತಿಭಟನೆಯ ಕಾವು ಎಷ್ಟಿತ್ತೆಂದರೆ ಬ್ರಿಟಿಷ್ ಆಡಳಿತವು ಬಂಗಾಳದ ವಿಭಜನೆಯನ್ನು 1911ರಲ್ಲಿ ಹಿಂತೆಗೆದುಕೊಳ್ಳಬೇಕಾಯಿತು. ಅದಷ್ಟೇ ಅಲ್ಲದೆ ಬ್ರಿಟಿಷರು ತಮ್ಮ ರಾಜಧಾನಿಯನ್ನು ಕೊಲ್ಕತ್ತಾದಿಂದ ದಿಲ್ಲಿಗೆ ಬದಲಾಯಿಸಿದರು. ಈ ಹಿನ್ನೆಲೆಯಲ್ಲಿ ನೋಡುವಾಗ ಈ ಬಾರಿಯ ಚುನಾವಣೆಯಲ್ಲಿ ಭಾರತದ ಧಾರ್ಮಿಕ ಪರಂಪರೆ ಮತ್ತು ಹಿಂದುತ್ವ ಸಿದ್ಧಾಂತಕ್ಕೆ ದೊರೆತ ವಿಜಯವು ಮತ್ತೊಂದು ''ವಂದೇಮಾತರಂ ಕ್ಷಣ'' ಎಂದು ಬಣ್ಣಿಸಬಹುದು.

ವಂದೇಮಾತರಂ ಗೀತೆಯನ್ನು ಬಂಕಿಮಚಂದ್ರ ಚಟ್ಟೋಪಾಧ್ಯಾಯರು 1875ರಲ್ಲಿ ತಮ್ಮ ಆನಂದಮಠ ಕಾದಂಬರಿಯಲ್ಲಿ ಬರೆದಿದ್ದರು. 1896ರಲ್ಲಿ ಅದನ್ನು ರವೀಂದ್ರನಾಥ ಟಾಗೋರ್ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಮೊತ್ತಮೊದಲು ಹಾಡಿದ್ದರು. ಅಲ್ಲಿಂದ ಬಳಿಕ ಬಂಗಾಳದ ವಿಭಜನೆಯ ವಿರುದ್ಧವಾಗಿ ಜನರು ಪ್ರತಿಭಟನೆಯ ಸಂದರ್ಭದಲ್ಲಿ ವಂದೇಮಾತರಂ ಗೀತೆಯನ್ನು ರಣಮಂತ್ರವನ್ನಾಗಿ ಮಾಡಿಕೊಂಡರು. ಇಡೀ ದೇಶವು ಬಂಗಾಳದ ವಿಭಜನೆಯ ವಿರುದ್ಧವಾಗಿ ಏಕತೆಯಿಂದ ಹೋರಾಡಿತು. ವಂದೇಮಾತರಂ ಜನರ ನರನಾಡಿಗಳಲ್ಲಿ ದೇಶಭಕ್ತಿಯ ಸೆಲೆಗಳನ್ನು ಎಬ್ಬಿಸಿತು. ಬಹಳಷ್ಟು ಕ್ರಾಂತಿಕಾರಿಗಳು ವಂದೇಮಾತರಂ ಘೋಷಣೆಯೊಂದಿಗೆ ಗಲ್ಲಿನ ಕುಣಿಕೆಗೆ ಕೊರಳೊಡ್ಡಿದರು.

1905ರ ಅಕ್ಟೋಬರ್ 16ರಂದು ಕಲ್ಕತ್ತಾದಲ್ಲಿ ನಡೆದ ರಕ್ಷಾಬಂಧನ ಕಾರ್ಯಕ್ರಮ ಐತಿಹಾಸಿಕವಾಗಿತ್ತು. ಸಾಧಾರಣವಾಗಿ ರಕ್ಷಾಬಂಧನವು ಶ್ರಾವಣಮಾಸದಲ್ಲಿ ಅಂದರೆ ಆಗಸ್ಟ್‌ನಲ್ಲಿ ಬರುತ್ತದೆ. ಆದರೆ ಬಂಗಾಳದ ವಿಭಜನೆಯನ್ನು ವಿರೋಧಿಸಿ ಅಕ್ಟೋಬರ್ 16ರಂದು ರಕ್ಷಾಬಂಧನ ಆಚರಿಸಲಾಯಿತು. ಅಂದು ಕಲ್ಕತ್ತಾದ ಹಿಂದು-ಮುಸ್ಲಿಂ ಪುರುಷರು ಮತ್ತು ಮಹಿಳೆಯರೆಲ್ಲರೂ ಪವಿತ್ರ ಗಂಗಾನದಿಯಲ್ಲಿ ಮಿಂದು ಪರಸ್ಪರರ ಕೈಗಳಿಗೆ ರಕ್ಷೆಯನ್ನು ಕಟ್ಟಿ ಬಂಗಾಳವನ್ನು ವಿಭಜನೆಯಾಗಲು ಬಿಡಲಾರೆವೆಂಬ ಪಣ ತೊಟ್ಟರು.

ವಂದೇ ಮಾತರಂನ್ನು ಮೊದಲು ಸ್ವಾತಂತ್ರ್ಯ ಘೋಷವನ್ನಾಗಿ ಮಾಡಿದವರು ಶ್ರೀ ಅರವಿಂದರು. ಅವರು 'ವಂದೇಮಾತರಂ' ಹೆಸರಿನ ಪತ್ರಿಕೆಯೊಂದನ್ನು ಕೂಡಾ ಆರಂಭಿಸಿದರು. ಮೇಡಂ ಬಿಕಾಜಿ ಕಾಮಾ ಅವರು ಜರ್ಮನಿಯಲ್ಲಿ ಸ್ವತಂತ್ರ ಭಾರತದ ಧ್ವಜವನ್ನು ಅನಾವರಣ ಮಾಡಿದಾಗ ಅದರಲ್ಲಿ ವಂದೇಮಾತರಂ ಎಂದು ಬರೆದಿತ್ತು. ಅಲ್ಲಿಂದ ಬಳಿಕ ವಂದೇಮಾತರಂ ಸ್ವಾತಂತ್ರ್ಯ ಗೀತೆಯಾಯಿತು. ವಂದೇಮಾತರಂ ಭಾರತೀಯರಲ್ಲಿ ಸ್ವಾತಂತ್ರ್ಯದ ಕಿಚ್ಚು ಹಚ್ಚುತ್ತಿದ್ದುದನ್ನು ಕಂಡ ಬ್ರಿಟಿಷ್ ಸರಕಾರವು 1906ರಲ್ಲಿ ಆ ಗೀತೆಯನ್ನು ಸಾರ್ವಜನಿಕವಾಗಿ ಹಾಡುವುದನ್ನು ನಿಷೇಧಿಸಿತು. ಆದರೆ ಈ ನಿಷೇಧವು ಬಂಗಾಳದ ಜನತೆಯಲ್ಲಿ ಸ್ವಾತಂತ್ರ್ಯದ ಸ್ಫೂರ್ತಿಯನ್ನು ಇನ್ನಷ್ಟು ಹೆಚ್ಚಿಸಿತೇ ಹೊರತು ಕಡಿಮೆ ಮಾಡಲಿಲ್ಲ.

ಈ ಸ್ವಾತಂತ್ರ್ಯದ ಕಿಚ್ಚು ಬಂಗಾಳಕ್ಕಷ್ಟೇ ಸೀಮಿತವಾಗಲಿಲ್ಲ. ಬಳಿಕ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರತಿಯೊಂದು ಸಮ್ಮೇಳನದಲ್ಲೂ ವಂದೇಮಾತರಂ ಗೀತೆಯನ್ನು ಪೂರ್ಣವಾಗಿ ಹಾಡುವುದು ರೂಢಿಯಾಯಿತು. ಕಾಂಗ್ರೆಸ್‌ನ ಎಲ್ಲಾ ಸದಸ್ಯರು, ಮುಸ್ಲಿಮರಾಗಿರಲಿ ಹಿಂದುಗಳಾಗಿರಲಿ, ವಂದೇಮಾತರಂನ್ನು ಹಾಡುತ್ತಿದ್ದರು. ಆದರೆ 1921ರ ಬಳಿಕ ಬ್ರಿಟಿಷರ ಒಡೆದಾಳುವ ನೀತಿಯ ಪರಿಣಾಮವಾಗಿ ಕೋಮುವಾದಿ ಶಕ್ತಿಗಳು ಕಾಂಗ್ರೆಸ್‌ನಲ್ಲೂ ಪ್ರಭಾವ ಹೆಚ್ಚಿಸಿಕೊಳ್ಳತೊಡಗಿದವು. ಅದರಿಂದಾಗಿ ಕಾಂಗ್ರೆಸ್ ಖಿಲಾಫತ್ ಆಂದೋಲನವನ್ನು ಬೆಂಬಲಿಸುವಂತಾಯಿತು. ಅದರ ಜತೆಗೇ ವಂದೇಮಾತರಂನ್ನು ಕೋಮುವಾದಿಯೆಂದು ಬಿಂಬಿಸಿ ಅದನ್ನು ಹಾಡುವುದನ್ನು ವಿರೋಧಿಸಲಾಯಿತು. 1920ರ ತನಕ ಸ್ವಾತಂತ್ರ್ಯ ಹೋರಾಟದ ಜೀವಮಂತ್ರವಾಗಿದ್ದ ವಂದೇಮಾತರಂ 1923ರ ಬಳಿಕ ಕೋಮುವಾದಿ ಎಂದು ಹಣೆಪಟ್ಟಿ ಕಟ್ಟಿಕೊಂಡಿತು. ಅಲ್ಲಿಂದಲೇ ಭಾರತದ ವಿಭಜನೆಗೆ ಬೀಜ ಬಿತ್ತಲಾಯಿತು ಎನ್ನಬಹುದು.

ಭಾರತೀಯ ಚಿಂತನೆಯಲ್ಲಿ ಮನುಷ್ಯನನ್ನು ಕೇವಲ ದೇಹ ಎಂಬುದಾಗಿ ಪರಿಗಣಿಸುವುದಿಲ್ಲ. ಪಂಚಭೂತಗಳ ಸಂಗಮ ಎಂದು ಹೇಳಲಾಗುತ್ತದೆ. ಅದೇರೀತಿಯಲ್ಲಿ ವಂದೇಮಾತರಂ ಕೂಡಾ ಭಾರತದ ಪೂರ್ಣಚಿತ್ರಣ ನೀಡುತ್ತದೆ. ಗೀತೆಯ ಮೊದಲ ಚರಣವು ಭರತಭೂಮಿಯನ್ನು ಬಣ್ಣಿಸಿದರೆ, ಎರಡನೇ ಚರಣ ದೇಶದ ಜನರ ವರ್ಣನೆ ನೀಡುತ್ತದೆ. ಮುಂದಿನ ಚರಣಗಳು ಭಾರತದ ಮನಸ್ಸು, ಬುದ್ಧಿವಂತಿಕೆ, ಜೀವನಶಕ್ತಿ ಮತ್ತು ಧಾರ್ಮಿಕ ಪ್ರಜ್ಞೆಯ ಪರಿಕಲ್ಪನೆ ಬಿಂಬಿಸುತ್ತವೆ.

ತುಮಿ ವಿದ್ಯಾ ತುಮಿ ಧರ್ಮ ಎಂಬ ವಾಕ್ಯದಲ್ಲಿ ವಿದ್ಯೆ ಎಂಬುದು ದೇಶದ ಧಾರ್ಮಿಕ ಬುದ್ಧಿಮತ್ತೆಯನ್ನು ಬಣ್ಣಿಸಿದರೆ, ಧರ್ಮ ಪದವು 'ನಾನು' ಎಂಬ ವ್ಯಕ್ತಿಗತ ವಿಚಾರ ಬಿಟ್ಟು 'ನಾವು' ಎಂಬ ಸಮಷ್ಟಿಗೆ ಆದ್ಯತೆ ಕೊಡುತ್ತದೆ.

ಸ್ವಾತಂತ್ರ್ಯದ ಬಳಿಕ ದೇಶದ ಮುಂದಾಳುಗಳು ಲೋಕಸಭೆಗೆ 'ಧರ್ಮಚಕ್ರ ಪ್ರವರ್ತನಾಯ' ಎಂದ ಸಂದೇಶವಾಕ್ಯ ನೀಡಿದರೆ, ರಾಜ್ಯಸಭೆಗೆ 'ಸತ್ಯಂ ವದ, ಧರ್ಮಂ ಚರ' ಹಾಗೂ ಸುಪ್ರೀಂ ಕೋರ್ಟಿಗೆ 'ಯತೋ ಧರ್ಮಸ್ತತೋ ಜಯಃ' ಎಂಬ ಸಂದೇಶ ವಾಕ್ಯ ನೀಡಿದರು. ರಾಷ್ಟ್ರಧ್ವಜದಲ್ಲಿ ಧರ್ಮಚಕ್ರ ಅಳವಡಿಸಲಾಯಿತು. ಈ ಧರ್ಮ ಮತ್ತು ವಿದ್ಯೆಗಳು ಭಾರತ ಮಾತೆಯಲ್ಲಿ ನೆಲೆಸಿವೆ ಎಂಬುದಾಗಿ ನಂಬಲಾಗುತ್ತಿದೆ. ಭಾರತ ಮಾತೆಯು ಶಕ್ತಿ ದೇವತೆ ದುರ್ಗೆ, ಸಂಪತ್ತಿನ ದೇವತೆ ಲಕ್ಷ್ಮೀ ಮತ್ತು ವಿದ್ಯಾದೇವತೆ ಸರಸ್ವತಿ ಎಲ್ಲರನ್ನೊಳಗೊಂಡ ಅವತಾರವೆಂದು ಪರಿಗಣಿಸಲಾಗಿದೆ. ಹಾಗಾಗಿ 1905ರಿಂದ ಆರಂಭಿಸಿ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರತೀ ಸಮ್ಮೇಳನದಲ್ಲೂ ವಂದೇಮಾತರಂ ಗೀತೆಯನ್ನು ಪೂರ್ಣವಾಗಿ ಹಾಡಲು ಆರಂಭವಾಯಿತು. ಇಡೀ ಗೀತೆ ಹಾಡಲು 3 ನಿಮಿಷ ತಗಲುತ್ತದೆ. ಇದರಲ್ಲಿ ಕೋಮುವಾದ ಎಲ್ಲಿಂದ ಬಂತು? ಮುಂದಿನ ದಿನಗಳಲ್ಲಿ ವಿಭಜಕ ಮತ್ತು ಕೋಮುವಾದಿ ಶಕ್ತಿಗಳ ಕಾರಣದಿಂದಾಗಿ ವಂದೇಮಾತರಂಗೆ ವಿರೋಧ ಹುಟ್ಟಿಕೊಂಡಿತು. ಆದರೆ ವಂದೇಮಾತರಂನಲ್ಲಿ ಕೋಮುವಾದವನ್ನು ಕಾಣುವವರು ತಮ್ಮ ಅಜ್ಞಾನವನ್ನು ಪ್ರದರ್ಶಿಸುತ್ತಿದ್ದಾರೆ ಅಥವಾ ಅವರು ದೇಶ ವಿಭಜಕ ಶಕ್ತಿಗಳ ಕೈವಶವಾಗಿ ವರ್ತಿಸುತ್ತಿದ್ದಾರೆ ಎಂದೇ ಅರ್ಥ.

2026ರ ಚುನಾವಣಾ ಫಲಿತಾಂಶವು ಬಂಗಾಳದಲ್ಲಿ 1905ರಿಂದ 1911ರ ಅವಧಿಯಲ್ಲಿ ಕಂಡುಬಂದಂತಹ ಜಾಗೃತಿ, ದೃಢಬದ್ಧತೆ, ರಾಷ್ಟ್ರೀಯ ಪ್ರಜ್ಞೆ, ನಿರ್ಣಾಯಕ ಕರ್ತೃತ್ವಶಕ್ತಿಯ ನೆನಪುಗಳನ್ನು ಮರುಕಳಿಸುವಂತೆ ಮಾಡಿದೆ. 1905ರಲ್ಲಿ ಬ್ರಿಟಿಷರು ಜಿಹಾದಿ ಉಗ್ರರೊಂದಿಗೆ ಸೇರಿಕೊಂಡು ಭಾರತದ ರಾಷ್ಟ್ರೀಯ ಅಸ್ಮಿತೆಯನ್ನು ನಾಶಪಡಿಸಲು ಯತ್ನಿಸಿದಂತೆಯೇ 2026ರಲ್ಲಿ ಕೂಡಾ ವಿದೇಶಪ್ರೇರಿತ ರಾಜಕಾರಣಿಗಳು, ಜಿಹಾದಿ ಉಗ್ರರು ಮತ್ತು ಸಾಂಸ್ಕೃತಿಕ ಮಾರ್ಕ್ಸ್‌ವಾದಿಗಳು ಬಂಗಾಳವು ಭಾರತದೊಂದಿಗಿನ ಸಂಪರ್ಕ ಕಡಿಯುವಂತೆ ಮಾಡಲು ಯತ್ನಿಸಿದ್ದರು.

1905ರಲ್ಲಿ ತಮ್ಮ ಅಸ್ತಿತ್ವಕ್ಕೇ ಸಂಚಕಾರ ಬಂದಾಗ ಒಗ್ಗೂಡಿ ಹೋರಾಡಿದ ಹಿಂದುಗಳು 2026ರಲ್ಲೂ ಅದೇ ರೀತಿಯಲ್ಲಿ ಹೋರಾಟ ನಡೆಸಿದರು. ಇದೀಗ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಶ್ರೀ ಅರವಿಂದ ಮುಂತಾದವರ ಸ್ಫೂರ್ತಿಯು ಮತ್ತೊಮ್ಮೆ ಜಾಗೃತಗೊಂಡಂತಾಗಿದೆ. ಎಲ್ಲರನ್ನು ಒಳಗೊಳ್ಳುವ, ಸಮಗ್ರ, ಆಧ್ಯಾತ್ಮಿಕ ತತ್ವವಾದ ಹಿಂದುತ್ವವು ಮತ್ತೊಮ್ಮೆ ಶಕ್ತಿಶಾಲಿ ಹಾಗೂ ಸ್ಪಷ್ಟ ಅಭಿವ್ಯಕ್ತಿಯನ್ನು ಸಾರಿದೆ.

ಇದನ್ನು ಸಾಧ್ಯಗೊಳಿಸಿದ ಎಲ್ಲರಿಗೂ ಹೃದಯಪೂರ್ವಕ ಅಭಿನಂದನೆಗಳು. ಬಂಗಾಳದ ಜನರು ಪ್ರಜಾತಂತ್ರ ಮತ್ತು ಬದಲಾವಣೆಯೆಡೆಗೆ ವ್ಯಕ್ತಪಡಿಸಿದ ಬದ್ಧತೆಯು ಐತಿಹಾಸಿಕ ಫಲಿತಾಂಶಕ್ಕೆ ಕಾರಣವಾಗಿದೆ.

ಅನುಮಾನವೇ ಇಲ್ಲ, ಇದು ಬಂಗಾಳದ 'ವಂದೇ ಮಾತರಂ ಕ್ಷಣ'

◆

ಜಾಗತಿಕ ಹೆಬ್ಬಾಗಿಲು ತೆರೆದ ಮೋದಿಯವರ ವ್ಯಾಪಾರ ದೃಷ್ಟಿಕೋನ

▸ **ಪಿಯೂಷ್ ಗೋಯಲ್,**
ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು

ಜುಲೈ 1ರಿಂದ ಜಾರಿಗೆ ಬರಲಿರುವ ಬ್ರಿಟನ್ ಜತೆಗಿನ ಐತಿಹಾಸಿಕ ವ್ಯಾಪಾರ ಒಪ್ಪಂದವು ಜಾಗತಿಕ ಅವಕಾಶಗಳನ್ನು ಸೃಷ್ಟಿಸುವುದಲ್ಲದೇ ಭಾರತೀಯ ರೈತರು, ಎಂಎಸ್‌ಎಂಇ, ಮೀನುಗಾರರು, ನವೋದ್ಯಮಗಳು ಮತ್ತು ಕುಶಲಕರ್ಮಿಗಳಿಗೆ ಸಮೃದ್ಧಿ ತರಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರ 'ವಿಕಸಿತ ಭಾರತ 2047' ಧ್ಯೇಯವನ್ನು ಮುಂದಕ್ಕೆ ಕೊಂಡೊಯ್ಯಲು ಇದು ಉದ್ಯೋಗಗಳನ್ನು ಸೃಷ್ಟಿಸಿ, ಭಾರತೀಯ ನಾಗರಿಕರಿಗೆ ಸಮಂಜಸ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಸರಕುಗಳನ್ನು ಖಾತ್ರಿಪಡಿಸುತ್ತದೆ.

ಭಾರತ ಮತ್ತು ಬ್ರಿಟನ್ ನಡುವಿನ ಪರಿವರ್ತಕ ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದ (ಸಿ.ಇ.ಟಿ.ಎ), ಬ್ರಿಟನ್‌ನಲ್ಲಿ ಭಾರತೀಯ ಸರಕುಗಳಿಗೆ, ವಿಶೇಷವಾಗಿ ಕಾರ್ಮಿಕ-ತೀವ್ರ ವಲಯಗಳಿಗೆ ಸಮಗ್ರ ಮಾರುಕಟ್ಟೆ ಪ್ರವೇಶವನ್ನು ಉಂಟುಮಾಡಿದೆ. ಈ ಪರಸ್ಪರ ಲಾಭದಾಯಕ ಒಪ್ಪಂದವು ಸುಮಾರು 99% ಸುಂಕದ ಮಾರ್ಗಗಳಲ್ಲಿನ ಸುಂಕಗಳನ್ನು ತಕ್ಷಣವೇ ತೆಗೆದುಹಾಕುತ್ತದೆ. ಇದು ವ್ಯಾಪಾರದ ಮೌಲ್ಯದ 100% ಅನ್ನು ಒಳಗೊಂಡಿರುತ್ತದೆ ಮತ್ತು ಭಾರತೀಯ ರಫ್ತುಗಳಿಗೆ ಅಗಾಧ ಅವಕಾಶಗಳನ್ನು ಸೃಷ್ಟಿಸುತ್ತದೆ. ಸಿ.ಇ.ಟಿ.ಎ ಜನಕೇಂದ್ರಿತ ಒಪ್ಪಂದವಾಗಿದ್ದು ಕಳೆದ ವರ್ಷ ಪ್ರಧಾನಮಂತ್ರಿ ಮೋದಿ ಮತ್ತು ಬ್ರಿಟಿಷ್ ಪ್ರಧಾನಮಂತ್ರಿ ಸರ್ ಕೀರ್ ಸ್ಟಾರ್ಮರ್ ಅವರ ಸಮ್ಮುಖದಲ್ಲಿ ಸಹಿ ಹಾಕಲಾಗಿತ್ತು. ವಿಶಾಲವಾದ ಬ್ರಿಟನ್ ಮಾರುಕಟ್ಟೆಗೆ ಹೆಚ್ಚಿನ ಸಮುದ್ರಾಹಾರ ರಫ್ತುಗಳಿಂದ ಮೀನುಗಾರರು ಪ್ರಯೋಜನ ಪಡೆಯುತ್ತಾರೆ. ಕಾರ್ಮಿಕರಿಗೆ ಹೊಸ ಉದ್ಯೋಗಾವಕಾಶಗಳು ಸಿಗಲಿವೆ. ಮಹಿಳಾ ಉದ್ಯಮಿಗಳು, ಯುವಕರು, ನವೋದ್ಯಮಗಳು ಮತ್ತು ಎಂಎಸ್‌ಎಂಇಗಳಿಗೆ ಜಾಗತಿಕ ಮೌಲ್ಯ ಸರಪಳಿಗಳಿಗೆ ಉತ್ತಮ ಪ್ರವೇಶ ದೊರೆಯಲಿದೆ. ಹೆಚ್ಚಿನ ಪ್ರಯಾಣ ಮತ್ತು ಮಾನ್ಯತೆಯ ಅವಕಾಶಗಳಿಂದ ವೃತ್ತಿಪರರು ಲಾಭ ಪಡೆಯುತ್ತಾರೆ.

ಆಟಿಕೆ, ಕಾರ್ಪೆಟ್‌ಗಳು, ಏಲಕ್ಕಿ ಮತ್ತು ಮಾವಿನ ತಿರುಳು, ಉಪ್ಪಿನಕಾಯಿ ಮತ್ತು ಬೇಳೆಕಾಳುಗಳಂತಹ ಸಂಸ್ಕರಿಸಿದ ಸರಕುಗಳು ಸುಂಕ-ಮುಕ್ತ ಪ್ರವೇಶವನ್ನು ಪಡೆಯುತ್ತವೆ. ಹೆಚ್ಚಿನ ಕೃಷಿ ರಫ್ತುಗಳು ಕೃಷಿಕರ ಆದಾಯ ಹೆಚ್ಚಿಸುತ್ತವೆ. ಜೊತೆಗೆ ಗುಣಮಟ್ಟ, ಪ್ಯಾಕೇಜಿಂಗ್ ಮತ್ತು ಪ್ರಮಾಣೀಕರಣಕ್ಕಾಗಿ ಹೆಚ್ಚಿನ ಉತ್ತೇಜನ ನೀಡುತ್ತವೆ. ಇದು ಕೃಷಿ ಮೌಲ್ಯ ಸರಪಳಿಯಾದ್ಯಂತ ಹಲವಾರು ಉದ್ಯೋಗಗಳನ್ನು ಸೃಷ್ಟಿಸುತ್ತದೆ. ಇದೇ ವೇಳೆ ದೇಶೀಯ ರೈತರನ್ನು ರಕ್ಷಿಸಲು ಭಾರತದ ಅತ್ಯಂತ ಸೂಕ್ಷ್ಮ ಕೃಷಿ ವಲಯಗಳನ್ನು ಒಪ್ಪಂದದಿಂದ ಹೊರಗಿಡಲಾಗಿದೆ. ವಿಶೇಷವಾಗಿ ಹೈನು ಉತ್ಪನ್ನಗಳು, ಏಕದಳ ಧಾನ್ಯಗಳು, ಸಿರಿಧಾನ್ಯಗಳು, ಸೇಬು, ಓಟ್ಸ್ ಮತ್ತು ಅಡುಗೆ ಎಣ್ಣೆ ಕ್ಷೇತ್ರಗಳನ್ನು ಒಪ್ಪಂದದಿಂದ ಕೈಬಿಡಲಾಗಿದೆ. ಈ ವಿನಾಯಿತಿಯು ಆಹಾರ ಭದ್ರತೆ, ದೇಶೀಯ ಬೆಲೆ ಸ್ಥಿರತೆ ಮತ್ತು ದುರ್ಬಲ ಕೃಷಿ ಸಮುದಾಯಗಳಿಗೆ ಆದ್ಯತೆ ನೀಡುವ ಮೋದಿ ಸರ್ಕಾರದ ಕಾರ್ಯತಂತ್ರವನ್ನು ಪ್ರತಿಬಿಂಬಿಸುತ್ತದೆ.

ಭಾರತಕ್ಕೆ ರಫ್ತು ಆಸಕ್ತಿಯ ಎಲ್ಲಾ ಪ್ರಮುಖ ಸೇವಾ ವಲಯಗಳು ಮತ್ತು 137 ಉಪ-ವಲಯಗಳನ್ನು ಒಳಗೊಂಡಂತೆ ಬ್ರಿಟನ್ ಅತ್ಯಂತ ಸಮಗ್ರ ಸೇವಾ ಬದ್ಧತೆ ಒದಗಿಸಿದೆ. ಹೆಚ್ಚಿನ ಮಾರುಕಟ್ಟೆ ಪ್ರವೇಶ ಮತ್ತು ನಿಯಂತ್ರಕ ನಿಶ್ಚಿತತೆಯಿಂದ ಐಟಿ ಮತ್ತು ಐಟಿ ಆಧಾರಿತ ಸೇವೆಗಳು, ಹಣಕಾಸು ಸೇವೆಗಳು, ವೃತ್ತಿಪರ ಸೇವೆಗಳು, ಆರೋಗ್ಯ ರಕ್ಷಣೆ, ಶಿಕ್ಷಣ, ಎಂಜಿನಿಯರಿಂಗ್, ದೂರಸಂಪರ್ಕ ಮತ್ತು ಸಲಹಾ ಸೇವೆಗಳಲ್ಲಿ ಭಾರತೀಯ ಸೇವಾ ಪೂರೈಕೆದಾರರು ಪ್ರಯೋಜನ ಪಡೆಯಲಿದ್ದಾರೆ. ಪ್ರಧಾನಮಂತ್ರಿ ಮೋದಿಯವರ ನಾಯಕತ್ವದಲ್ಲಿ, ಮುಕ್ತ ವ್ಯಾಪಾರ ಒಪ್ಪಂದಗಳು (ಎಫ್.ಟಿ.ಎ) ಸರಕುಗಳು ಮತ್ತು ಸೇವೆಗಳನ್ನು ಮೀರಿ ಹೊಸ ಮಾನದಂಡಗಳನ್ನು ಸ್ಥಾಪಿಸುತ್ತವೆ. ಇ.ಎಫ್.ಟಿ.ಎ ದೇಶಗಳಾದ ಸ್ವಿಟ್ಜರ್ಲೆಂಡ್, ನಾರ್ವೆ, ಐಸ್ಲ್ಯಾಂಡ್, ಲಿಚ್ಟೆನ್‌ಸ್ಟೈನ್ ಜೊತೆ ಭಾರತವು 100 ಶತಕೋಟಿ ಡಾಲರ್ ಹೂಡಿಕೆಯ ಬದ್ಧತೆ ಭದ್ರಪಡಿಸಿಕೊಂಡಿದ್ದು ಇದು 1 ದಶಲಕ್ಷ ನೇರ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ. ನ್ಯೂಜಿಲೆಂಡ್‌ನೊಂದಿಗೆ ಮುಕ್ತ ವ್ಯಾಪಾರ ಒಪ್ಪಂದದ ಮೂಲಕ ಭಾರತವು 15 ವರ್ಷಗಳಲ್ಲಿ 20 ಶತಕೋಟಿ ಡಾಲರ್ ಹೂಡಿಕೆಯ ಬದ್ಧತೆ ಭದ್ರಪಡಿಸಿಕೊಂಡಿದೆ. ಇದೇ ವೇಳೆ, ಆಸ್ಟ್ರೇಲಿಯಾ ಜೊತೆಗಿನ ಮುಕ್ತ ವ್ಯಾಪಾರ ಒಪ್ಪಂದವು ಭಾರತೀಯ ಐಟಿ ಕಂಪನಿಗಳಿಗೆ ತೊಡಕಾಗಿದ್ದ ದ್ವಿತೆರಿಗೆ ಸಮಸ್ಯೆಯನ್ನು ಪರಿಹರಿಸಿದೆ.

2014ರಲ್ಲಿ ಭಾರತದ ಆರ್ಥಿಕತೆಯು ಸಂಕಷ್ಟದಲ್ಲಿತ್ತು. ಸಂಭಾವ್ಯ ಹೂಡಿಕೆದಾರರು ಅದರ ಮೇಲೆ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದರು. ನೀತಿಗಳ ನಿರ್ಲಕ್ಷ್ಯ ಮತ್ತು ಭಾರಿ ಭ್ರಷ್ಟಾಚಾರ ಹಗರಣಗಳಿಂದ ಗುರುತಿಸಲ್ಪಟ್ಟ ಒಂದು ದಶಕದ ನಂತರ ಭಾರತವನ್ನು ದುರ್ಬಲ ಐದು ಆರ್ಥಿಕತೆಗಳಲ್ಲಿ ಒಂದೆಂದು ಪರಿಗಣಿಸಲಾಗಿತ್ತು. ಮೋದಿ ಸರ್ಕಾರವು ಭಾರತೀಯ ಆರ್ಥಿಕತೆಯ ಮೇಲೆ ಜಾಗತಿಕ ವಿಶ್ವಾಸವನ್ನು ಮರುನಿರ್ಮಾಣ ಮಾಡಲು ಮತ್ತು ಹೂಡಿಕೆದಾರರಿಗೆ ಅದನ್ನು ಆಕರ್ಷಕವಾಗಿಸಲು ದೃಢವಾದ ಕಾರ್ಯವಿಧಾನವನ್ನು ಅಳವಡಿಸಿಕೊಂಡಿತು. ಅಭಿವೃದ್ಧಿ ಹೊಂದಿದ ದೇಶಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕುವುದು ಮುಂದಿನ ಹಂತವಾಗಿತ್ತು. ಭಾರತದ ಪ್ರಮುಖ ವ್ಯಾಪಾರ ಹಿತಾಸಕ್ತಿಗಳೊಂದಿಗೆ ನೇರವಾಗಿ ಸ್ಪರ್ಧಿಸದ, ದೊಡ್ಡ ಮಾರುಕಟ್ಟೆಗಳನ್ನು ಒದಗಿಸುವ ಅಭಿವೃದ್ಧಿ ಹೊಂದಿದ ಆರ್ಥಿಕತೆಗಳೊಂದಿಗೆ ಸರ್ಕಾರವು ಮುಕ್ತ ವ್ಯಾಪಾರ ಒಪ್ಪಂದಗಳನ್ನು ಮುಂದುವರಿಸಿದೆ. ಇದು ಅಜಾಗರೂಕತೆಯಿಂದ ಸ್ಪರ್ಧಿಗಳಿಗೆ ಭಾರತದ ಬಾಗಿಲುಗಳನ್ನು ತೆರೆಯುವ ಮೂಲಕ ಭಾರತೀಯ ವ್ಯವಹಾರಗಳಿಗೆ ಅಪಾಯವನ್ನುಂಟುಮಾಡುವ ಹಿಂದಿನ ಸರ್ಕಾರದ ವಿಧಾನಕ್ಕಿಂತ ಭಿನ್ನವಾಗಿ, ಪರಸ್ಪರ ಲಾಭದಾಯಕ ಸನ್ನಿವೇಶವನ್ನು ಸೃಷ್ಟಿಸುತ್ತದೆ.

ಇಂದಿನ ಅನಿಶ್ಚಿತ ಜಗತ್ತಿನಲ್ಲಿ, ಪ್ರಧಾನಮಂತ್ರಿ ಮೋದಿಯವರ ನಾಯಕತ್ವದ ಭಾರತವನ್ನು ಚೇತರಿಸಿಕೊಳ್ಳುವ ಆರ್ಥಿಕತೆ ಮತ್ತು ವಿಶ್ವಾಸಾರ್ಹ ಪಾಲುದಾರ ಎಂದು ವ್ಯಾಪಕವಾಗಿ ಗೌರವಿಸಲ್ಪಟ್ಟಿದೆ. ಜೊತೆಗೆ ವಿಶ್ವದ ಅತಿ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಸ್ಥಾನ ಪಡೆದಿದೆ. ಪ್ರಮುಖ ಆರ್ಥಿಕತೆಗಳ ನಡುವಿನ ಸಮಾನ ಮತ್ತು ಮಹತ್ವಾಕಾಂಕ್ಷೆಯ ವ್ಯಾಪಾರ ಒಪ್ಪಂದಗಳಿಗೆ ಸಿ.ಇ.ಟಿ.ಎ ಒಂದು ಮಾನದಂಡವಾಗಿದೆ. ಇದು ಭಾರತದ ಹಿತಾಸಕ್ತಿಗಳಿಗೆ ಧಕ್ಕೆಯಾಗದಂತೆ ಹಿಂದೆಂದಿಗಿಂತಲೂ ಆಕರ್ಷಕ ಜಾಗತಿಕ ಅವಕಾಶಗಳನ್ನು ತೆರೆಯುತ್ತದೆ. 'ನವ ಭಾರತ' ಹೇಗೆ ವ್ಯವಹಾರ ಮಾಡುತ್ತದೆ ಎಂಬುದಕ್ಕೆ ಇದೊಂದು ಉಜ್ವಲ ಉದಾಹರಣೆಯಾಗಿದೆ.

◆

ಪಾಕ್ ಸುಳ್ಳನ್ನು ಬೆಂಬಲಿಸಿದ್ದ ರಾಗಾ: ಬಿಜೆಪಿ

ದೇಶಕ್ಕೆ ಕಾಂಗ್ರೆಸ್ ವಿವರಣೆ ನೀಡಲಿ

• **ಹೊಸದಿಲ್ಲಿ** : 'ಆಪರೇಷನ್ ಸಿಂದೂರ್' ವೇಳೆ ಪಾಕಿಸ್ತಾನದ ಸುಳ್ಳುಪ್ರಚಾರವನ್ನು ಪ್ರತಿಬಿಂಬಿಸುವ ರೀತಿಯಲ್ಲಿ ನಿರೂಪಣೆಗೈದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಈಗ ದೇಶಕ್ಕೆ ಈ ಬಗ್ಗೆ ವಿವರಣೆ ನೀಡಬೇಕಾಗಿದೆ ಎಂದು ಬಿಜೆಪಿ ಬುಧವಾರ ಆಗ್ರಹಿಸಿದೆ. ತಾನು ಹಲವು ರಾಫೆಲ್ ಯುದ್ಧ ವಿಮಾನಗಳನ್ನು ಉರುಳಿಸಿದ್ದಾಗಿ ಹೇಳಿಕೊಂಡ ಪಾಕಿಸ್ತಾನದಿಂದ ಆಧಾರ ಕೇಳುವ ಬದಲಿಗೆ ರಾಹುಲ್ ಗಾಂಧಿ ಭಾರತ ಸರ್ಕಾರವನ್ನೇ ಪ್ರಶ್ನಿಸಿದ್ದು, ರಾಹುಲ್ ಗಾಂಧಿಯ ಕುತ್ಸಿತ ಉದ್ದೇಶವನ್ನು ವ್ಯಕ್ತಗೊಳಿಸಿದ್ದು, ಈ ಬಗ್ಗೆ ಈಗ ದೇಶಕ್ಕೆ ಉತ್ತರಿಸಬೇಕು ಎಂದು ಅದು ಹೇಳಿದೆ.

ಪಾಕಿಸ್ತಾನ ತಾನು 'ಆಪರೇಷನ್ ಸಿಂದೂರ್'ವೇಳೆ ಹಲವು ರಾಫೆಲ್ ಯುದ್ಧ ವಿಮಾನಗಳನ್ನು ಉರುಳಿಸಿದ್ದಾಗಿ ಪ್ರಚುರಪಡಿಸಿತ್ತು. ಇತ್ತೀಚೆಗೆ ಭಾರತೀಯ ವಾಯುಪಡೆ(ಐಎಎಫ್) ಎಲ್ಲ 36 ರಾಫೆಲ್ ಯುದ್ಧ ವಿಮಾನಗಳಿಗೆ ಪೂರಕ ಪ್ಯಾಕೇಜ್‌ಗಾಗಿ ಟೆಂಡರ್ ಕರೆದಿದ್ದನ್ನು ಬಿಜೆಪಿ ಬೊಟ್ಟು ಮಾಡಿದ್ದು, ಪಾಕಿಸ್ತಾನ ಹಲವು ಸಮಯದಿಂದ ಹೇಳುತ್ತಾ ಬಂದಿದ್ದ ಸುಳ್ಳನ್ನು ಬಯಲಿಗೆಳೆದಿರುವುದನ್ನು ಎತ್ತಿತೋರಿದೆ.

ವಿಪರ್ಯಾಸವೆಂದರೆ, ಪಾಕಿಸ್ತಾನವು ಪ್ರಚುರಪಡಿಸಿದ್ದ ಇಂತಹ ಸುಳ್ಳು ಪ್ರಚಾರವನ್ನು ಭಾರತೀಯ ಸೇನೆ ತಿರಸ್ಕರಿಸಿದ್ದರೂ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪಾಕಿಸ್ತಾನದಿಂದ ಇಂತಹ ಪ್ರಚಾರಕ್ಕೆ ಸಾಕ್ಷ್ಯ ಕೇಳುವ ಬದಲಿಗೆ ಭಾರತ ಸರಕಾರವನ್ನೇ ಪ್ರಶ್ನಿಸಿ ಮುಜುಗರವನ್ನುಂಟು ಮಾಡಲು ಯತ್ನಿಸಿದರು. ಆಪರೇಷನ್ ಸಿಂದೂರ್‌ನ ಸಂದರ್ಭ ಭಾರತವು ಗಂಭೀರ ರಾಷ್ಟ್ರೀಯ ಭದ್ರತಾ ಸವಾಲನ್ನು ಎದುರಿಸುತ್ತಿದ್ದರೆ, ರಾಹುಲ್ ಗಾಂಧಿ ಮಾತ್ರ ಭಾರತದ ರಾಫೆಲ್ ಯುದ್ಧ ವಿಮಾನಗಳಿಗೆ ಸಂಬಂಧಿಸಿ ಪಾಕಿಸ್ತಾನ ನಡೆಸುತ್ತಿದ್ದ ಸುಳ್ಳು ಪ್ರಚಾರಗಳನ್ನೇ ಬೆಂಬಲಿಸುವ ಪ್ರಶ್ನೆಗಳು ಮತ್ತು ನಿರೂಪಣೆಗಳನ್ನು ವಿಸ್ತರಿಸಲು ಯತ್ನಿಸುತ್ತಿದ್ದರು ಎಂದು ಬಿಜೆಪಿಯ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ತೀವ್ರವಾಗಿ ಖಂಡಿಸಿದ್ದಾರೆ.

ಭಾರತದ ರಾಫೆಲ್ ಸಮರ ವಿಮಾನಗಳನ್ನು ಹೊಡೆದುರುಳಿಸಿದ್ದೇನೆಂದು ಪ್ರಚುರಪಡಿಸುವ ಸುಳ್ಳುಪ್ರಚಾರವನ್ನು ಪಾಕಿಸ್ತಾನದ ಅಪಮಾಹಿತಿ ವ್ಯವಸ್ಥೆಗಳು ಆಕ್ರಮಣಕಾರಿಯಾಗಿ ನಡೆಸುತ್ತಿದ್ದವು. ಇತ್ತ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವೈರಿಯ ಈ ದುರುದ್ದೇಶದ ಪ್ರಚಾರಕ್ಕೆ ನ್ಯಾಯ ಸಮ್ಮತತೆಯನ್ನು ನೀಡಿದರು. ಸುಳ್ಳು ಪ್ರಚಾರಕ್ಕೆ ಪಾಕಿಸ್ತಾನದಿಂದ ಸಾಕ್ಷ್ಯ ಕೇಳುವ ಬದಲಿಗೆ ರಾಹುಲ್ ಗಾಂಧಿ ಭಾರತ ಸರ್ಕಾರವನ್ನು ಪ್ರಶ್ನಿಸಿದ್ದರು ಎಂದು ಮಾಳವೀಯ ನೆನಪಿಸಿದರು. ರಾಷ್ಟ್ರೀಯ ಭದ್ರತಾ ಕಾರ್ಯಾಚರಣೆಗಳ ವೇಳೆ ವೈರಿಯ ಸುಳ್ಳು ಮಾಹಿತಿ ಅಭಿಯಾನಕ್ಕೆ ಆಮ್ಲಜನಕ ಒದಗಿಸುವುದು ಅತ್ಯಂತ ಬೇಜವಾಬ್ದಾರಿ ರಾಜಕೀಯ ಮಾತ್ರವಲ್ಲ, ರಾಷ್ಟ್ರೀಯ ಹಿತಕ್ಕೇ ಬಗೆಯುವದ್ರೋಹ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು. ಈಗ ರಾಹುಲ್ ಗಾಂಧಿ ತನ್ನ ಕೃತ್ಯದ ಬಗ್ಗೆ ದೇಶದ ಜನತೆಗೆ ಉತ್ತರಿಸಲಿ ಎಂದರು. ರಾಫೆಲ್ ಯುದ್ಧ ವಿಮಾನಗಳನ್ನು ಉರುಳಿಸಿದ್ದಾಗಿ ಪಾಕಿಸ್ತಾನ ಹೇಳಿಕೊಂಡಾಗ ಅದಕ್ಕೆ ಸಾಕ್ಷ್ಯ ನೀಡುವಂತೆ ಭಾರತ ಕೇಳಿದಾಗ ಅಂತಹ ಯಾವುದೇ ಸಾಕ್ಷ್ಯ ನೀಡಲು ಪಾಕಿಸ್ತಾನ ವಿಫಲವಾಗಿತ್ತು. ಅಲ್ಲದೆ ಫ್ರಾನ್ಸ್‌ನ ರಾಫೆಲ್ ಸಂಸ್ಥೆ ಕೂಡ ಯಾವುದೇ ರಾಫೆಲ್ ವಿಮಾನ ಪತನವಾಗಿರುವುದನ್ನು ನಿರಾಕರಿಸಿತ್ತು. ಆನಂತರ ತನ್ನ ಮುಖವುಳಿಸಿಕೊಳ್ಳಲು ಪಾಕಿಸ್ತಾನ ಮುಂದುವರಿಸಿದ್ದ ಅಪಪ್ರಚಾರಕ್ಕೆ ಭಾರತ ಪ್ರತಿಕ್ರಿಯಿಸುವುದನ್ನು ನಿಲ್ಲಿಸಿತ್ತು.

ನೀಟ್ ಮರು ಪರೀಕ್ಷೆ ಸುಗಮ ಪ್ರಶಂಸಾರ್ಹ: ಮೋದಿ

ಇಲಾಖೆಗಳ ಸಮನ್ವಯತೆ ಮುಖ್ಯ

• **ಹೊಸದಿಲ್ಲಿ**: ವಿವಿಧ ಇಲಾಖೆಗಳ ಮಧ್ಯೆ ಪರಸ್ಪರ ಸಮನ್ವಯತೆ ತೀರಾ ಮುಖ್ಯವೆಂದು ಬುಧವಾರ ಕೇಂದ್ರ ಸಂಪುಟ ಸಭೆಯಲ್ಲಿ ಪ್ರತಿಪಾದಿಸಿರುವ ಪ್ರಧಾನಿ ನರೇಂದ್ರ ಮೋದಿ, ನೀಟ್-ಯುಜಿ ಮರು ಪರೀಕ್ಷೆ ಸುಗಮವಾಗಿ ನಡೆಯುವಲ್ಲಿ ಇಂತಹ ಸಮನ್ವಯ ಪ್ರಯತ್ನಗಳ ಸಾಕಾರ ಪ್ರಶಂಸಾರ್ಹ ಎಂದು ಪ್ರಶಂಸಿಸಿದ್ದಾರೆ.

ನೀಟ್ ಮರು ಪರೀಕ್ಷೆ ಪಾರದರ್ಶಿಯಾಗಿ ನಡೆದುದನ್ನು ಉದಾಹರಿಸಿದ ಪ್ರಧಾನಿ ಮೋದಿ, ವಿವಿಧ ಖಾತೆಗಳ ನಡುವೆ ಸಂಪೂರ್ಣ ಸಮನ್ವಯತೆ ಮುಖ್ಯವೆಂದು ಪುನರುಚ್ಚರಿಸಿದರು. ಸಂಪೂರ್ಣವಾಗಿ ಸರಕಾರದ ಧೋರಣೆ-ಪ್ರಯತ್ನಗಳ ಬಲದಿಂದ ಸವಾಲುಗಳು, ಸಮಸ್ಯೆಗಳ ನಿಭಾಯಿಸುವಂತೆ ಸಲಹೆ ಮಾಡಿದರು. ವಿವಿಧ ಖಾತೆಗಳು ಆಳವಾದ ಮತ್ತು ಸಮನ್ವಯತೆ ನೆಲೆಯಲ್ಲಿ ಕಾರ್ಯತತ್ಪರರಾದಲ್ಲಿ ಯಾವುದೇ ಸವಾಲುಗಳ ಎದುರಿಸಲು ಸಾಧ್ಯವೆಂದು ಹೇಳಿದರು. ಇಂಧನ ಕೊರತೆ ಜನಸಾಮಾನ್ಯರನ್ನು ಬಾಧಿಸದಿರಲು ಪರಸ್ಪರ ಸಮನ್ವಯತೆಯಿಂದ ಕೆಲಸ ಮಾಡಿ ಎಂದು ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಸಂದರ್ಭದಲ್ಲೂ ವಿವಿಧ ಇಲಾಖೆಗಳಿಗೆ ಮೋದಿ ಕರೆ ನೀಡಿದ್ದರು. ತನ್ಮೂಲಕ ಸಮನ್ವಯತೆಯ ಮಹತ್ವವನ್ನು ಪ್ರತಿಪಾದಿಸಿದ್ದರು. ಇಂಧನ ಭದ್ರತೆ, ಸಾಗರ ಸುರಕ್ಷೆ, ಭಾರತೀಯರಿಗೆ ನೆರವು ಕಲ್ಪಿಸುವನ್ನಾಯ ವಿವಿಧ ಖಾತೆಗಳು ಜಂಟಿಯಾಗಿ ಸಮನ್ವಯದ ಪ್ರಯತ್ನಗಳನ್ನು ನಡೆಸಬೇಕೆಂದು ಕರೆ ನೀಡಿದ್ದರು. ಪ.ಏಷ್ಯಾ ಸಮರದ ಹಿನ್ನೆಲೆಯಲ್ಲಿ ಇಂಧನ ಭದ್ರತಾ ಸನ್ನಿವೇಶ ಬಗ್ಗೆ ಸಕಾಲಿಕ ಮಾಹಿತಿ ಒದಗಿಸುವುದಕ್ಕಾಗಿ, ಅಂತರ ಸಚಿವಾಲಯ ತಂಡಗಳನ್ನು ಸರಕಾರ ರಚಿಸಿತ್ತು ಮತ್ತು ನಿಯತವಾಗಿ ಸಭೆಗಳನ್ನು ಆಯೋಜಿಸಿತ್ತು.



ಎಫ್‌ಸಿಆರ್‌ಎ ನಿಯಮ ಬಿಗಿ

ವಿದೇಶಿ ನಿಧಿಯಿಂದ ಧರ್ಮಾಂತರ ಚಟುವಟಿಕೆಗೆ ನಿರ್ಬಂಧ

ವಿದೇಶಿ ನಿಧಿ ಪಡೆಯುವ ಸರ್ಕಾರೇತರ ಸಂಸ್ಥೆಗಳ(ಎನ್‌ಜಿಒ) ಮೇಲೆ ಕೇಂದ್ರ ಸರ್ಕಾರ ಹೊಸ ನಿಯಮಗಳನ್ನು ಜಾರಿಗೊಳಿಸಿದ್ದು, ಮಾಹಿತಿ ಬಹಿರಂಗಪಡಿಸುವಿಕೆ ಮತ್ತು ಮೇಲ್ವಿಚಾರಣೆಯನ್ನು ಇನ್ನಷ್ಟು ಕಠಿಣಗೊಳಿಸಿದೆ. ಜತೆಗೆ, ವಿದೇಶಿ ನಿಧಿಯಿಂದ ನಡೆಸುವ ಧಾರ್ಮಿಕ ಚಟುವಟಿಕೆಗಳ ವ್ಯಾಪ್ತಿಯಿಂದ ಮತಾಂತರವನ್ನು ಹೊರಗಿಡಲಾಗಿದೆ. ಈ ಪೈಕಿ ಮುಖ್ಯವಾಗಿ ವಿದೇಶಿ ದೇಣಿಗೆಯನ್ನು ಬಳಸಿಕೊಂಡು ಮತಾಂತರ ಅಥವಾ ಮತಪ್ರಚಾರ ಚಟುವಟಿಕೆ ನಡೆಸುವುದಕ್ಕೆ ಕಡಿವಾಣ ಹಾಕಿದೆ. ಈ ಮೂಲಕ ಸ್ವಯಂಸೇವಾ ಸಂಸ್ಥೆಗಳು ಹಾಗೂ ಇತರ ಸಂಘಟನೆಗಳಿಗೆ ವಿದೇಶಿ ನಿಧಿ ಸ್ವೀಕಾರ ಮತ್ತು ಬಳಕೆಯ ನಿಯಮಗಳನ್ನು ಮತ್ತಷ್ಟು ಬಿಗಿಗೊಳಿಸಿದೆ.

ಹೊಸ ನಿಯಮ ಪ್ರಕಟ

ಕೇಂದ್ರ ಗೃಹ ಸಚಿವಾಲಯ ಈ ತಿದ್ದುಪಡಿ ನಿಯಮಗಳನ್ನು ಪ್ರಕಟಿಸಿದೆ. ವಿದೇಶಿ ಕೊಡುಗೆ (ನಿಯಂತ್ರಣ) ಕಾಯ್ದೆ(ಎಫ್‌ಸಿಆರ್‌ಎ) ಅಡಿಯಲ್ಲಿ ನೋಂದಣಿ ಅಥವಾ ಪೂರ್ವಾನುಮತಿ ಪಡೆಯಲು ಅರ್ಜಿ ಸಲ್ಲಿಸುವ ಎನ್‌ಜಿಒಗಳಿಗೆ ಈ ನಿಯಮಗಳು ಅನ್ವಯವಾಗುತ್ತವೆ. ಹೊಸ ನಿಯಮಗಳ ಪ್ರಕಾರ, ಸಂಸ್ಥೆಗಳು ತಮ್ಮ ಕಾರ್ಯಕ್ಷೇತ್ರ, ಉದ್ದೇಶಗಳು, ಕಾರ್ಯನಿರ್ವಹಿಸುವ ರಾಜ್ಯಗಳು, ವಿದೇಶಿ ದಾನಿಗಳು, ಸಾಮಾಜಿಕ ಜಾಲತಾಣ ಖಾತೆಗಳು, ವಿದೇಶಿ ನಿಧಿಯ ಬಳಕೆ ಹಾಗೂ ಯಾವ ಉದ್ದೇಶಕ್ಕಾಗಿ ನಿಧಿ ಕೇಳಲಾಗುತ್ತಿದೆ ಎಂಬುದರ ಕುರಿತು ವಿವರವಾದ ಮಾಹಿತಿ ನೀಡಬೇಕಾಗುತ್ತದೆ.

ವಿದೇಶಿ ನಾಗರಿಕರಿಗೆ ಪ್ರಮುಖ ಹುದ್ದೆಗಳಿಲ್ಲ

ಅಧಿಸೂಚನೆಯ ಪ್ರಕಾರ, ಭಾರತೀಯ ಮೂಲದವರಲ್ಲದ ವಿದೇಶಿ ನಾಗರಿಕರು ಪ್ರಮುಖ ಪದಾಧಿಕಾರಿಗಳಾಗಿರುವ ಸಂಸ್ಥೆಗಳಿಗೆ ಸಾಮಾನ್ಯ ನಿಯಮಗಳಲ್ಲಿ ಎಫ್‌ಸಿಆರ್‌ಎ ನೋಂದಣಿ ಅಥವಾ ಪೂರ್ವಾನುಮತಿ ನೀಡಲಾಗುವುದಿಲ್ಲ. ಈ ಬಗ್ಗೆ ಹೊಸ ಸ್ಪಷ್ಟೀಕರಣವನ್ನು ನಿಯಮಗಳಲ್ಲಿ ಸೇರಿಸಲಾಗಿದ್ದು, ಇಂತಹ ಸಂಸ್ಥೆಗಳು ನೇರವಾಗಿ ಅರ್ಹವೆಂದು ಪರಿಗಣಿಸಲ್ಪಡುವುದಿಲ್ಲ ಎಂದು ತಿಳಿಸಲಾಗಿದೆ.

ಧಾರ್ಮಿಕ ಚಟುವಟಿಕೆಗಳ ವ್ಯಾಖ್ಯಾನ

ತಿದ್ದುಪಡಿ ನಿಯಮಗಳು ವಿದೇಶಿ ನಿಧಿಯಿಂದ ನಡೆಸಬಹುದಾದ ಧಾರ್ಮಿಕ ಚಟುವಟಿಕೆಗಳ ಪಟ್ಟಿಯನ್ನು ಸ್ಪಷ್ಟವಾಗಿ ನಿರ್ದಿಷ್ಟಪಡಿಸಿವೆ. ಪೂಜಾಸ್ಥಳಗಳ ನಿರ್ಮಾಣ, ನವೀಕರಣ ಮತ್ತು ನಿರ್ವಹಣೆ, ಪವಿತ್ರ ಗ್ರಂಥಗಳ ಸಂರಕ್ಷಣೆ, ಮುದ್ರಣ, ಅನುವಾದ ಮತ್ತು ಡಿಜಿಟಲೀಕರಣ, ಧಾರ್ಮಿಕ ಅಧ್ಯಯನ ಸಂಸ್ಥೆಗಳ ಸಂರಕ್ಷಣೆ, ಯಾತ್ರಿಕರ ಸೌಲಭ್ಯಗಳು, ಧರ್ಮಶಾಲೆಗಳು, ಲಂಗರ್ ಮತ್ತು ಸಮುದಾಯ ಅಡುಗೆ ಕೇಂದ್ರಗಳು, ಧಾರ್ಮಿಕ ಶಿಕ್ಷಣ, ಆಧ್ಯಾತ್ಮಿಕ ಪ್ರವಚನಗಳು, ಭಕ್ತಿಗೀತೆಗಳು, ಮೂಲನಿವಾಸಿ ಮತ್ತು ಬುಡಕಟ್ಟು ಧಾರ್ಮಿಕ ಪರಂಪರೆಗಳ ಸಂರಕ್ಷಣೆ, ಧಾರ್ಮಿಕ ಪರಂಪರೆಯ ತಾಣಗಳ ರಕ್ಷಣೆ, ಅಂತರ್‌ಧರ್ಮ ಸಂವಾದ ಕಾರ್ಯಕ್ರಮಗಳು, ಧಾರ್ಮಿಕ ಪ್ರಕಟಣೆಗಳು, ಗ್ರಂಥಾಲಯಗಳು, ವಸ್ತುಸಂಗ್ರಹಾಲಯಗಳು, ಧಾರ್ಮಿಕ ಸಂಸ್ಥೆಗಳ ಸಲಹಾ ಮತ್ತು ವ್ಯಸನಮುಕ್ತಿ ಕೇಂದ್ರಗಳು, ಸಾಂಪ್ರದಾಯಿಕ ಕಲೆಗಳ ತರಬೇತಿ ಹಾಗೂ ಸಮಾಧಿ ಮತ್ತು ಸ್ಮಶಾನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಇವುಗಳಿಗೆ ಅನುಮತಿ ನೀಡಲಾಗಿದೆ.

ಆರೋಗ್ಯ, ನೈರ್ಮಲ್ಯ ಮತ್ತು ಮಕ್ಕಳ ರಕ್ಷಣೆಗೆ ನಿಧಿ

ಸಾಮಾಜಿಕ ವಲಯದಲ್ಲಿ ಶೌಚಾಲಯ ನಿರ್ಮಾಣ, ನೈರ್ಮಲ್ಯ ಜಾಗೃತಿ, ಋತುಸ್ರಾವ ಆರೋಗ್ಯ ಕಾರ್ಯಕ್ರಮಗಳು, ಮಾರಣಾಂತಿಕ ಕಾಯಿಲೆಯಿಂದ ಬಳಲುತ್ತಿರುವವರಿಗೆ ಉಪಶಾಮಕ ಚಿಕಿತ್ಸೆ ಮತ್ತು ಅಂತಿಮ ಹಂತದ ಆರೈಕೆ ಸೇವೆಗಳಿಗೆ ವಿದೇಶಿ ಹಣ ಬಳಸಬಹುದಾಗಿದೆ. ಅನಾಥಾಶ್ರಮಗಳು, ಮಕ್ಕಳ ಪೋಷಣಾ ಆರೈಕೆ, ದತ್ತು ಸ್ವೀಕಾರಕ್ಕೆ ನೆರವು ಮತ್ತು ಮಕ್ಕಳ ರಕ್ಷಣಾ ಕೇಂದ್ರಗಳಿಗೂ ವಿದೇಶಿ ನಿಧಿ ಪಡೆಯಲು ಅವಕಾಶ ನೀಡಲಾಗಿದೆ.

ಸ್ಪಷ್ಟ ಉದ್ದೇಶ ಘೋಷಣೆ ಕಡ್ಡಾಯ

ತಿದ್ದುಪಡಿ ನಿಯಮಗಳ ಪ್ರಕಾರ, ಎನ್‌ಜಿಒಗಳು ತಮ್ಮ ಉದ್ದೇಶಗಳನ್ನು ಸ್ಪಷ್ಟವಾಗಿ ಘೋಷಿಸಬೇಕು. ಸಂಸ್ಥೆಗಳು ಪಡೆದ ವಿದೇಶಿ ನಿಧಿಯನ್ನು ಭಾರತದಲ್ಲಿ ಮಾತ್ರ ಬಳಸಬೇಕು ಹಾಗೂ ಅದು ಸಂಸ್ಥೆಯ ಘೋಷಿತ ಉದ್ದೇಶಗಳು ಮತ್ತು ನಿಧಿ ಪಡೆದ ಕಾರಣಗಳಿಗೆ ಅನುಗುಣವಾಗಿರಬೇಕು ಎಂದು ಅಧಿಸೂಚನೆ ತಿಳಿಸಿದೆ. ಹೀಗಾಗಿ, ಸಂಸ್ಥೆಗಳು ಅನುಮತಿ ಪಡೆಯುವ ಸಂದರ್ಭದಲ್ಲಿ ನೀಡಿದ ಉದ್ದೇಶಗಳ ಪ್ರಕಾರವೇ ವಿದೇಶಿ ನಿಧಿಯನ್ನು ಬಳಸಬೇಕಾಗುತ್ತದೆ.

ನಿಧಿ ಬಳಕೆಗೆ ಕಠಿಣ ಷರತ್ತುಗಳು

ಹೊಸ ನಿಯಮಗಳಲ್ಲಿ ವಿದೇಶಿ ನಿಧಿಯ ಕಂತುಗಳ ಬಿಡುಗಡೆಗೆ ಕಟ್ಟುನಿಟ್ಟಿನ ಷರತ್ತುಗಳನ್ನು ವಿಧಿಸಲಾಗಿದೆ. ಎರಡನೇ ಅಥವಾ ನಂತರದ ಕಂತಿನ ಬಿಡುಗಡೆಗಾಗಿ ಅರ್ಜಿ ಸಲ್ಲಿಸುವ ಸಂಸ್ಥೆಗಳು ಫಾರ್ಮ್ ಎಫ್‌ಸಿ-3ಬಿ ಮೂಲಕ ಅರ್ಜಿ ಸಲ್ಲಿಸಬೇಕು. ಹಿಂದಿನ ಕಂತಿನಲ್ಲಿ ಪಡೆದ ನಿಧಿಯ ಕನಿಷ್ಠ ಶೇ.75 ಬಳಸಿದ ನಂತರ ಮಾತ್ರ ಮುಂದಿನ ಕಂತು ಬಿಡುಗಡೆಗೊಳ್ಳಲಿದೆ. ಇದಕ್ಕೂ ಮೊದಲು, ನಿಧಿಯ ಬಳಕೆಯನ್ನು ಪರಿಶೀಲಿಸಲು ಕ್ಷೇತ್ರಮಟ್ಟದ ತಪಾಸಣೆ ಅಥವಾ ಪರಿಶೀಲನೆ ನಡೆಸಲಾಗುತ್ತದೆ.

ಕಾರ್ಯವ್ಯಾಪ್ತಿ ಬದಲಾವಣೆ ಕಷ್ಟ

ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಲು ಅಥವಾ ಬದಲಾಯಿಸಲು ಬಯಸುವ ಸಂಸ್ಥೆಗಳಿಗೂ ಹೊಸ ನಿಯಮಗಳು ಅನ್ವಯವಾಗುತ್ತವೆ. ಹೊಸದಾಗಿ ಸೇರಿಸಲಾದ ರೂಲ್ 17ಬಿ ಪ್ರಕಾರ, ನೋಂದಣಿ ಪ್ರಮಾಣಪತ್ರದಲ್ಲಿ ಉಲ್ಲೇಖಿಸಲಾದ ಉದ್ದೇಶ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶವನ್ನು ಸೇರಿಸಲು ಅಥವಾ ತೆಗೆದುಹಾಕಲು ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯಬೇಕು. ಈ ಸಂಬಂಧ ಫಾರ್ಮ್ ಎಫ್‌ಸಿ-6ಎಫ್ ಮೂಲಕ ಅರ್ಜಿ ಸಲ್ಲಿಸಬೇಕು. ಜತೆಗೆ ಆಡಳಿತ ಮಂಡಳಿಯ ನಿರ್ಣಯ ಮತ್ತು ನಿಗದಿತ ಶುಲ್ಕವನ್ನು ಸಲ್ಲಿಸಬೇಕಾಗುತ್ತದೆ. ಅರ್ಜಿ ಕುರಿತು ಅಗತ್ಯ ತನಿಖೆ ನಡೆಸಿದ ಬಳಿಕ ಕೇಂದ್ರ ಸರ್ಕಾರ ಅನುಮೋದನೆ ಅಥವಾ ನಿರಾಕರಣೆ ನೀಡಬಹುದು.

ಮತಾಂತರಕ್ಕೆ ಅವಕಾಶವಿಲ್ಲ

ಆದರೆ, ಧರ್ಮಪ್ರಚಾರದ ಮೂಲಕ ಮತಾಂತರ ಮಾಡುವ ಚಟುವಟಿಕೆಗಳನ್ನು ಅನುಮತಿಸಲ್ಪಟ್ಟ ಧಾರ್ಮಿಕ ಚಟುವಟಿಕೆಗಳ ಪಟ್ಟಿಯಿಂದ ಸ್ಪಷ್ಟವಾಗಿ ಹೊರಗಿಡಲಾಗಿದೆ. ಧಾರ್ಮಿಕ ಶಿಕ್ಷಣ, ಸತ್ಸಂಗ, ಆಧ್ಯಾತ್ಮಿಕ ಪ್ರವಚನಗಳು ಮತ್ತು ಧ್ಯಾನ ಶಿಬಿರಗಳಿಗೆ ಅನುಮತಿ ಇದ್ದರೂ, ಅವುಗಳಲ್ಲಿ ಮತಾಂತರ ಉದ್ದೇಶ ಇರಬಾರದು ಎಂದು ನಿಯಮಗಳು ಹೇಳುತ್ತವೆ. ಅದೇ ರೀತಿ, ಮೂಲನಿವಾಸಿ ಮತ್ತು ಬುಡಕಟ್ಟು ಧಾರ್ಮಿಕ ಸಂಪ್ರದಾಯಗಳನ್ನು ದಾಖಲಿಸುವ ಅಥವಾ ಪುನರುಜ್ಜೀವನಗೊಳಿಸುವ ಕಾರ್ಯಗಳಿಗೆ ಅವಕಾಶವಿದ್ದರೂ, ಅವು ಮತಾಂತರಕ್ಕೆ ಕಾರಣವಾಗಬಾರದು.

ಭಾರತೀಯ ಪರಂಪರೆ ಆಧರಿತ ಕಲೆಗೆ ನೆರವು

ಸಾಂಸ್ಕೃತಿಕ ವಲಯದಲ್ಲಿ ಭಾರತೀಯ ಸಂಪ್ರದಾಯಗಳಿಂದ ಪ್ರೇರಿತವಾದ ಸಮಕಾಲೀನ ಕಲೆಗಳ ಪ್ರೋತ್ಸಾಹಕ್ಕೆ ವಿದೇಶಿ ಹಣ ಬಳಸಬಹುದು. ಆದರೆ ರಾಜಕೀಯ ಮತ್ತು ಸೈದ್ಧಾಂತಿಕ ವಿಷಯಗಳಿಗೆ ಅವಕಾಶ ಇರುವುದಿಲ್ಲ. ದೃಶ್ಯಕಲೆ, ಶಿಲ್ಪಕಲೆ, ಸಿನಿಮಾ, ಛಾಯಾಗ್ರಹಣ ಮತ್ತು ವಿನ್ಯಾಸದ ಅಭಿವೃದ್ಧಿ, ಸಾಂಸ್ಕೃತಿಕ ಮಾನವಶಾಸ್ತ್ರ, ಜನಾಂಗಶಾಸ್ತ್ರ ಮತ್ತು ಜಾನಪದ ಅಧ್ಯಯನದ ಸಂಶೋಧನೆಗೆ ವಿದೇಶಿ ನೆರವು ಪಡೆಯಬಹುದಾಗಿದೆ. ಭರತನಾಟ್ಯ, ಕಥಕ್, ಒಡಿಸ್ಸಿ, ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ ಮತ್ತು ಯಕ್ಷಗಾನ ಸೇರಿದಂತೆ ಶಾಸ್ತ್ರೀಯ ಕಲೆಗಳ ಸಂರಕ್ಷಣೆ ಮತ್ತು ಪ್ರೋತ್ಸಾಹಕ್ಕೂ ವಿದೇಶಿ ದೇಣಿಗೆ ಬಳಸಬಹುದು.

ಜ್ಞಾನ ಪರಂಪರೆಯ ಸಂರಕ್ಷಣೆಗೆ ಅವಕಾಶ

ಚಲನಚಿತ್ರಗಳು, ಆಕಾಶವಾಣಿ ಕಾರ್ಯಕ್ರಮಗಳು, ನಾಟಕದ ಹಸ್ತಪ್ರತಿಗಳು ಮತ್ತು ಛಾಯಾಚಿತ್ರಗಳ ಸಂಗ್ರಹ ಹಾಗೂ ಅಂಕೀಕರಣ, ಖಗೋಳಶಾಸ್ತ್ರ, ಗಣಿತ, ಲೋಹಶಾಸ್ತ್ರದ ಹಸ್ತಪ್ರತಿಗಳು ಮತ್ತು ಸಾಂಪ್ರದಾಯಿಕ ತಂತ್ರಜ್ಞಾನಗಳಂತಹ ವೈಜ್ಞಾನಿಕ ಹಾಗೂ ಜ್ಞಾನ ಪರಂಪರೆಯ ಸಂರಕ್ಷಣೆಗೆ ಅವಕಾಶ ನೀಡಲಾಗಿದೆ. ಸಾಹಿತ್ಯ ಅಕಾಡೆಮಿಗಳ ಸ್ಥಾಪನೆ, ಲೇಖಕರು, ಕವಿಗಳು ಮತ್ತು ಅನುವಾದಕರಿಗೆ ಬೆಂಬಲ ಹಾಗೂ ಪುಸ್ತಕ ಮೇಳಗಳ ಆಯೋಜನೆಗೂ ವಿದೇಶಿ ಹಣ ಬಳಸಬಹುದು.

ಶಿಕ್ಷಣ, ಉದ್ಯೋಗಕ್ಕೂ ಅನುಕೂಲ

ವಲಸೆ ಕಾರ್ಮಿಕರು, ನಿರಾಶ್ರಿತರು ಮತ್ತು ಅಲೆಮಾರಿ ಸಮುದಾಯಗಳ ಮಕ್ಕಳ ಶಿಕ್ಷಣ, ಶಾಲೆಗಳಲ್ಲಿ ಮೌಲ್ಯಾಧಾರಿತ ಮತ್ತು ನೈತಿಕ ಶಿಕ್ಷಣಕ್ಕೂ ವಿದೇಶಿ ದೇಣಿಗೆ ಬಳಸಬಹುದಾಗಿದೆ. ಹಿಂದುಳಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಅಧ್ಯಯನ ವೇತನ, ಮಾಸಿಕ ಭತ್ಯೆ ಮತ್ತು ಆರ್ಥಿಕ ನೆರವು, ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ ಶಿಕ್ಷಣ ಕಾರ್ಯಕ್ರಮಗಳು, ವಿಜ್ಞಾನ ಸಂಘಗಳು ಮತ್ತು ಆವಿಷ್ಕಾರ ಮೇಳಗಳಿಗೂ ನೆರವು ಪಡೆಯಬಹುದು. ಯುವ ನಾಯಕತ್ವ ಮತ್ತು ನಾಗರಿಕ ಭಾಗವಹಿಸುವಿಕೆ ಕಾರ್ಯಕ್ರಮಗಳೂ ಅನುಮತಿಸಲಾದ ಶೈಕ್ಷಣಿಕ ಚಟುವಟಿಕೆಗಳಲ್ಲಿ ಸೇರಿವೆ.

ಕಿರುಸುದ್ದಿ

ಪಾಸ್‌ಪೋರ್ಟ್ ಪೌರತ್ವಕ್ಕೆ ಅಂತಿಮ ಪುರಾವೆಯಲ್ಲ!

• **ಹೊಸದಿಲ್ಲಿ**: ಭಾರತೀಯ ಪಾಸ್‌ಪೋರ್ಟ್ ಹೊಂದಿದ ಮಾತ್ರಕ್ಕೆ ವ್ಯಕ್ತಿಯ ಪೌರತ್ವವನ್ನು ನಿರ್ಣಾಯಕವಾಗಿ ಸಾಬೀತುಪಡಿಸುವುದಿಲ್ಲ ಎಂದು ಕೇಂದ್ರ ವಿದೇಶಾಂಗ ಸಚಿವಾಲಯ ಸ್ಪಷ್ಟಪಡಿಸಿದೆ. ಪಾಸ್‌ಪೋರ್ಟ್ ಭಾರತೀಯ ನಾಗರಿಕರಿಗೆ ಮಾತ್ರ ನೀಡಲಾಗುತ್ತದೆಯಾದರೂ, ಅದು ಮೂಲತಃ ಅಂತಾರಾಷ್ಟ್ರೀಯ ಪ್ರಯಾಣಕ್ಕೆ ಅನುಕೂಲ ಕಲ್ಪಿಸುವ ಸರ್ಕಾರಿ ದಾಖಲೆಯಾಗಿದೆ ಎಂದು ತಿಳಿಸಿದೆ. ಪಾಸ್‌ಪೋರ್ಟ್ ಅನ್ನು ಕೇಂದ್ರ ಸರ್ಕಾರವೇ ವಿತರಿಸುತ್ತದೆ. ಅರ್ಜಿದಾರರ ಹೆಸರು, ವಿಳಾಸ, ಗುರುತು ಹಾಗೂ ಪೌರತ್ವಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದ ನಂತರವೇ ಅದನ್ನು ನೀಡಲಾಗುತ್ತದೆ. ಆದರೆ ಪಾಸ್‌ಪೋರ್ಟ್ ಹೊಂದಿರುವುದೊಂದೇ ಕಾನೂನಿನ ದೃಷ್ಟಿಯಲ್ಲಿ ಪೌರತ್ವವನ್ನು ಅಂತಿಮವಾಗಿ ಸ್ಥಾಪಿಸುವುದಿಲ್ಲ ಎಂದು ಸಚಿವಾಲಯ ಹೇಳಿದೆ. ಪಾಸ್‌ಪೋರ್ಟ್‌ನ ಕೊನೆಯ ಪುಟದಲ್ಲಿಯೂ ಅದು ಭಾರತ ಸರ್ಕಾರದ ಆಸ್ತಿಯಾಗಿದ್ದು, ಸರ್ಕಾರ ಸೂಚಿಸಿದಾಗ ಅದನ್ನು ಹಿಂದಿರುಗಿಸಬೇಕಾಗುತ್ತದೆ ಎಂದು ನಮೂದಿಸಲಾಗಿದೆ.

ವಿಶ್ವನಾಥ್ ಸಿನ್ಹಾ ಕೇರಳ ಮುಖ್ಯ ಕಾರ್ಯದರ್ಶಿ

• **ತಿರುವನಂತಪುರಂ**: ಕೇರಳದ ನೂತನ ಮುಖ್ಯ ಕಾರ್ಯದರ್ಶಿಯಾಗಿ ವಿಶ್ವನಾಥ್ ಸಿನ್ಹಾ ಅವರ ನೇಮಕಕ್ಕೆ ಕೇರಳ ಸಂಪುಟ ಒಪ್ಪಿಗೆ ನೀಡಿದೆ. 1991ರ ಬ್ಯಾಚಿನ ಐಎಎಸ್ ಅಧಿಕಾರಿಯಾಗಿರುವ ಸಿನ್ಹಾ ಅವರು ಜೂ.30ರಂದು ನಿವೃತ್ತರಾಗುತ್ತಿರುವ ಮುಖ್ಯ ಕಾರ್ಯದರ್ಶಿ ಜಯತಿಲಕ್ ಅವರ ಸ್ಥಾನವನ್ನು ತುಂಬಲಿದ್ದಾರೆ. ಬಿಹಾರ ಮೂಲದವರಾದ ಸಿನ್ಹಾ ಅವರು, ಪ್ರಸ್ತುತ ಗೃಹ ಮತ್ತು ವಿಜಿಲೆನ್ಸ್ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯಾಗಿದ್ದರು.

ಆಂಧ್ರದಲ್ಲಿ ದೇಶದ ಮೊದಲ ಖಾಸಗಿ ಚಿನ್ನದ ಗಣಿ

• **ಕರ್ನೂಲ್**: ಸ್ವತಂತ್ರ ಭಾರತದ ಮೊದಲ ಖಾಸಗಿ ಸಮಗ್ರ ಗ್ರೀನ್‌ಫೀಲ್ಡ್ ಚಿನ್ನದ ಗಣಿಗಾರಿಕೆ ಯೋಜನೆಯನ್ನು ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಬುಧವಾರ ಕರ್ನೂಲಿನ ಜೊನ್ನಾಗಿರಿಯಲ್ಲಿ ಉದ್ಘಾಟಿಸಿದ್ದಾರೆ. ಇದು ದೇಶದ ಗಣಿಗಾರಿಕೆ ಕ್ಷೇತ್ರದಲ್ಲಿ ಐತಿಹಾಸಿಕ ಮೈಲಿಗಲ್ಲಾಗಿದೆ. ಚಿನ್ನದ ಬೆಲೆಗಳು ಐತಿಹಾಸಿಕ ಗರಿಷ್ಠ ಮಟ್ಟದಲ್ಲಿರುವ ಪ್ರಸ್ತುತ ಸಮಯದಲ್ಲಿ ವಾಣಿಜ್ಯ ಪ್ರಮಾಣದ ದೇಶೀಯ ಚಿನ್ನದ ಉತ್ಪಾದನೆಯು ಉತ್ತಮ ಬೆಳವಣಿಗೆಯಾಗಿದೆ.

ನಿರ್ದಿಷ್ಟವಾದ ದೇವರುಗಳ ಹೆಸರಲ್ಲಿ ಪ್ರಮಾಣ ಸಲ್ಲದು

• **ತಿರುವನಂತಪುರಂ**: ತಿರುವನಂತಪುರಂ ಮಹಾನಗರ ಪಾಲಿಕೆಯ 20 ಬಿಜೆಪಿ ಸದಸ್ಯರು ಸ್ವೀಕರಿಸಿದ್ದ ಪ್ರಮಾಣವಚನವನ್ನು ಅಸಿಂಧುಗೊಳಿಸಿರುವ ಕೇರಳ ಹೈಕೋರ್ಟ್, ನಾಲ್ಕು ವಾರಗಳೊಳಗೆ ನಿಗದಿತ ವಿಧಾನದಂತೆ ಮತ್ತೊಮ್ಮೆ ಪ್ರಮಾಣ ಸ್ವೀಕರಿಸುವಂತೆ ಆದೇಶಿಸಿದೆ. ಅಧಿಕಾರ ಸ್ವೀಕಾರದ ವೇಳೆ ಪಾಲಿಕೆ ಸದಸ್ಯರು ನಿರ್ದಿಷ್ಟ ದೇವರುಗಳು ಹಾಗೂ ಹುತಾತ್ಮರ ಹೆಸರನ್ನು ಉಲ್ಲೇಖಿಸಿದ್ದರು. ಇದು ಕಾನೂನಿನಲ್ಲಿ ನಿಗದಿಪಡಿಸಿರುವ ಪ್ರಮಾಣವಚನದ ಮಾದರಿಗೆ ವಿರುದ್ಧವಾಗಿದೆ ಎಂದು ನ್ಯಾ.ಪಿ.ವಿ. ಕುಂಞಿಕೃಷ್ಣನ್ ಅಭಿಪ್ರಾಯಪಟ್ಟಿದ್ದಾರೆ. ಸಿಪಿಎಂ ಪಾಲಿಕೆ ಸದಸ್ಯ ಎಸ್.ಪಿ. ದೀಪಕ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿ, ನ್ಯಾಯಾಲಯ ಈ ಆದೇಶ ನೀಡಿದೆ. ಚುನಾಯಿತ ಪ್ರತಿನಿಧಿಗಳು ದೇವರ ಹೆಸರಿನಲ್ಲಿ ಅಥವಾ ಸಂವಿಧಾನದ ಹೆಸರಿನಲ್ಲಿ ಮಾತ್ರ ಪ್ರಮಾಣ ಸ್ವೀಕರಿಸಬೇಕು. ನಿರ್ದಿಷ್ಟ ದೇವತೆಗಳು ಅಥವಾ ವ್ಯಕ್ತಿಗಳ ಹೆಸರನ್ನು ಸೇರಿಸುವುದು ಸಂವಿಧಾನದ ತತ್ವಗಳು ಹಾಗೂ ಕಾನೂನಿನಲ್ಲಿ ನಿಗದಿಪಡಿಸಿರುವ ಪ್ರಮಾಣವಚನದ ಸ್ವರೂಪಕ್ಕೆ ವಿರುದ್ಧವಾಗಿದೆ ಎಂದು ಅರ್ಜಿದಾರರು ವಾದಿಸಿದ್ದರು. ಪ್ರಮಾಣವಚನ ಅಸಿಂಧುವಾಗಿದ್ದರೂ, ಈ ಆದೇಶದಿಂದ 20 ಸದಸ್ಯರು ತಮ್ಮ ಸ್ಥಾನಗಳಿಂದ ಅನರ್ಹರಾಗುವುದಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ಇದುವರೆಗೆ ಚುನಾಯಿತ ಪ್ರತಿನಿಧಿಗಳಾಗಿ ಅವರು ಕೈಗೊಂಡ ನಿರ್ಣಯಗಳು ಮತ್ತು ನಿರ್ವಹಿಸಿದ ಕಾರ್ಯಗಳಿಗೆ ಕೇರಳ ಪೌರಾಡಳಿತ ಕಾಯ್ದೆಯಲ್ಲಿ ಕಾನೂನು ರಕ್ಷಣೆ ಮುಂದುವರಿಯಲಿದೆ.

ಬಿಜೆಪಿಯ 20 ಪಾಲಿಕೆ ಸದಸ್ಯರ ಪ್ರಮಾಣವಚನ ಅಸಿಂಧು

ಕಾಶ್ಮೀರ ಮುಂದೆಯೂ ನಮ್ಮ ಆಂತರಿಕ ವಿಚಾರ

• **ಹೊಸದಿಲ್ಲಿ**: ಕೇಂದ್ರಾಡಳಿತ ಪ್ರದೇಶ ಜಮ್ಮು ಮತ್ತು ಕಾಶ್ಮೀರ ಎಂದೆಂದಿಗೂ ಭಾರತದ ಅವಿಭಾಜ್ಯ ಅಂಗ ಮತ್ತು ಭಾರತದ ತೀರಾ ಆಂತರಿಕ ವಿಚಾರ. ಕಣಿವೆ ರಾಜ್ಯ ಹಿಂದೆಯೂ ಭಾರತದ ಅವಿಭಾಜ್ಯ ಅಂಗವಾಗಿತ್ತು ಮತ್ತು ಮುಂದೆಯೂ. ಆದರೆ ಪಾಕಿಸ್ತಾನ ವಿಶ್ವಸಂಸ್ಥೆಯಲ್ಲಿ ಪದೇ ಪದೇ ಕಾಶ್ಮೀರ ವಿಚಾರ ಪ್ರಸ್ತಾಪಿಸುವ ಮುಖೇನ ವಿಶ್ವಸಂಸ್ಥೆಯನ್ನು ರಾಜಕೀಯ ವೇದಿಕೆಯಾಗಿಸಲು ಹುನ್ನಾರ ನಡೆಸುತ್ತಿದೆ ಎಂದು ವಿಶ್ವಸಂಸ್ಥೆಗೆ ನ್ಯೂಯಾರ್ಕ್‌ನಲ್ಲಿ ಭಾರತದ ಖಾಯಂ ಪ್ರತಿನಿಧಿಯಾಗಿರುವ ಪರ್ವತನೇನಿ ಹರೀಶ್ ಪಾಕಿಸ್ತಾನವನ್ನು ತರಾಟೆಗೆತ್ತಿಕೊಂಡಿದ್ದಾರೆ.

ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಕಾಶ್ಮೀರ ವಿಚಾರವೆತ್ತುವುದು ಪಾಕ್‌ನ ಖಾಯಂ ಚಾಳಿ. ವಿಶ್ವಸಂಸ್ಥೆಯ ಕಲಾಪ ಸಂದರ್ಭದಲ್ಲೂ, ವಿಶ್ವಸಂಸ್ಥೆಗೆ ಪಾಕ್‌ನ ಖಾಯಂ ಪ್ರತಿನಿಧಿಯಾದ ಅಸೀಮ್ ಇಫ್ತಿಕಾರ್ ಅಹಮದ್ ಕಾಶ್ಮೀರ ವಿಷಯ ಪ್ರಸ್ತಾಪಿಸಿದ್ದರು. ಪಾಕ್ ಮಧ್ಯಪ್ರವೇಶಕ್ಕೆ ತೀಕ್ಷ್ಣ ಪ್ರತ್ಯುತ್ತರವಿತ್ತ ಹರೀಶ್, ಜಮ್ಮು ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆಂಬ ಸತ್ಯವನ್ನು ಪಾಕ್ ಪ್ರತಿನಿಧಿಗೆ ಸ್ಪಷ್ಟ ಮನವರಿಕೆ ಮಾಡಿದರಲ್ಲದೆ, ಈ ವಿಚಾರದಲ್ಲಿ ಪಾಕ್ ರಾಯಭಾರಿಯ ನಡವಳಿಕೆಯನ್ನು ತರಾಟೆಗೆತ್ತಿಕೊಂಡರು. ನಡೆನುಡಿಯಲ್ಲಿ ಸಮತೋಲನ ಮತ್ತು ನಿಷ್ಪಕ್ಷಪಾತಿಯಾಗಿರಬೇಕಾದ ಪಾಕ್ ಪ್ರತಿನಿಧಿ, ವೇದಿಕೆಯನ್ನು ರಾಜಕೀಯಗೊಳಿಸಲು ಯತ್ನಿಸಿರುವುದು ತೀರಾ ಘಾತಕವೆಂದು ಟೀಕಿಸಿದರು.

ಭದ್ರತಾ ಮಂಡಳಿಯ ನಿಯಮಗಳು ಮಾತ್ರ ವಿಶ್ವಸಂಸ್ಥೆ 80 ಚೌಕಟ್ಟಿನಿಂದ ಹೊರಗಿರುವುದರ ಔಚಿತ್ಯವೇನೆಂಬುದು ಭಾರತದ ಪ್ರಶ್ನೆಯಾಗಿದೆ ಎಂದು ಹರೀಶ್ ಗಮನ ಸೆಳೆದರು.

ಇರಾನ್‌ನ ಪರಮಾಣು ತಾಣಗಳ ಮೇಲ್ವಿಚಾರಣೆ

• **ಟೋಕಿಯೋ**: ಅಮೆರಿಕ ಮತ್ತು ಇರಾನ್ ನಡುವಿನ ಮಧ್ಯಂತರ ಒಪ್ಪಂದದಲ್ಲಿ ಇರಾನ್‌ನ ಪರಮಾಣು ಸಮೃದ್ಧೀಕರಣ ತಾಣಗಳಿಗೆ ತಮ್ಮ ಇನ್ಸ್‌ಪೆಕ್ಟರ್‌ಗಳು ಭೇಟಿ ನೀಡಲಿದ್ದಾರೆ ಎಂದು ಅಂತಾರಾಷ್ಟ್ರೀಯ ಅಣುಶಕ್ತಿ ಸಂಸ್ಥೆ (ಐಎಇಎ) ಮುಖ್ಯಸ್ಥ ರಾಫೆಲ್ ಮರಿಯಾನೋ ಗ್ರೋಸ್ಸಿ ಬುಧವಾರ ತಿಳಿಸಿದ್ದಾರೆ.

ಇಬ್ಬರೂ ಅಧ್ಯಕ್ಷರು ಸಹಿ ಮಾಡಿರುವ ತಿಳುವಳಿಕೆ ಪತ್ರ ಪರಮಾಣು ಸಾಮಗ್ರಿ, ಸೌಲಭ್ಯಗಳನ್ನು ಐಎಇಎ ಮೇಲ್ವಿಚಾರಣೆ ಮಾಡುತ್ತದೆ ಎಂದು ಸ್ಪಷ್ಟವಾಗಿ ಹೇಳುತ್ತದೆ. ಇರಾನ್‌ನ ಯುರೇನಿಯಂ ದಾಸ್ತಾನನ್ನು ಹೆಚ್ಚು ಸಮೃದ್ಧೀಕರಣ ಮಟ್ಟದಿಂದ ಕಡಿಮೆ ಮಾಡಲು ಈ ತಪಾಸಣೆಗಳು ಮುಖ್ಯವಾಗಿವೆ ಎಂದು ತಿಳಿಸಲಾಗಿದೆ.

ಇದಕ್ಕೆ ವ್ಯತಿರಿಕ್ತವಾಗಿ, ಯುಎಸ್ ಕಳೆದ ವರ್ಷ ಬಾಂಬ್ ದಾಳಿ ನಡೆಸಿದ ತಾಣಗಳನ್ನು ಪರಿಶೀಲಿಸಲು ಇನ್ಸ್‌ಪೆಕ್ಟರ್‌ಗಳಿಗೆ ಅನುಮತಿಯಿಲ್ಲ ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಘೇಯ್ ಮಂಗಳವಾರ ತಿಳಿಸಿದ್ದು, ಯುಎಸ್ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಹೇಳಿಕೆಯನ್ನು ನಿರಾಕರಿಸಿದ್ದಾರೆ. 2025ರಲ್ಲಿ ಇರಾನ್ ಮೇಲೆ ಇಸ್ರೇಲ್ 12 ದಿನಗಳ ಯುದ್ಧ ಪ್ರಾರಂಭಿಸಿದ ನಂತರ ಟೆಹ್ರಾನ್ ಐಎಇಎ ಇನ್ಸ್‌ಪೆಕ್ಟರ್‌ಗಳನ್ನು ಸಮೃದ್ಧೀಕರಣ ತಾಣಗಳಿಗೆ ನಿರ್ಬಂಧಿಸಿತ್ತು. ಅಮೆರಿಕ ಮತ್ತು ಇರಾನ್ ನಡುವಿನ ತಾಂತ್ರಿಕ ಮಟ್ಟದ ಮಾತುಕತೆಗಳು ಮುಂದಿನ ವಾರ ಸ್ವಿಟ್ಜರ್ಲೆಂಡ್‌ನ ಬರ್ಗೆನ್‌ಸ್ಟಾಕ್ ರೆಸಾರ್ಟ್‌ನಲ್ಲಿ ಪುನರಾರಂಭಗೊಳ್ಳಲಿವೆ. ಇದೇ ವೇಳೆ ಯುಎಸ್ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ, ಅಬುಧಾಬಿ, ಕುವೈತ್ ಮತ್ತು ಬಹ್ರೇನ್‌ಗಳಲ್ಲಿ ಸಭೆ ನಡೆಸಲು ಪರ್ಷಿಯನ್ ಕೊಲ್ಲಿಗೆ ಆಗಮಿಸಿದ್ದಾರೆ.

ಇರಾನ್: ಖಮೇನಿ ಅಂತ್ಯಕ್ರಿಯೆಗಾಗಿ ಮೋದಿಗೆ ಆಹ್ವಾನ

• **ಹೊಸದಿಲ್ಲಿ**: ಅಮೆರಿಕ-ಇಸ್ರೇಲಿ ವಾಯುದಾಳಿಯಲ್ಲಿ ಮೃತರಾದ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಸಯ್ಯದ್ ಅಲಿ ಖಮೇನಿ ಅವರ ಅಂತ್ಯಕ್ರಿಯೆಗೆ ಹಾಜರಾಗಲು ಇರಾನ್ ಅಧ್ಯಕ್ಷ ಮಸೂದ್ ಪೆಝೆಶ್ಕಿಯಾನ್ ಅವರು ಪ್ರಧಾನಿ ನರೇಂದ್ರ ಮೋದಿಯವರನ್ನು ಔಪಚಾರಿಕವಾಗಿ ಆಹ್ವಾನಿಸಿದ್ದಾರೆ. ಖಮೇನಿ ಅಂತ್ಯಕ್ರಿಯೆಯಲ್ಲಿ ಸ್ವತಃ ಪ್ರಧಾನಿ ಮೋದಿ ಭಾಗಿಯಾಗಲಿದ್ದಾರೆಯೇ ಅಥವಾ ಕೇಂದ್ರ ಸರ್ಕಾರದ ನಿಯೋಗ ಭಾಗವಹಿಸಲಿದೆಯೇ ಎಂಬ ಬಗ್ಗೆ ಇನ್ನೂ ಅಧಿಕೃತ ಮಾಹಿತಿ ಲಭ್ಯವಾಗಿಲ್ಲ. ಖಮೇನಿ ಅವರ ದೇಹವನ್ನು ಟೆಹ್ರಾನ್‌ನ ಗ್ರ್ಯಾಂಡ್ ಮೊಸಲ್ಲಾ ಸಂಕೀರ್ಣದಲ್ಲಿ ಇರಿಸುವುದರೊಂದಿಗೆ ಸರ್ಕಾರಿ ಅಂತ್ಯಕ್ರಿಯೆಯ ವಿಧಿ ವಿಧಾನ ಜು.4ರಂದು ಆರಂಭವಾಗಲಿದೆ. ಖಮೇನಿಯ ತವರು ಪಟ್ಟಣವಾದ ಮಶ್ಹಾದ್‌ನಲ್ಲಿರುವ 'ಇಮಾಮ್ ರೆಝಾ'ದಲ್ಲಿ ಜು.9ರಂದು ಅಂತಿಮ ವಿಧಿವಿಧಾನ ನಡೆಯಲಿದೆ.

ನೀರವ್ ಮೋದಿಗೆ ಯುಕೆ ಕೋರ್ಟ್ ಆದೇಶ

ಬ್ಯಾಂಕ್ ಆಫ್ ಇಂಡಿಯಾಗೆ 100 ಕೋಟಿ ರೂ. ಪಾವತಿಸಿ

• **ಲಂಡನ್**: ಉದ್ಯಮಿ ನೀರವ್ ಮೋದಿ ಬ್ಯಾಂಕ್ ಆಫ್ ಇಂಡಿಯಾಗೆ 10.7 ಮಿಲಿಯನ್ ಡಾಲರ್ (100 ಕೋಟಿ ರೂ.ಗಿಂತ ಹೆಚ್ಚು) ಪಾವತಿಸಬೇಕು ಎಂದು ಲಂಡನ್ ಸರ್ಕ್ಯೂಟ್ ಕಮರ್ಷಿಯಲ್ ಕೋರ್ಟ್ ತೀರ್ಪು ನೀಡಿದೆ.

ದುಬೈನ ಫೈರ್‌ಸ್ಟಾರ್ ಡೈಮಂಡ್ ಎಫ್‌ಜೆಡ್‌ಇ ಸಾಲಕ್ಕೆ ಮೋದಿ ನೀಡಿದ್ದ ವೈಯಕ್ತಿಕ ಗ್ಯಾರಂಟಿಯಲ್ಲಿ ಅವರು ಮರುಪಾವತಿಗೆ ವೈಯಕ್ತಿಕವಾಗಿ ಹೊಣೆಗಾರರಾಗಿದ್ದಾರೆ ಎಂದು ಕೋರ್ಟ್ ಹೇಳಿದೆ. 13,000 ಕೋಟಿ ರೂ.ಗಳ ಪಂಜಾಬ್ ನ್ಯಾಷನಲ್ ಬ್ಯಾಂಕ್ ಹಗರಣದ ಪ್ರಮುಖ ಆರೋಪಿಯಾಗಿರುವ ಮೋದಿ ಸಾಲದ ಕಾನೂನುಬದ್ಧ ಜವಾಬ್ದಾರಿ ಹೊಂದಿದ್ದಾರೆ. ಈ ಮೊತ್ತ 4.1 ಮಿಲಿಯನ್ ಡಾಲರ್ ಅಸಲು ಮತ್ತು ಬಡ್ಡಿಯನ್ನು ಒಳಗೊಂಡಿದೆ.

ಮೋದಿ ಆಗಸ್ಟ್ 3, 2012ರಂದು ವೈಯಕ್ತಿಕ ಗ್ಯಾರಂಟಿಗೆ ಸಹಿ ಹಾಕಿದ್ದರು. 2018ರಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್ ಹಗರಣ ಹೊರಬಂದ ನಂತರ ಫೈರ್‌ಸ್ಟಾರ್ ಗ್ರೂಪ್‌ನ ಸ್ಥಿತಿ ಕ್ಷೀಣಿಸಿತು. ಸಿಬಿಐ ಫೆಬ್ರವರಿ 2018ರಲ್ಲಿ ಎಫ್‌ಐಆರ್ ದಾಖಲಿಸಿದ್ದು, ವಂಚನೆಯು 2 ಬಿಲಿಯನ್ ಡಾಲರ್ ಮೊತ್ತದ ವಹಿವಾಟು ಒಳಗೊಂಡಿದೆ ಎಂದು ಆರೋಪಿಸಿದೆ. ಕಂಪನಿ ಸುಸ್ತಿಯಾದ ನಂತರ ಬ್ಯಾಂಕ್ ಆಫ್ ಇಂಡಿಯಾ ವಸೂಲಾತಿ ಪ್ರಕ್ರಿಯೆ ಆರಂಭಿಸಿತು. ಬ್ಯಾಂಕ್ ಮರುಪಾವತಿ ಕೋರಿ ಹಲವಾರು ಡಿಮ್ಯಾಂಡ್ ನೋಟಿಸ್ ನೀಡಿದರೂ ಪಾವತಿ ಬಂದಿರಲಿಲ್ಲ. ಏಪ್ರಿಲ್ 2018 ಮತ್ತು ಅಕ್ಟೋಬರ್ 2025ರ ನೋಟಿಸ್‌ಗಳು ತಮಗೆ ತಲುಪಿಲ್ಲ ಎಂದು ಮೋದಿ ವಾದಿಸಿದ್ದರು. ಆದರೆ, ನ್ಯಾಯಾಲಯ, ಮೋದಿಯವರ ಈ ವಾದಗಳನ್ನು ತಿರಸ್ಕರಿಸಿ, ನೋಟಿಸ್‌ಗಳು ಸರಿಯಾಗಿ ತಲುಪಿವೆ ಎಂದು ತೀರ್ಪು ನೀಡಿತು.

ಮುಂಬೈನಲ್ಲಿ ಮಳೆ ಅಬ್ಬರ | ಅರುಣಾಚಲ ಪ್ರದೇಶದಲ್ಲಿ ಪ್ರವಾಹ

ಜನಜೀವನ ಅಸ್ತವ್ಯಸ್ತ; ಸಂಚಾರ ವ್ಯತ್ಯಯ

• **ಮುಂಬೈ/ಇಟಾನಗರ**: ದೇಶದ ಎರಡು ಭಾಗಗಳಲ್ಲಿ ಭಾರೀ ಮಳೆ ಭಿನ್ನ ರೀತಿಯ ಸಂಕಷ್ಟವನ್ನು ಉಂಟುಮಾಡಿದೆ. ಮಹಾರಾಷ್ಟ್ರದ ಮುಂಬೈನಲ್ಲಿ ಮುಂಗಾರು ಹಂಗಾಮಿನ ಮೊದಲ ಭಾರೀ ಮಳೆ ರಸ್ತೆ ಹಾಗೂ ರೈಲು ಸಂಚಾರವನ್ನು ಅಸ್ತವ್ಯಸ್ತಗೊಳಿಸಿದರೆ, ಅರುಣಾಚಲ ಪ್ರದೇಶದಲ್ಲಿ ಪ್ರವಾಹ ಮತ್ತು ಭೂಕುಸಿತಗಳಿಂದ ಒಬ್ಬರು ಮೃತಪಟ್ಟಿದ್ದು, ನಾಲ್ವರು ನಾಪತ್ತೆಯಾಗಿದ್ದಾರೆ.



ಮುಂಬೈನಲ್ಲಿ ಕಳೆದ 24 ಗಂಟೆಗಳಲ್ಲಿ ಕೆಲವು ಪ್ರದೇಶಗಳಲ್ಲಿ 300 ಮಿ.ಮೀ.ಗಿಂತ ಹೆಚ್ಚು ಮಳೆಯಾಗಿದೆ. ಮಾಲ್ವಾನಿಯಲ್ಲಿ 340 ಮಿ.ಮೀ. ಹಾಗೂ ಪರೇಲ್‌ನಲ್ಲಿ 334 ಮಿ.ಮೀ. ಮಳೆ ದಾಖಲಾಗಿದೆ. ಅಂಧೇರಿ ಸಬ್‌ವೇ, ಹಿಂದ್ಮಾತಾ ಹಾಗೂ ಕಿಂಗ್ಸ್ ಸರ್ಕಲ್ ಪ್ರದೇಶಗಳಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ತೊಂದರೆಯಾಯಿತು. ಮಧ್ಯ ರೈಲ್ವೆಯ ಟ್ರಾನ್ಸ್-ಹಾರ್ಬರ್ ಮಾರ್ಗದಲ್ಲಿ ಹಳಿ ಕುಸಿತದಿಂದ ರೈಲು ಸೇವೆಗಳು ವ್ಯತ್ಯಯಗೊಂಡವು. ಈ ನಡುವೆ ಬಿಎಂಸಿ ಅಧಿಕಾರಿಯೊಬ್ಬರು ತೆರೆದ ಚರಂಡಿಗೆ ಬಿದ್ದ ಘಟನೆ ರಾಜಕೀಯ ಚರ್ಚೆಗೆ ಕಾರಣವಾಯಿತು. ವಿರೋಧ ಪಕ್ಷಗಳು ಬಿಎಂಸಿಯ ಕಾರ್ಯವೈಖರಿಯನ್ನು ಟೀಕಿಸಿವೆ.

ಅರುಣಾಚಲದಲ್ಲಿ ಶಿಕ್ಷಕಿ ಸಾವು: ಇತ್ತ ಅರುಣಾಚಲ ಪ್ರದೇಶದ ಕೆಯಿ ಪನ್ಯೋರ್ ಜಿಲ್ಲೆಯಲ್ಲಿ ನಿರಂತರ ಮಳೆಯಿಂದ ಏಕಾಏಕಿ ಪ್ರವಾಹ ಉಂಟಾಗಿ ಶಿಕ್ಷಕಿ ನಿರ್ಮಲಾ ಗುಪ್ತಾ ಮೃತಪಟ್ಟಿದ್ದಾರೆ. ನಾಲ್ವರು ನಾಪತ್ತೆಯಾಗಿದ್ದು, 17 ಮಂದಿ ಗಾಯಗೊಂಡಿದ್ದಾರೆ. ಕನಿಷ್ಠ 18 ಮನೆಗಳಿಗೆ ಹಾನಿಯಾಗಿದೆ. ಹಲವು ಪ್ರದೇಶಗಳಲ್ಲಿ ಭೂಕುಸಿತ ಸಂಭವಿಸಿ ರಾಷ್ಟ್ರೀಯ ಹೆದ್ದಾರಿ-13 ಸಂಪರ್ಕ ಕಡಿತಗೊಂಡಿದೆ. ರಕ್ಷಣಾ ಕಾರ್ಯಾಚರಣೆಗೆ ಎಸ್‌ಡಿಆರ್‌ಎಫ್, ಎನ್‌ಡಿಆರ್‌ಎಫ್ ಹಾಗೂ ಭಾರತೀಯ ವಾಯುಪಡೆಯ ನೆರವು ಪಡೆಯಲಾಗಿದೆ.

ಅಧಿಕಾರಿಗಳು ಜನರು ಎಚ್ಚರಿಕೆಯಿಂದ ಇರಲು ಹಾಗೂ ಅನಗತ್ಯ ಪ್ರಯಾಣವನ್ನು ತಪ್ಪಿಸಲು ಸೂಚಿಸಿದ್ದಾರೆ.

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,45,000(2,45,000) ಅಪರಂಜಿ ಚಿನ್ನ: 1,44,330(1,45,910) ಆಭರಣ ಚಿನ್ನ: 1,33,300(1,33,750) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)
ಷೇರು ಸೂಚ್ಯಂಕ ಬಿಎಸ್‌ಇ 75,318(117↑) ಎನ್‌ಎಸ್‌ಇ 23,659(41↑)
$1 = ₹96.60

ಹೊಸ ದಿಗಂತ

ಸಂಪುಟ ಶೀಘ್ರ ವಿಸ್ತರಣೆ: ಪಾಟೀಲ

• **ಕಲಬುರಗಿ:** ಕ್ಯಾಬಿನೆಟ್ ವಿಸ್ತರಣೆ ಬಗ್ಗೆ ಅಧಿಕೃತವಾಗಿ ಘೋಷಿಸಲು ನಾನೇನು ಹೈಕಮಾಂಡ್ ಅಲ್ಲ, ಆದರೆ, ಮುಖ್ಯಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು ಈ ಕುರಿತು ಹೈಕಮಾಂಡ್ ನಾಯಕರ ಜತೆ ಮಾತುಕತೆ ನಡೆಸಲಿದ್ದಾರೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ರಾಜ್ಯ ರಾಜಕಾರಣದ ಬೆಳವಣಿಗೆಗಳ ಕುರಿತು ಪ್ರತಿಕ್ರಿಯಿಸಿದ ಅವರು, ರಾಜ್ಯಸಭೆ, ವಿಧಾನ ಪರಿಷತ್ ಚುನಾವಣೆಗಳ ಪ್ರಕ್ರಿಯೆ ಮುಗಿದ ಬಳಿಕ ಈ ಕುರಿತು ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಿಎಂ ಅವರೇ ಹೇಳಿದ್ದಾರೆ. ಈಗ ಚುನಾವಣೆ ಮುಗಿದಿದೆ. ಹಾಗಾಗಿ, ಶೀಘ್ರದಲ್ಲೇ ರಾಜ್ಯ ಸಚಿವ ಸಂಪುಟ ವಿಸ್ತರಣೆ ಆಗಲಿದ್ದು, ಜಿಲ್ಲಾ ಉಸ್ತುವಾರಿ ಸಚಿವರ ನೇಮಕವೂ ಪ್ರಕಟಗೊಳ್ಳಲಿದೆ ಎಂದು ಸ್ಪಷ್ಟಪಡಿಸಿದರು.

ರಾಮ ಮಂದಿರ ಸ್ಫೋಟಕ್ಕೆ ಉಗ್ರ ಸಂಚು

• **ದಾವಣಗೆರೆ:** ಜಿಲ್ಲೆಯ ಹರಿಹರ ತಾಲೂಕು ಬನ್ನಿಕೋಡು ಗ್ರಾಮದಲ್ಲಿ ಬಂಧಿತನಾಗಿದ್ದ ಶಂಕಿತ ಉಗ್ರ ಸೊಹೇಲ್, ತಾನು ಅಯೋಧ್ಯೆ ರಾಮ ಮಂದಿರವನ್ನು ಬಾಂಬ್ ಇಟ್ಟು ಸ್ಫೋಟಿಸಲು ಬಯಸುವುದೂ ಸೇರಿದಂತೆ ದೇಶದ ರಕ್ಷಣೆಗೆ ಧಕ್ಕೆ ತರುವಂತಹ ಆಡಿಯೋ, ಸಂದೇಶಗಳನ್ನು ಪಾಕಿಸ್ತಾನ ಮೂಲದ ರಾಜಾ ಎಂಬ ವ್ಯಕ್ತಿಯೊಂದಿಗೆ ವಿನಿಮಯ ಮಾಡಿಕೊಂಡಿದ್ದ ಸಂಗತಿ ಹೊರ ಬಿದ್ದಿದೆ. ಉತ್ತರ ಪ್ರದೇಶದ ಸಹರಾನ್‌ಪುರ ಜಿಲ್ಲೆ ಲಖ್ನೋತಿ ಗ್ರಾಮದವನಾದ ಶಂಕಿತ ಉಗ್ರ ಸೊಹೇಲ್(20 ವರ್ಷ) ಮೊಬೈಲ್ ಜಾಡು ಹಿಡಿದು ಹೋದ ತನಿಖಾಧಿಕಾರಿ, ಪೊಲೀಸ್ ಅಧಿಕಾರಿಗಳು ಬೆಚ್ಚಿ ಬೀಳುವಂತಹ ಆಘಾತಕಾರಿ ಹಿಂದಿ–ಉರ್ದು ಮಿಶ್ರಿತ ಆಡಿಯೋ, ಮೆಸೇಜ್, ಕೈಗಳಲ್ಲಿ ಶಸ್ತ್ರಾಸ್ತ್ರಗಳನ್ನು ಹಿಡಿದ ಫೋಟೋ, ಉಗ್ರರನ್ನು ಹೋಲುವ ಚಿತ್ರಗಳು ಹಾಗೂ ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಹದಗೆಡಿಸುವ, ಕೋಮು ಸೌಹಾರ್ದಕ್ಕೆ ಧಕ್ಕೆ ತರುವಂತಹ, ಭಯೋತ್ಪಾದನಾ ಕೃತ್ಯ ನಡೆಸಲು ಸಂಚು ರೂಪಿಸುವಂತಹ ವಿಚಾರ ಹೊಂದಿದ್ದ ಬಗ್ಗೆ ಸುಳಿವು ಸಿಕ್ಕಿದೆ ಎನ್ನಲಾಗಿದೆ.

ಸಿಎಂಗೆ ಅಭಿನಂದನೆ

ಸಂಸದ ಬಿ. ವೈ. ರಾಘವೇಂದ್ರ ನೇತೃತ್ವದ ಶಿವಮೊಗ್ಗ ಜನಪ್ರತಿನಿಧಿಗಳು ಹಾಗೂ ವಕೀಲರ ನಿಯೋಗವು ಬುಧವಾರ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಭೇಟಿ ಮಾಡಿ ಅಭಿನಂದಿಸಿ, ಸಂಚಾರಿ ಪೀಠ ಸ್ಥಾಪನೆ ಕುರಿತಂತೆ ಮನವಿ ಸಲ್ಲಿಸಿತು. ಶಾಸಕರಾದ ಚನ್ನಬಸಪ್ಪ, ಬೇಳೂರು ಗೋಪಾಲಕೃಷ್ಣ ಧನರಾಜ್ ಸರ್ಜಿ,ಡಿ.ಎಸ್. ಅರುಣ್, ಶಿವಮೊಗ್ಗ ವಕೀಲರ ಸಂಘದ ಅಧ್ಯಕ್ಷ ರಾಘವೇಂದ್ರ ಸ್ವಾಮಿ, ಬಸಪ್ಪಗೌಡ ಮತ್ತಿತರರು ಜತೆಗಿದ್ದರು.

ವಾರ್ತಾ ಆಯುಕ್ತರಾಗಿ ಅನುಚೇತ್

• **ಬೆಂಗಳೂರು:** ಹಿರಿಯ ಐಪಿಎಸ್ ಅಧಿಕಾರಿ ಎಂ.ಎನ್.ಅನುಚೇತ್ ಅವರನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾಗಿ ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

2009ನೇ ಬ್ಯಾಚ್‌ನ ಕರ್ನಾಟಕ ಕೇಡರ್‌ನ ಐಪಿಎಸ್ ಅಧಿಕಾರಿಯಾಗಿರುವ ಅನುಚೇತ್ ಅವರು ಇದುವರೆಗೆ ಪೊಲೀಸ್ ನೇಮಕಾತಿ ವಿಭಾಗದ ಡಿಐಜಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಇದೀಗ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದ ಹೇಮಂತ್ ಎಂ. ನಿಂಬಾಳ್ಕರ್ ಅವರ ಸ್ಥಾನಕ್ಕೆ ಅವರನ್ನು ವರ್ಗಾಯಿಸಿ ನಿಯೋಜಿಸಲಾಗಿದೆ. ಇದರೊಂದಿಗೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತ ಹುದ್ದೆಯ ಹೆಚ್ಚುವರಿ ಜವಾಬ್ದಾರಿಯನ್ನು ಅನುಚೇತ್ ಅವರಿಗೆ ವಹಿಸಲಾಗಿದೆ. ಈ ಹುದ್ದೆಯನ್ನು ನಿರ್ವಹಿಸುತ್ತಿದ್ದ ಕುಮಾರ್ ಟಿಎಚ್‌ಎಂ ಅವರ ವರ್ಗಾವಣೆಯ ಹಿನ್ನೆಲೆಯಲ್ಲಿ ಈ ಹೆಚ್ಚುವರಿ ಹೊಣೆಗಾರಿಕೆ ನೀಡಲಾಗಿದೆ.

ಹಾವು ಕಚ್ಚಿ ಬಾಲಕ ಸಾವು



• **ಬನವಾಸಿ:** ವಿಷಪೂರಿತ ಹಾವು ಕಚ್ಚಿ 12 ವರ್ಷದ ವಿದ್ಯಾರ್ಥಿಯೊಬ್ಬ ಮೃತಪಟ್ಟ ಘಟನೆ ಸಮೀಪದ ಸಣ್ಣಹಳ್ಳಿ ಗ್ರಾಮದಲ್ಲಿ ಬುಧವಾರ ಬೆಳಗ್ಗೆ ನಡೆದಿದೆ. 6ನೇ ತರಗತಿ ವ್ಯಾಸಂಗ ಮಾಡುತ್ತಿದ್ದ ಮಿಥುನ್ ಪುಟ್ಟಪ್ಪ ನಾಯ್ಕ (12) ಮೃತ ಬಾಲಕ. ಆತನ ಸಹೋದರಿ ದೀಕ್ಷಾಳಿಗೂ ಹಾವು ಕಚ್ಚಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಆಕೆಯ ಆರೋಗ್ಯ ಸ್ಥಿರವಾಗಿದೆ ಎಂದು ತಿಳಿದುಬಂದಿದೆ. ಮೃತ ಬಾಲಕ ಮಿಥುನ್ ಮತ್ತು ಸಹೋದರಿ ದೀಕ್ಷಾ ಮಲಗಿದ್ದ ವೇಳೆ ಹಾವು ಕಡಿದಿದ್ದು, ಇಬ್ಬರೂ ಏಕಾಏಕಿ ವಾಂತಿ ಮಾಡ ತೊಡಗಿದ್ದಾರೆ. ಇದನ್ನು ಗಮನಿಸಿದ ಪೋಷಕರು ಮಕ್ಕಳ ಆರೋಗ್ಯದಲ್ಲಿ ಏರು ಪೇರಾಗಿರುವುದನ್ನು ಗಮನಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ವೇಳೆಗಾಗಲೇ ಬಾಲಕ ಮೃತಪಟ್ಟಿದ್ದಾನೆ.

ಕಿರುಸುದ್ದಿ

ಪಕ್ಷದ ಸಿದ್ಧಾಂತ ವಿರುದ್ಧ ನಡೆದರೆ ಕ್ರಮ: ಹರಿಪ್ರಸಾದ್

• **ಹುಬ್ಬಳ್ಳಿ:** ಕಾಂಗ್ರೆಸ್ ಪಕ್ಷ ಸಿದ್ಧಾಂತಕ್ಕೆ ಬದ್ಧವಾಗಿದೆ. ಅದಕ್ಕೆ ವಿರುದ್ಧವಾಗಿದ್ದರೆ ನಾವು ಹೋರಾಟ ಮಾಡುತ್ತೇವೆ. ಪಕ್ಷದ ಸಿದ್ಧಾಂತ ವಿರುದ್ಧ ನಡೆದುಕೊಳ್ಳುವವರು ಯಾರೇ ಇದ್ದರೂ ಅವರಿಗೆ ಪಕ್ಷದಲ್ಲಿ ಅವಕಾಶವಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ ಹೇಳಿದರು. ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಯಾವತ್ತು ಬಿಜೆಪಿ ಹಾಗೂ ಆರ್‌ಎಸ್‌ಎಸ್ ಸಿದ್ಧಾಂತ ಒಪ್ಪಲ್ಲ, ದೇಶದ ತ್ರಿವರ್ಣ ಧ್ವಜ, ಜಾತ್ಯಾತೀತ ಹಾಗೂ ಬಹುತ್ವದ ರಾಷ್ಟ್ರ ವಿರುದ್ಧವಾಗಿ ಅವರು ಇದ್ದಾರೆ. ಆರ್‌ಎಸ್‌ಎಸ್ ಕೋಟ್ಯಾಂತರ ರೂಪಾಯಿ ಸಂಗ್ರಹ ಮಾಡುತ್ತದೆ. ಭಾರತ ಸಂವಿಧಾನದಲ್ಲಿ ಯಾವುದೇ ಸಂಘ, ಸಂಸ್ಥೆಯಾದರೂ ನೋಂದಣಿ ಮಾಡಿಕೊಳ್ಳಬೇಕು. ಆರ್‌ಎಸ್‌ಎಸ್ ಅದಕ್ಕೆ ಹೊರತಾಗಿಲ್ಲ ಎಂದರು. ಬಿಜೆಪಿ ಅವರು 2014ರಲ್ಲಿ ಅಧಿಕಾರಕ್ಕೆ ಬಂದಾಗ ಅಚ್ಛೆ ದಿನ್ ಎಂದು ಹೇಳಿದ್ದರೂ, ಈಗ ರಾಹು ಕಾಲ ದೇಶದಲ್ಲಿ ಬಂದಿದೆ. ಕೇಂದ್ರ ಸರ್ಕಾರದ ಯೋಜನೆಗಳು ಒಂದು ವರ್ಗಕ್ಕೆ ಮಾತ್ರ ಸೀಮಿತವಾಗಿವೆ ಎಂದು ಕಿಡಿಕಾರಿದರು.

ಪ್ರತಿ ಎಕರೆಗೆ 2.70 ಕೋಟಿ ರೂ. ಪರಿಹಾರ ನಿಗದಿ

• **ಬೆಂಗಳೂರು:** ದೇವನಹಳ್ಳಿ ತಾಲೂಕು ಚನ್ನರಾಯಪಟ್ಟಣ ಹೋಬಳಿಯ ಗೋಕರೆಬಚ್ಚೇನಹಳ್ಳಿ ಮತ್ತು ಹ್ಯಾಡಾಳ ಗ್ರಾಮದಲ್ಲಿ ಕೈಗಾರಿಕಾ ಉದ್ದೇಶಕ್ಕೆ ರೈತರು ಸ್ವಯಂಪ್ರೇರಿತವಾಗಿ ಬಿಟ್ಟುಕೊಡಲು ಒಪ್ಪಿರುವ 120 ಎಕರೆ ಜಮೀನಿಗೆ ಪ್ರತಿ ಎಕರೆಗೆ 2.70 ಕೋಟಿ ರೂ. ಪರಿಹಾರ ಧನದರ ನಿರ್ಧಾರಣಾ ಸಲಹಾ ಸಮಿತಿ ನಿಗದಿಪಡಿಸಿ ಕೆಐಎಡಿಬಿಗೆ ಶಿಫಾರಸು ಮಾಡಿದೆ. ಕೆಐಎಡಿಬಿ ವಿಶೇಷ ಜಿಲ್ಲಾಧಿಕಾರಿ ಎ.ಎನ್.ರಘುನಂದನ್ ಅಧ್ಯಕ್ಷತೆ ಬುಧವಾರ ನಡೆದ ಅಧಿಕಾರಿಗಳು ಹಾಗೂ ಭೂಮಾಲೀಕರ ಜಂಟಿ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಈ ತೀರ್ಮಾನವನ್ನು ಕೆಐಎಡಿಬಿ ಮಂಡಳಿಯ ಅನುಮೋದನೆಗಾಗಿ ಕಳುಹಿಸಿಕೊಡಲಾಗುವುದು. ಪರಿಹಾರವನ್ನು ಹಣದ ರೂಪದಲ್ಲಿ ತೆಗೆದುಕೊಳ್ಳಲು ಇಷ್ಟವಿಲ್ಲದಿದ್ದರೆ ಪ್ರತೀ ಎಕರೆ ಕೃಷಿ ಜಮೀನಿಗೆ ಅಭಿವೃದ್ಧಿ ಪಡಿಸಿದ ಕೈಗಾರಿಕಾ ಬಡಾವಣೆಯಲ್ಲಿ 10,781 ಚದರ ಅಡಿ ಜಾಗವನ್ನು ಪಡೆದುಕೊಳ್ಳುವುದಕ್ಕೂ ಅವಕಾಶ ನೀಡಲಾಗಿದೆ ಎಂದು ರಘುನಂದನ್ ತಿಳಿಸಿದ್ದಾರೆ. ಕೆಐಎಡಿಬಿ ಭೂಸ್ವಾಧೀನಾಧಿಕಾರಿ ಸೂರಜ್ ಸೇರಿದಂತೆ ಇತರ ಹಿರಿಯ ಅಧಿಕಾರಿಗಳು ಇದ್ದರು.

ಕಾರ್ಮಿಕ ಆತ್ಮಹತ್ಯೆ: ಕಲ್ಲು ತೂರಾಟ

• **ಬೆಳಗಾವಿ:** ಇಲ್ಲಿನ ಪ್ರಸಿದ್ಧ ಹಿಂಡಾಲ್ಕೋ ಕಂಪನಿ ಆವರಣದಲ್ಲಿ ಯುವ ಕಾರ್ಮಿಕನೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬುಧವಾರ ಬೆಳಕಿಗೆ ಬಂದಿದ್ದು, ಈ ಘಟನೆ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ಸಾರ್ವಜನಿಕರು ಕಂಪನಿ ಕಚೇರಿ ಮೇಲೆ ಕಲ್ಲು ತೂರಾಟ ನಡೆಸಿದ ಪರಿಣಾಮ ಪ್ರದೇಶದಲ್ಲಿ ತೀವ್ರ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದೆ. ಮೃತ ಯುವಕನನ್ನು ಶಂಕರ ತಳವಾರ (24)ಎಂದು ಗುರುತಿಸಲಾಗಿದೆ. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಶಂಕರ್, ಕೆಲ ದಿನಗಳಿಂದ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದು, ಕೊನೆಗೆ ಆತ್ಮಹತ್ಯೆಗೆ ಶರಣಾಗಿದ್ದಾನೆ ಎನ್ನಲಾಗಿದೆ.

ವಾಟ್ಸ್ಆ್ಯಪ್ ಸ್ಟೇಟಸ್‌ನಲ್ಲಿ ಡೆತ್‌ನೋಟ್: ಆತ್ಮಹತ್ಯೆಗೂ ಮುನ್ನ ಶಂಕರ ತನ್ನ ವಾಟ್ಸ್ಆ್ಯಪ್ ಸ್ಟೇಟಸ್‌ನಲ್ಲಿ ಡೆತ್ ನೋಟ್ ಮಾದರಿಯ ಸಂದೇಶವೊಂದನ್ನು ಪ್ರಕಟಿಸಿದ್ದಾನೆ ಎಂದು ತಿಳಿದುಬಂದಿದೆ. ಆ ಸಂದೇಶದಲ್ಲಿ ಕಂಪನಿಯಲ್ಲಿ ಹಳೆಯ ಕಾರ್ಮಿಕರನ್ನು ತೆಗೆದು ಹೊಸ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದ್ದು, ಗುತ್ತಿಗೆದಾರ ಪೈಯಾಲ್ ನಂದಿ ಅವರಿಂದ ತನಗೆ ತೀವ್ರ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿದ್ದಾನೆ ಎನ್ನಲಾಗಿದೆ.

ಇಂದಿನ ಕಾರ್ಯಕ್ರಮದಲ್ಲಿ 3 ರಾಜ್ಯದ ಸಿಎಂ, ಕೇಂದ್ರ ಸಚಿವರು ಭಾಗಿ

ಟಿಬಿ ಡ್ಯಾಂ ಗೇಟ್‌ಗೆ ಚಾಲನೆ

• **ಕೊಪ್ಪಳ:** ಕಲ್ಯಾಣ ಕರ್ನಾಟಕದ ಜೀವನಾಡಿ ತುಂಗಭದ್ರಾ ಜಲಾಶಯದ 33 ಕ್ರಸ್ಟ್‌ಗೇಟ್ ಲೋಕಾರ್ಪಣೆ ಗುರುವಾರ ಜರುಗಲಿದ್ದು, ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯದ ಮುಖ್ಯಮಂತ್ರಿಗಳು ಭಾಗವಹಿಸಲಿದ್ದಾರೆ.

ನೂತನವಾಗಿ ಅಳವಡಿಸಿದ 33 ಸ್ಪಿಲ್‌ವೇ ಗೇಟುಗಳ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಗುರುವಾರ ಬೆಳಗ್ಗೆ 11 ಗಂಟೆಗೆ ನಡೆಯಲಿದ್ದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಸ್ಪಿಲ್ ವೇ ಗೇಟುಗಳನ್ನು ಲೋಕಾರ್ಪಣೆಗೊಳಿಸುವರು.

ಜಲಸಂಪನ್ಮೂಲ ಇಲಾಖೆ ವತಿಯಿಂದ ಕೊಪ್ಪಳ ಜಿಲ್ಲೆಯ ಮುನಿರಾಬಾದ್ ಸರ್ಕಾರಿ ಹೈಸ್ಕೂಲ್ ಗ್ರೌಂಡ್‌ನಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಕೇಂದ್ರ ಜಲಶಕ್ತಿ ಸಚಿವರಾದ ಸಿ.ಆರ್.ಪಾಟೀಲ, ಆಂಧ್ರಪ್ರದೇಶ ಮುಖ್ಯಮಂತ್ರಿಗಳಾದ ಎನ್.ಚಂದ್ರಬಾಬು ನಾಯ್ಡು, ತೆಲಂಗಾಣ ಮುಖ್ಯಮಂತ್ರಿಗಳಾದ ಎ.ರೇವಂತ್ ರೆಡ್ಡಿ, ಕರ್ನಾಟಕ ಉಪ ಮುಖ್ಯಮಂತ್ರಿಗಳಾದ ಡಾ.ಜಿ.ಪರಮೇಶ್ವರ್, ಆಂಧ್ರಪ್ರದೇಶ ಉಪ ಮುಖ್ಯಮಂತ್ರಿಗಳಾದ ಕೆ.ಪವನ್ ಕಲ್ಯಾಣ್, ತೆಲಂಗಾಣ ಉಪ ಮುಖ್ಯಮಂತ್ರಿಗಳಾದ ಮಲ್ಲು ಭಟ್ಟಿ ವಿಕ್ರಮಾರ್ಕ, ಭಾರತ ಸರ್ಕಾರದ ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆಗಳ ರಾಜ್ಯ ಸಚಿವರಾದ ವಿ.ಸೋಮಣ್ಣ, ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವರಾದ ರಾಜ ಭೂಷಣ್ ಚೌಧರಿ ಭಾಗವಹಿಸಲಿದ್ದಾರೆ.

ಕಾರ್ಯಕ್ರಮವು ಶಾಂತಿಯುತವಾಗಿ ನಡೆಯುವ ದಿಶೆಯಲ್ಲಿ ಭದ್ರತೆಗಾಗಿ ಅಗತ್ಯ ಸಂಖ್ಯೆಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಆರು ಜನ ಎಸ್‌ಪಿ, 25 ಜನ ಡಿವೈಎಸ್ಪಿ, 25ಕ್ಕೂ ಹೆಚ್ಚು ಜನ ಸಿಪಿಐ ಮತ್ತು ಪಿಎಸ್‌ಐ ಹಾಗೂ ನೂರಾರು ಸಂಖ್ಯೆಯಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಕೆಎಸ್‌ಆರ್‌ಪಿ ಸೇರಿದಂತೆ ವಿವಿಧ ಪೊಲೀಸ್ ತುಕಡಿಗಳ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ. 150 ಬಸ್‌ಗಳಿಗೆ ಹಾಗೂ 250ಕ್ಕೂ ಹೆಚ್ಚು ಬೇರೆ ಬೇರೆ ವಾಹನಗಳಿಗೆ ಬೇರೆ ಬೇರೆ ಕಡೆಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.

ನವಲಿ ಸಮಾನಾಂತರ ಜಲಾಶಯ ಚರ್ಚೆ ಸಾಧ್ಯತೆ

ಇದೇ ಮೊದಲ ಬಾರಿಗೆ ಈ ಮೂರು ಮುಖ್ಯಮಂತ್ರಿಗಳು ಒಂದೆಡೆ ಸೇರಲಿದ್ದು, ನವಲಿ ಸಮಾನಾಂತರ ಜಲಾಶಯ ನಿರ್ಮಾಣ ವಿಷಯ ಸೇರಿ ಹಲವು ನೀರಾವರಿ ಸಮಸ್ಯೆಗಳಿಗೆ ಪರಿಹಾರ ಸಿಗುವ ಸಾಧ್ಯತೆ ಇದೆ. ತುಂಗಭದ್ರಾ ಜಲಾಶಯದಲ್ಲಿ 32 ಟಿಎಂಸಿಯಷ್ಟು ಹೂಳು ತುಂಬಿದ್ದು, ಹೂಳೆತ್ತುವ ಬಗ್ಗೆಯೂ ಕೂಡ ಚರ್ಚೆಯಾಗಲಿದೆ.

ಶಾಲಾ -ಕಾಲೇಜಿಗೆ ರಜೆ

ಮುನಿರಾಬಾದ್ ಸರ್ಕಾರಿ ಶಾಲಾ ಮೈದಾನದಲ್ಲಿ ಕಾರ್ಯಕ್ರಮ ಜರುಗಲಿದ್ದು, ಸರ್ಕಾರಿ ಶಾಲಾ, ಕಾಲೇಜಿಗೆ ರಜೆ ಘೋಷಿಸಲಾಗಿದೆ. ಇನ್ನುಳಿದಂತೆ ಮುನಿರಾಬಾದ್‌ನಲ್ಲಿ ಇರುವ ಇತರೆ ಶಾಲೆಗಳಿಗೂ ರಜೆ ಘೋಷಣೆಯಾಗಿದೆ. ಕಾರ್ಯಕ್ರಮಕ್ಕೆ ಹಲವು ಗಣ್ಯರು ಆಗಮಿಸುವುದರಿಂದಾಗಿ ಬಿಗಿ ಪೊಲೀಸ್ ಭದ್ರತೆ ಒದಗಿಸಲಾಗಿದೆ.

ಖಾತೆಯೇ ಇಲ್ಲದೆ ಕೋಟ್ಯಂತರ ಪಾವತಿ: ಆರೋಪ

ಗೃಹಲಕ್ಷ್ಮಿ ಹೆಸರಲ್ಲಿ ಲೂಟಿ: ಬಿವೈವಿ

• **ಬೆಂಗಳೂರು:** ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿ ಗೃಹಲಕ್ಷ್ಮಿ ಯೋಜನೆ ಈಗ ರಾಜ್ಯದ ಇತಿಹಾಸದಲ್ಲೇ ಅತ್ಯಂತ ದೊಡ್ಡ ಹಗರಣವಾಗಿ ಮಾರ್ಪಟ್ಟಿದೆ. ಬ್ಯಾಂಕ್ ಖಾತೆಯೇ ಇಲ್ಲದ 23,262 ಜನರಿಗೆ ಬರೋಬ್ಬರಿ 46.52 ಕೋಟಿ ರೂ. ಪಾವತಿಯಾಗಿರುವುದು ಮತ್ತು 19,020 ಜನರಿಗೆ ಒಂದೇ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆಯಾಗಿರುವುದನ್ನು ಸ್ವತಃ ಸಿಎಜಿ ವರದಿಯೇ ಬಯಲಿಗೆಳೆದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, 10 ಲಕ್ಷಕ್ಕೂ ಅಧಿಕ ಫಲಾನುಭವಿಗಳ ಖಾತೆಗಳು ನಿರಂತರವಾಗಿ ಬದಲಾಗುತ್ತಿರುವುದು ರಾಜ್ಯದ ಬಡ ಮಹಿಳೆಯರ ಹೆಸರಿನಲ್ಲಿ ನಡೆಯುತ್ತಿರುವ ಬೃಹತ್ ಲೂಟಿಗೆ ಸಾಕ್ಷಿಯಲ್ಲವೇ ಮುಖ್ಯಮಂತ್ರಿಗಳೇ ಎಂದು ಪ್ರಶ್ನಿಸಿದ್ದಾರೆ.

ಸ್ವತಃ ಸಿಎಜಿ ಕೇಳಿದರೂ ಬ್ಯಾಂಕ್ ಖಾತೆಗಳ ವಿವರ ನೀಡದೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮುಚ್ಚಿಡುತ್ತಿರುವುದಕ್ಕೆ ಕಾರಣವಾದರೂ ಏನು? ಈ ಹಗರಣದ ಬೇರುಗಳು ಈ ಕಾಂಗ್ರೆಸ್ ಸರ್ಕಾರದಲ್ಲಿ ಬಹಳ ಗಾಢವಾಗಿ ಹರಡಿಕೊಂಡಿರುವ ಸಂಶಯ ಮತ್ತಷ್ಟು ಬಲಗೊಳ್ಳುತ್ತದೆ ಎಂದು ಹೇಳಿದರು.

ಕಾಂಗ್ರೆಸ್ ಸರ್ಕಾರ ಇನ್ನೂ ಉತ್ತರ ನೀಡಿಲ್ಲ, ಬಡತಾಯಂದಿರಿಗೆ ನೀಡಬೇಕಾದ ಈ 5,000 ಕೋಟಿ ರೂ. ಎಲ್ಲಿ ಹೋಯಿತು? ಯಾರ ಜೇಬು ಸೇರಿತು ಎಂದು ಈ ಸರ್ಕಾರ ಉತ್ತರಿಸದ ಹಿನ್ನೆಲೆಯಲ್ಲಿ ಹೈಕೋರ್ಟ್ ಆಕ್ಷೇಪಿಸಿ ನೋಟಿಸ್ ಜಾರಿ ಮಾಡಿದೆ. ಹಗರಣಗಳ ಸರಮಾಲೆಯಾಗಿರುವ ಈ ಭ್ರಷ್ಟ ಕಾಂಗ್ರೆಸ್ ಸರ್ಕಾರಕ್ಕೆ ಆಡಳಿತ ನಡೆಸುವ ಯಾವ ನೈತಿಕತೆಯೂ ಉಳಿದಿಲ್ಲ ಮುಖ್ಯವಾಗಿ ಎಂದು ವಿಜಯೇಂದ್ರ ಟೀಕಿಸಿದ್ದಾರೆ.

ಭ್ರಷ್ಟಾಚಾರದ ಬಗ್ಗೆ ತನಿಖೆಯಾಗಲಿ

ಬಡವರ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ಲೂಟಿ ಹೊಡೆದಿರುವ ಗಂಭೀರ ಭ್ರಷ್ಟಾಚಾರದ ಬಗ್ಗೆ ತಕ್ಷಣ ಅತ್ಯಂತ ಪಾರದರ್ಶಕವಾಗಿ, ಉನ್ನತ ಮಟ್ಟದ ತನಿಖೆಯಾಗಬೇಕು ಮತ್ತು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಲೇಬೇಕು ಎಂದು ಒತ್ತಾಯಿಸಿದ್ದಾರೆ.

ಮಾವು ಬೆಳೆಗಾರರಿಗೆ ನೆರವು: ಚೌಹಾಣ್

• **ಬೆಂಗಳೂರು:** ಹವಾಮಾನ ವೈಪರೀತ್ಯ ಹಾಗೂ ಬೆಲೆ ಕುಸಿತದಿಂದ ತೀವ್ರ ಸಂಕಷ್ಟಕ್ಕೆ ಗುರಿಯಾಗಿರುವ ರಾಜ್ಯದ ಮಾವು ಬೆಳೆಗಾರರಿಗೆ ಅನುಕೂಲವಾಗುವ ನಿರ್ಧಾರ ಕೈಗೊಳ್ಳುವುದಾಗಿ ಕೇಂದ್ರ ಕೃಷಿ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಭರವಸೆ ನೀಡಿದ್ದಾರೆ.

ದಿಲ್ಲಿಯಲ್ಲಿ ಬುಧವಾರ ಸಂಜೆ ಚೌಹಾಣ್ ಅವರ ನಿವಾಸಕ್ಕೆ ತೆರಳಿ ಮಾವು ಬೆಳೆಗಾರರ ಸಂಕಷ್ಟದ ಬಗ್ಗೆ ಚರ್ಚೆ ನಡೆಸಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಹಾವೇರಿ ಸೇರಿದಂತೆ ರಾಜ್ಯದ ನಾನಾ ಜಿಲ್ಲೆಗಳಲ್ಲಿ ಮಾವು ಬೆಳೆಗಾರರು ಎದುರಿಸುತ್ತಿರುವ ಸಂಕಷ್ಟದ ಬಗ್ಗೆ ಅವರು ಕೃಷಿ ಸಚಿವರಿಗೆ ವಿವರಿಸಿದರು. ಕರ್ನಾಟಕವು ಅತಿ ಹೆಚ್ಚು ಮಾವು ಬೆಳೆಯುವ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯದಲ್ಲಿ ಸುಮಾರು 1.45 ಲಕ್ಷ ಹೆಕ್ಟೇರ್‌ಗಳಲ್ಲಿ ಮಾವು ಕೃಷಿ ಮಾಡಲಾಗುತ್ತಿದ್ದು, ಪ್ರಸಕ್ತ ಋತುವಿನಲ್ಲಿ ಸುಮಾರು 10 ಲಕ್ಷ ಮೆಟ್ರಿಕ್ ಟನ್ ಮಾವು ಬೆಳೆಯಲಾಗಿದೆ. ಆದರೆ, ಬೆಲೆ ಕುಸಿತ ಹಾಗೂ ಪ್ರತಿಕೂಲಕರ ಹವಾಮಾನದಿಂದ ರೈತರು ಸಂಕಷ್ಟಕ್ಕೆ ತುತ್ತಾಗಿದ್ದಾರೆ ಎಂದು ಸಚಿವರು ಕೃಷಿ ಸಚಿವರ ಗಮನ ಸೆಳೆದರು.

> ಕೃಷಿ ಸಚಿವರ ಸಕಾರಾತ್ಮಕ ಸ್ಪಂದನೆಯಿಂದ ನನಗೆ ಬಹಳ ಸಂತೋಷವಾಗಿದೆ. ಅತ್ಯಂತ ಭರಿತವಾಗಿ ರೈತರ ಪರವಾಗಿ ನಿರ್ಧಾರ ಕೈಗೊಳ್ಳುವುದಾಗಿ ಹಾಗೂ ಬೆಂಬಲ ಬೆಲೆ ಘೋಷಣೆ ಮಾಡುವುದಾಗಿ ಭರವಸೆ ನೀಡಿದ್ದು ಸ್ವಾಗತಾರ್ಹ.
>
> ■ **ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

ಬಿಡದಿಯಲ್ಲಿ ಜನರನ್ನು ಎದುರಿಸಲು ಭಯವೇ?: ರವಿ

• **ಚಿಕ್ಕಮಗಳೂರು:** ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿದಂತೆ ಸಿಎಂಗೆ ಬಿಡದಿಯಲ್ಲೇ ಜನರನ್ನು ಎದುರಿಸಲು ಭಯವೇ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಪ್ರಶ್ನಿಸಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿ, ಒಬ್ಬ ಸಿಎಂ ಜನರಿಂದ ದೂರ ಉಳಿಯುತ್ತೇನೆ ಎಂದರೆ ಏನರ್ಥ, ಡಿಕೆಶಿ ಅವರಿಗೆ ಜನರ ಭಯವೇ, ಮತ್ತೇಕೆ ಬಿಡದಿಯ ರೈತರಿಂದ ಅವರು ದೂರವಿದ್ದಾರೆ ಎಂದಿದ್ದಾರೆ. ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ರೈತ ಹೋರಾಟಕ್ಕೆ ನಾವು ರಾಜಕೀಯ ಬೆಂಬಲ ನೀಡುತ್ತಿದ್ದೇವೆ. ಇದು ರಾಜಕೀಯ ಹೋರಾಟವಾಗಿ ಪರಿವರ್ತನೆಗೊಂಡರೆ, ಆಗ ಮೂಲ ಹೋರಾಟಗಾರರು, ಮೂಲ ಸಮಸ್ಯೆ ಬದಿಗೆ ಸರಿಯುವಂತಾಗ ಬಹುದು. ಆ ರೀತಿ ಆಗ ಬಾರದು ಎನ್ನುವ ಕಾರಣದಿಂದ ರೈತರ ಹೋರಾಟಕ್ಕೆ ರಾಜಕೀಯ ಬೆಂಬಲ ನೀಡುತ್ತಿದ್ದೇವೆ ಎಂದರು.

ಇ–ಸ್ವತ್ತು ಕುರಿತ ಸಭೆಯಲ್ಲಿ ಉನ್ನತಾಧಿಕಾರಿಗಳಿಗೆ ಖಂಡ್ರೆ ಸೂಚನೆ

ದಾಖಲೆರಹಿತ ಮನೆಗೆ ನಿಯಮ ಸರಳೀಕರಣ

• **ಬೆಂಗಳೂರು:** ಗ್ರಾಮಠಾಣಾ ವ್ಯಾಪ್ತಿಯಲ್ಲಿ ದಾಖಲೆ ಇಲ್ಲದ ಹಳೆಯ ಮನೆಗಳಿಗೆ ಇ–ಸ್ವತ್ತು ನೀಡುವ ಸಂಬಂಧ ನಿಯಮಗಳಿಗೆ ತಿದ್ದುಪಡಿ ಮಾಡಲು ಸೂಚನೆ ನೀಡಲಾಗಿದೆ ಎಂದು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಬುಧವಾರ ಇಲಾಖೆಯ ಉನ್ನತಾಧಿಕಾರಿಗಳೊಂದಿಗೆ ಇ–ಸ್ವತ್ತು ಕುರಿತಂತೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ರಾಜ್ಯದಲ್ಲಿ ಸುಮಾರು 65 ಲಕ್ಷ ಆಸ್ತಿಗಳು ಗ್ರಾಮಠಾಣಾ ವ್ಯಾಪ್ತಿಯಲ್ಲಿ ಬರುತ್ತವೆ. ಇದು ಅವರಿಗೆ ಪೂರ್ವಜರಿಂದ ಬಂದ ಬಳುವಳಿಯಾಗಿದ್ದು, ಕೆಲವರ ಬಳಿ ತಮ್ಮ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆ ಇಲ್ಲ. ಹೀಗಾಗಿ ಒಂದು ಬಾರಿಯ ಕ್ರಮವಾಗಿ ನಿಯಮಾವಳಿ ಸರಳೀಕರಣ ಮಾಡಿ, ಸಾರ್ವಜನಿಕರ ಆಕ್ಷೇಪಣೆ ಕರೆದು 100 ದಿನಗಳ ಒಳಗಾಗಿ ಗ್ರಾಮಠಾಣಾ ಆಸ್ತಿಗಳಿಗೆ ಸಮರೋಪಾದಿಯಲ್ಲಿ ಇ–ಖಾತಾ ವಿತರಿಸಲು ಕ್ರಮ ಜರುಗಿಸಲು ಸೂಚಿಸಲಾಗಿದೆ ಎಂದರು.

ಹೊಸದಾಗಿ 11ಬಿ ಅರ್ಜಿ ಸಲ್ಲಿಸಲು ಕಾಲಾವಕಾಶ ವಿಸ್ತರಣೆ: ನಮೂನೆ 11 ಬಿ ಯಲ್ಲಿ ಆಸ್ತಿಗಳಿಗೆ ಅರ್ಜಿ ಸಲ್ಲಿಸಲು, ಮುಂದಿನ ಸೆಪ್ಟೆಂಬರ್‌ವರೆಗೆ ಕಾಲಾವಕಾಶ ವಿಸ್ತರಿಸುವ ಬಗ್ಗೆ ಸಭೆಯಲ್ಲಿ ನಿರ್ಧರಿಸಲಾಗಿದ್ದು, ಗ್ರಾಮೀಣರು ಇದರ ಸದುಪಯೋಗ ಪಡೆಯಬೇಕು ಎಂದು ಹೇಳಿದರು. ಈವರೆಗೆ 10.16 ಲಕ್ಷ ಆಸ್ತಿಗಳಿಗೆ ಬಿ–ಖಾತಾ ನೀಡಲಾಗಿದೆ. ಇನ್ನೂ 90 ಲಕ್ಷ ಆಸ್ತಿಗಳಿಗೆ ಎ ಮತ್ತು ಬಿ–ಖಾತಾ ನೀಡಬೇಕಾಗಿದೆ ಎಂದರು.

ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಯಾವುದೇ ವಸತಿ ಬಡಾವಣೆಯಲ್ಲಿ ಸರ್ಕಾರಿ ಎ ಮತ್ತು ಬಿ ಖರಾಬು ಜಮೀನೂ ಬಳಸಿಕೊಂಡು ಲೇಔಟ್ ನಿರ್ಮಾಣ ಮಾಡಿದ್ದಾರೆ. ಅಂತಹ ಆಸ್ತಿಗಳಿಗೆ ಇ–ಸ್ವತ್ತು ನೀಡದಂತೆ ಸೂಚಿಸಲಾಗಿದೆ. ಇಂತಹ ಸ್ವತ್ತುಗಳನ್ನು ದಿಶಾಂಕ್ ಆ್ಯಪ್‌ನಲ್ಲಿ ಖರಾಬು ಇದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಹೀಗಾಗಿ ಕಂದಾಯ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಅಧಿಕಾರಿಗಳ ಸಭೆ ಕರೆದು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುವುದು ಎಂದರು.

ರಾಜ್ಯದಲ್ಲಿ ಒಟ್ಟು 5,928 ಗ್ರಾಮ ಪಂಚಾಯ್ತಿಗಳಿದ್ದು ಒಟ್ಟಾರೆ 1.50 ಕೋಟಿ ಆಸ್ತಿಗಳಿವೆ. ಈ ಪೈಕಿ ಈಗಾಗಲೇ 53.53 ಸ್ವತ್ತುಗಳಿಗೆ ಇ–ಸ್ವತ್ತು ನೀಡಲಾಗಿದೆ. ಉಳಿದ ಆಸ್ತಿಗಳಿಗೆ ಸಮರೋಪಾದಿಯಲ್ಲಿ ಇ–ಸ್ವತ್ತು ನೀಡಲು ಸೂಚಿಸಲಾಗಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

ವಿಳಂಬವಾದರೆ ಪಿಡಿಒಗಳಿಗೆ ನೋಟಿಸ್: ಎಚ್ಚರಿಕೆ

ಇ–ಸ್ವತ್ತಿಗೆ ಅರ್ಜಿ ಸಲ್ಲಿಸಿ 15 ದಿನಕ್ಕಿಂತ ಹೆಚ್ಚು ವಿಳಂಬವಾಗಿದ್ದರೆ, ತಾಂತ್ರಿಕ ದೋಷ ಹೊರತುಪಡಿಸಿ, ಉದ್ದೇಶಪೂರ್ವಕವಾಗಿ ವಿಳಂಬ ಮಾಡಿದ್ದರೆ ಅಂತಹ ಪಿಡಿಒಗಳಿಗೆ ಕಾರಣ ಕೇಳಿ ನೋಟಿಸ್ ನೀಡಬೇಕು. ದಾಖಲೆ ಇಲ್ಲದೆ ಕೆಲವು ಪಿಡಿಒಗಳು ಇ–ಸ್ವತ್ತು ನೀಡುತ್ತಿರುವುದು ಕಂಡುಬಂದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲಾಗುವುದು ಎಂದು ಖಂಡ್ರೆ ಸ್ಪಷ್ಟಪಡಿಸಿದರು.

ಕೌಶಲ, ಸೃಜನಶೀಲತೆ, ನವೋದ್ಯಮದತ್ತ ಮುಖ ಮಾಡಿದ ಶಿಕ್ಷಣ ಕ್ಷೇತ್ರ | ನವೀನ ಆವಿಷ್ಕಾರಗಳ ಮೂಲಕ ಕಲಿಕೆ

ಶಿಕ್ಷಣ ಕ್ಷೇತ್ರದಲ್ಲಿ ಹೊಸ ಆಶಾಕಿರಣ ಮೂಡಿಸಿದ ಎಸ್‌ಟಿಇಎಎಂ

▸ **ನಂದಿನಿ ಎನ್.**

• **ಬೆಂಗಳೂರು:** ಬದಲಾಗುತ್ತಿರುವ ಜಾಗತಿಕ ಪರಿಸ್ಥಿತಿಯಲ್ಲಿ ಶಿಕ್ಷಣ ಕ್ಷೇತ್ರವು ಹೊಸ ರೂಪ ಪಡೆದುಕೊಳ್ಳುತ್ತಿದೆ. ಕೇವಲ ಪಠ್ಯಪುಸ್ತಕಗಳ ಜ್ಞಾನ ಮತ್ತು ಪರೀಕ್ಷಾ ಅಂಕಗಳಿಗೆ ಸೀಮಿತವಾಗಿದ್ದ ಶಿಕ್ಷಣ ವ್ಯವಸ್ಥೆ, ಈಗ ಕೌಶಲ ಸೃಜನಶೀಲತೆ ಮತ್ತು ನವೋದ್ಯಮದತ್ತ ಮುಖ ಮಾಡಿದೆ. ಈ ನಿಟ್ಟಿನಲ್ಲಿ ಸ್ಟೀಮ್ (ಎಸ್‌ಟಿಇಎಎಂ) ಶಿಕ್ಷಣ ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಆಶಾಕಿರಣ ಮೂಡಿಸಿದೆ.

ಸಾಂಪ್ರದಾಯಿಕ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಪಠ್ಯಪುಸ್ತಕಗಳಲ್ಲಿರುವ ವಿಷಯಗಳನ್ನು ಓದಿ ಪರೀಕ್ಷೆ ಬರೆಯುವ ಮಾದರಿ ಹೆಚ್ಚಾಗಿತ್ತು. ಆದರೆ, ಸ್ಟೀಮ್ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಕಲಿತ ವಿಷಯಗಳನ್ನು ನೈಜ ಜೀವನದಲ್ಲಿ ಹೇಗೆ ಬಳಸಬಹುದು ಎಂಬುದಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ವಿಜ್ಞಾನ ಪ್ರಯೋಗಗಳು, ರೋಬೋಟಿಕ್ಸ್, ಕೋಡಿಂಗ್, ವಿನ್ಯಾಸ ಚಿಂತನೆ, ಮಾದರಿ ನಿರ್ಮಾಣ, ಸಮಸ್ಯೆ ಪರಿಹಾರ ಕೌಶಲಗಳು ಹಾಗೂ ನವೀನ ಆವಿಷ್ಕಾರಗಳ ಮೂಲಕ ಕಲಿಕೆಯನ್ನು ಹೆಚ್ಚು ಆಸಕ್ತಿದಾಯಕ, ಪರಿಣಾಮಕಾರಿಯನ್ನಾಗಿ ಮಾಡಲಾಗುತ್ತದೆ.

ಅಲ್ಲದೇ, ಇಂದಿನ ಉದ್ಯೋಗ ಮಾರುಕಟ್ಟೆಯಲ್ಲಿ ಕೇವಲ ತಾಂತ್ರಿಕ ಜ್ಞಾನ ಸಾಕಾಗುವುದಿಲ್ಲ, ಹೊಸ ಆಲೋಚನೆಗಳು, ವಿನ್ಯಾಸ ಕೌಶಲ, ತಂಡದಲ್ಲಿ ಕೆಲಸ ಮಾಡುವ ಸಾಮರ್ಥ್ಯ ಮತ್ತು ಸಂವಹನ ಕೌಶಲಗಳೂ ಅಗತ್ಯ. ಈ ಎಲ್ಲ ಅಂಶಗಳನ್ನು ಸ್ಟೀಮ್ ಶಿಕ್ಷಣ ಸಮಗ್ರವಾಗಿ ಬೆಳೆಸುತ್ತದೆ.

ಪ್ರೌಢಶಾಲೆ ಹಂತದಲ್ಲಿ ಅಗತ್ಯವೇಕೆ?: ಪ್ರೌಢಶಾಲಾ ಹಂತವೇ ವಿದ್ಯಾರ್ಥಿಗಳ ಭವಿಷ್ಯದ ವೃತ್ತಿಜೀವನದ ದಿಕ್ಕು ನಿರ್ಧರಿಸುವ ಮಹತ್ವದ ಘಟ್ಟವಾಗಿದೆ. ಇದೇ ಸಮಯದಲ್ಲಿ ವಿದ್ಯಾರ್ಥಿಗಳು ವಿಜ್ಞಾನ, ವಾಣಿಜ್ಯ ಅಥವಾ ಕಲಾ ವಿಭಾಗಗಳತ್ತ ತಮ್ಮ ಆಸಕ್ತಿಯನ್ನು ಬೆಳೆಸಿಕೊಳ್ಳುತ್ತಾರೆ. ಸ್ಟೀಮ್ ಶಿಕ್ಷಣವು ವಿದ್ಯಾರ್ಥಿಗಳಿಗೆ ವಿವಿಧ ಕ್ಷೇತ್ರಗಳ ಪರಿಚಯ ನೀಡುವುದರ ಜತೆಗೆ ಅವರಲ್ಲಿರುವ ಪ್ರತಿಭೆ ಮತ್ತು ಆಸಕ್ತಿಗಳನ್ನು ಗುರುತಿಸಲು ನೆರವಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ಕೇವಲ ವೈದ್ಯರು, ಇಂಜಿನಿಯರ್‌ಗಳು ಅಥವಾ ಸರ್ಕಾರಿ ಉದ್ಯೋಗಗಳ ಬಗ್ಗೆ ಮಾತ್ರ ಯೋಚಿಸದೆ ಕೃತಕ ಬುದ್ಧಿಮತ್ತೆ, ಡೇಟಾ ವಿಶ್ಲೇಷಣೆ, ರೋಬೋಟಿಕ್ಸ್, ಅನಿಮೇಷನ್, ಡಿಸೈನ್, ಗೇಮ್ ಡೆವಲಪ್‌ಮೆಂಟ್ ಹಾಗೂ ಸ್ಟಾರ್ಟ್‌ಅಪ್ ಉದ್ಯಮಗಳಂತಹ ಹೊಸ ಅವಕಾಶಗಳತ್ತ ಮುಖ ಮಾಡುವ ಸಾಧ್ಯತೆ ಹೆಚ್ಚುತ್ತದೆ.

ಭವಿಷ್ಯದ ಉದ್ಯೋಗಗಳಿಗೆ ಸಿದ್ಧತೆ: ಜಾಗತಿಕ ಮಟ್ಟದಲ್ಲಿ ಉದ್ಯೋಗ ಕ್ಷೇತ್ರ ವೇಗವಾಗಿ ಬದಲಾಗುತ್ತಿದೆ. ಕೃತಕ ಬುದ್ಧಿಮತ್ತೆ, ಯಂತ್ರ ಕಲಿಕೆ, ಸೈಬರ್ ಭದ್ರತೆ, ಡೇಟಾ ಸೈನ್ಸ್, ಹಸಿರು ತಂತ್ರಜ್ಞಾನ ಹಾಗೂ ಅಂತರಿಕ್ಷ ಸಂಶೋಧನೆ ಮುಂತಾದ ಕ್ಷೇತ್ರಗಳು ಮುಂದಿನ ದಶಕದಲ್ಲಿ ಪ್ರಮುಖ ಉದ್ಯೋಗ ಕ್ಷೇತ್ರಗಳಾಗಲಿವೆ. ಈ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸಲು ಅಗತ್ಯವಾದ ಮೂಲಭೂತ ಕೌಶಲಗಳನ್ನು ಸ್ಟೀಮ್ ಶಿಕ್ಷಣದ ಮೂಲಕ ವಿದ್ಯಾರ್ಥಿಗಳು ಶಾಲಾ ಹಂತದಲ್ಲಿಯೇ ಕಲಿಯುವ ಅವಕಾಶ ಪಡೆಯಲಿದ್ದಾರೆ.

ಮಹತ್ವಾಕಾಂಕ್ಷಿ ಯೋಜನೆ

ವಿದ್ಯಾರ್ಥಿಗಳನ್ನು ಭವಿಷ್ಯದ ಜಾಗತಿಕ ಸ್ಪರ್ಧೆಗೆ ಸಜ್ಜುಗೊಳಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ (ಕೆಪಿಎಸ್) ಸೈನ್ಸ್, ಟೆಕ್ನಾಲಜಿ, ಇಂಜಿನಿಯರಿಂಗ್, ಆರ್ಟ್ಸ್ ಮತ್ತು ಮ್ಯಾಥಮೆಟಿಕ್ಸ್ (ಸ್ಟೀಮ್) ಶಿಕ್ಷಣವನ್ನು ಪರಿಚಯಿಸುತ್ತಿದ್ದು, ಇದು ಸರ್ಕಾರಿ ಶಾಲೆಗಳ ಶಿಕ್ಷಣದ ಗುಣಮಟ್ಟದಲ್ಲಿ ಮಹತ್ವದ ಬದಲಾವಣೆ ತರಲಿರುವ ಮಹತ್ವಾಕಾಂಕ್ಷಿ ಯೋಜನೆಯಾಗಿದೆ.

> ಶಿಕ್ಷಣವನ್ನು ಕೇವಲ ಪಠ್ಯಪುಸ್ತಕಗಳಿಗೆ ಸೀಮಿತಗೊಳಿಸದೆ, ಮಕ್ಕಳಲ್ಲಿ ಕುತೂಹಲ ಬೆಳೆಸುವ ಸ್ಟೀಮ್ ಶಿಕ್ಷಣ ಪದ್ಧತಿಯ ಮೂಲಕ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡುತ್ತಿದೆ. ಇದರಿಂದ ಕೆಪಿಎಸ್ ಶಾಲೆಗಳಲ್ಲಿ ವಿದ್ಯಾರ್ಥಿಗಳ ನೋಂದಣಿ ಹೆಚ್ಚಾಗಲಿದ್ದು, ವಿದ್ಯಾರ್ಥಿಗಳಿಗೆ ಭವಿಷ್ಯದ ಉದ್ಯೋಗ ಮಾರುಕಟ್ಟೆಗೆ ಅಗತ್ಯವಾದ ಕೌಶಲಗಳನ್ನು ಬೆಳೆಸಿಕೊಳ್ಳಲು ನೆರವಾಗಲಿದೆ.
>
> ■ **ಸುರಳ್ಕರ್ ವಿಕಾಸ್ ಕಿಶೋರ್,** ಆಯುಕ್ತ, ಶಾಲಾ ಶಿಕ್ಷಣ ಇಲಾಖೆ

ಕುದುರೆ ವ್ಯಾಪಾರ ವಿಫಲ: ನಾಮಪತ್ರ ತಿರಸ್ಕಾರ

• **ಬೆಂಗಳೂರು:** ರಾಜ್ಯಸಭೆ ಚುನಾವಣೆಯಲ್ಲಿ ಕುದುರೆ ವ್ಯಾಪಾರದ ತಂತ್ರ ವಿಫಲವಾದ ಕಾರಣ ಬಿಜೆಪಿಯಿಂದ ನಾಮಪತ್ರ ತಿರಸ್ಕಾರದ ಕುತಂತ್ರ ಮಾಡಿದೆ ಎಂದು ತೆಲಂಗಾಣ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಮೀನಾಕ್ಷಿ ನಟರಾಜನ್ ಆರೋಪಿಸಿದರು.

ಮಧ್ಯಪ್ರದೇಶದ ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ನಾಮಪತ್ರ ತಿರಸ್ಕಾರಗೊಂಡ ಬಗ್ಗೆ ಕೆಪಿಸಿಸಿ ಕಚೇರಿಯಲ್ಲಿ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿ, ಬಿಜೆಪಿ 3ನೇ ಅಭ್ಯರ್ಥಿ ಕಣಕ್ಕಿಳಿಸಿದಾಗಲೇ, ಅವರು ಯಾವ ಹಂತಕ್ಕೆ ಇಳಿದು ಮೂರನೇ ಅಭ್ಯರ್ಥಿ ಗೆಲ್ಲಿಸಿಕೊಳ್ಳುತ್ತಾರೆ ಎಂಬ ಸ್ಪಷ್ಟತೆ ಸಿಕ್ಕಿತ್ತು ಎಂದು ಹೇಳಿದರು.

ನಾಮಪತ್ರ ಪರಿಶೀಲನೆ ಸಂದರ್ಭದಲ್ಲಿ ಆಕ್ಷೇಪಣೆ ವ್ಯಕ್ತಪಡಿಸಿ ತಿರಸ್ಕರಿಸಲಾಯಿತು. ಇದೇ ಸಮಯದಲ್ಲಿ ಜಾರ್ಖಂಡ್‌ನಲ್ಲಿ ರಾಜ್ಯಸಭೆಗೆ ಸ್ಪರ್ಧೆ ಮಾಡಿದ್ದ ಅಂಬಾನಿಗಳಿಗೆ ಆಪ್ತರಾದ ವ್ಯಕ್ತಿಯ ನಾಮಪತ್ರ ಸಲ್ಲಿಕೆ ವೇಳೆ ರಿಟರ್ನಿಂಗ್ ಅಧಿಕಾರಿ ನಾಮಪತ್ರದಲ್ಲಿನ ದೋಷ ಸರಿಪಡಿಸಿಕೊಳ್ಳಲು 24 ಗಂಟೆಗಳ ಕಾಲಾವಕಾಶ ನೀಡಿದ್ದರು. ಆದರೆ ಮಧ್ಯಪ್ರದೇಶದಲ್ಲಿ ಈ ಅವಕಾಶ ನೀಡಲಿಲ್ಲ ಎಂದು ದೂರಿದರು.

ಗುರುವಾರದ ಪಂದ್ಯಗಳು

ದ.ಆಫ್ರಿಕಾ-ದ.ಕೊರಿಯಾ, (ಬೆಳಗ್ಗೆ 6:30)
ಚೆಕ್-ಮೆಕ್ಸಿಕೊ, (ಬೆಳಗ್ಗೆ 6:30)
ಕುರಾಕಾವೊ-ಐವರಿ ಕೋಸ್ಟ್ (ಮಧ್ಯರಾತ್ರಿ 1:30)
ಎಕ್ವಾಡಾರ್-ಜರ್ಮನಿ, (ಮಧ್ಯರಾತ್ರಿ 1:30)

ಕಿರುಸುದ್ದಿ

ವಂಶಿಕಾ-ಶಿವಗೆ ಬೆಳ್ಳಿ

ಹೊಸದಿಲ್ಲಿ: ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಜೋಡಿ ವಂಶಿಕಾ ಚೌಧರಿ ಮತ್ತು ಶಿವ ನರ್ವಾಲ್ ಅವರು 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದರು. ಭಾರತೀಯ ಜೋಡಿ ಒಟ್ಟು 469.7 ಅಂಕಗಳನ್ನು ಗಳಿಸಿ ಪೋಲೆಂಡ್‌ನ ಮಾಲ್ಗೋರ್ಜಾಟಾ ಮತ್ತು ಇವಾನ್ ಅವರಿಗಿಂತ ಹಿಂದಿದೆ. ಈ ಜೋಡಿ ಒಟ್ಟು 471.9 ಅಂಕಗಳನ್ನು ಗಳಿಸಿತು. ಮಂಗಳವಾರದ ಬೆಳ್ಳಿ ಪದಕದೊಂದಿಗೆ, ಭಾರತ ಚಾಂಪಿಯನ್‌ಶಿಪ್‌ನಲ್ಲಿ ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಒಟ್ಟಾರೆ ಪದಕಗಳ ಸಂಖ್ಯೆ ಐದು ಚಿನ್ನ, ನಾಲ್ಕು ಬೆಳ್ಳಿ ಮತ್ತು ಏಳು ಕಂಚಿನ ಪದಕಗಳನ್ನು ಒಳಗೊಂಡಂತೆ 16 ಪದಕಗಳಿಗೆ ಏರಿದೆ.

ಆಶೀರ್ವಾದ್ ಸೂರ್ಯವಂಶಿ ಮತ್ತೆ ಶತಕ

ಜಾರ್ಖಂಡ್: ಮೊನ್ನೆಯಷ್ಟೇ ಶತಕ ಬಾರಿಸಿ ಗಮನ ಸೆಳೆದಿದ್ದ ವೈಭವ್ ಸೂರ್ಯವಂಶಿ ಸಹೋದರ ಆಶೀರ್ವಾದ್ ಸೂರ್ಯವಂಶಿ ಬುಧವಾರ ಸ್ಥಳೀಯ ಕ್ಲಬ್ ಪಂದ್ಯದಲ್ಲಿ ಮತ್ತೊಂದು ಶತಕ ಬಾರಿಸಿ ಮಿಂಚಿದ್ದಾರೆ. 10 ವರ್ಷದ ಆಶೀರ್ವಾದ್, ರಿಷಬ್ 11 ಎಂಬ ತಂಡವನ್ನು ಪ್ರತಿನಿಧಿಸಿ 119 ಬಾಲ್‌ಗಳಲ್ಲಿ 168 ರನ್ ಬಾರಿಸಿದ್ದಾರೆ. ಈ ಇನ್ನಿಂಗ್ಸ್‌ನಲ್ಲಿ 19 ಬೌಂಡರಿ, 6 ಸಿಕ್ಸರ್ ಸೇರಿವೆ.

ವೈಭವ್‌ಗೆ ಬೇರೆ ಡ್ರೆಸ್ಸಿಂಗ್ ರೂಮ್

ಲಂಡನ್: ಐರ್ಲೆಂಡ್ ಮತ್ತು ಇಂಗ್ಲೆಂಡ್ ಸರಣಿಗಳಿಗೆ ಆಯ್ಕೆಯಾಗಿರುವ 15 ವರ್ಷದ ವೈಭವ್ ಸೂರ್ಯವಂಶಿಗೆ ಬೇರೆ ಡ್ರೆಸ್ಸಿಂಗ್ ರೂಮ್ ಒದಗಿಸಲು ಬಿಸಿಸಿಐ ಮತ್ತು ಸಂಬಂಧಿತ ಸಂಸ್ಥೆಗಳು ನಿರ್ಧರಿಸಿವೆ. ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಆಯ್ಕೆಯಾಗಿರುವ ಅತಿ ಕಿರಿಯ ಆಟಗಾರ ಎಂಬ ಹೆಗ್ಗಳಿಕೆ ಪಾತ್ರರಾಗಿರುವ ವೈಭವ್ ಸೂರ್ಯವಂಶಿ ತಂಡದೊಂದಿಗೆ ಆಡಲಿದ್ದರೂ, ವಾಸ್ತವ್ಯ ತಂಡದೊಂದಿಗೆ ಮಾಡುವಂತಿಲ್ಲ. 16ರಿಗಿಂತಲೂ ಕಡಿಮೆ ವಯಸ್ಸನ್ನು ಹೊಂದಿರುವ ವೈಭವ್ ವೈಯಕ್ತಿಕ ಡ್ರೆಸ್ಸಿಂಗ್ ರೂಮ್ ಹೊಂದಿರಬೇಕೆಂಬುದು ಇಸಿಬಿ ಮತ್ತು ಐಸಿಸಿ ನಿಯಮವಾಗಿದೆ.

ಪಾಕ್‌ಗೆ ಹೀನಾಯ ಸೋಲು

ಬ್ರಿಸ್ಟಾಲ್: ಪಾಕಿಸ್ತಾನ ತಂಡವನ್ನು ಹೀನಾಯವಾಗಿ ಸೋಲಿಸಿರುವ ಆಸ್ಟ್ರೇಲಿಯಾ ಮಹಿಳೆಯರ ತಂಡವು ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿಯ ಸೂಪರ್-8ಕ್ಕೆ ಲಗ್ಗೆ ಹಾಕಿದಂತಿದೆ. ಮಂಗಳವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಆಸೀಸ್ ಪಾಕ್ ತಂಡವನ್ನು ಬರೋಬ್ಬರಿ 113 ರನ್‌ಗಳಿಂದ ಮಣಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಿತು. ಎಲ್ಲಿಸ್ ಪೆರ್ರಿ 48 ಬಾಲ್‌ಗಳಲ್ಲಿ 71 ರನ್ ಗಳಿಸಿದರು. ಜಾರ್ಜಿಯಾ ವಾಲ್ 39 ರನ್ ಗಳಿಸಿದರು. ಸುದರ್‌ಲ್ಯಾಂಡ್ 27, ಕ್ಯಾರಿ 26 ರನ್‌ಗಳ ಕೊಡುಗೆ ನೀಡಿದರು. ಪಾಕ್ ಪರ ಸಾದಿಯಾ, ನಶ್ರಾ ಮತ್ತು ರಾಮೀನ್ ತಲಾ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಪಾಕಿಸ್ತಾನ 86 ರನ್‌ಗಳಿಗೆ ಆಲೌಟ್ ಆಯಿತು. ಮುನೀಬಾ 32 ರನ್ ಗಳಿಸಿದ್ದೇ ಹೆಚ್ಚಾಗಿತ್ತು. ಆಸ್ಟ್ರೇಲಿಯಾ ಪರ ಪೆರ್ರಿ, ಸುದರ್‌ಲ್ಯಾಂಡ್, ಸೋಫಿ ತಲಾ ಎರಡು ವಿಕೆಟ್ ಕಿತ್ತರು. ವಾರೆಹಮ್ 1 ವಿಕೆಟ್ ಕಿತ್ತರು.

ರಗ್ಬಿ: ಸೆಮಿಗೆ ಬೆಂಗಳೂರು

ಹೈದರಾಬಾದ್: ಗಚಿಬೌಲಿನ ಗಂಡಿ ಮೋಹನ ಚಂದ್ರ ಬಾಲಯೋಗಿ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಗ್ಬಿ ಪ್ರೀಮಿಯರ್ ಲೀಗ್‌ನಲ್ಲಿ ಬೆಂಗಳೂರು ಬ್ರೇವ್‌ಹಾರ್ಟ್ಸ್ ತಂಡವು ಕೋಲ್ಕತ್ತಾ ಬಂಗಾ ಟೈಗರ್ಸ್ ವಿರುದ್ಧ 26-21 ಅಂತರದ ಜಯ ಸಾಧಿಸಿ ಸೆಮಿಫೈನಲ್‌ಗೆ ಅರ್ಹತೆ ಪಡೆದಿತು. ಬೆಂಗಳೂರು ಬ್ರೇವ್‌ಹಾರ್ಟ್ಸ್ 26-21ರಿಂದ ಕೋಲ್ಕತ್ತಾ ಬಂಗಾ ಟೈಗರ್ಸ್‌ನ್ನು ಮಣಿಸಿತು.

5-0
ಪೋರ್ಚುಗಲ್ ಉಜ್ಬೇಕಿಸ್ತಾನ

ಫಿಫಾ ಸ್ಟಾರ್‌ನಿಂದ ಮೊದಲನೇ ಗೋಲ್!
ಪೋರ್ಚುಗಲ್‌ಗೆ 5–0 ಭರ್ಜರಿ ಗೆಲುವು
ರೊನಾಲ್ಡೊ ಕಿಕ್!

ಹ್ಯೂಸ್ಟನ್: ಈ ಬಾರಿಯ ಫಿಫಾ ವಿಶ್ವಕಪ್‌ನಲ್ಲಿ 41 ವರ್ಷದ ಕ್ರಿಸ್ಟಿಯಾನೋ ರೊನಾಲ್ಡೊ ಮೊದಲ ಗೋಲು ಗಳಿಸಿದ್ದು, ಅವರ ದ್ವಿಗೋಲು ಪ್ರದರ್ಶನದೊಂದಿಗೆ ಪೋರ್ಚುಗಲ್ ತಂಡವು ಉಜ್ಬೇಕಿಸ್ತಾನ ವಿರುದ್ಧದ ಪಂದ್ಯದಲ್ಲಿ 5-0ರಿಂದ ಭರ್ಜರಿ ಗೆಲುವು ಸಾಧಿಸಿದೆ. ವಿಶ್ವಕಪ್‌ನಲ್ಲಿ ಎಂಬಾಪ್ಪೆ ಮೆಸ್ಸಿ ಮ್ಯಾಜಿಕ್ ನಡೆಯುತ್ತಿತ್ತು. ಅಭಿಮಾನಿಗಳ ಪೈಸಾ ವಸೂಲ್ ಅವ್ಯಕ್ತಿಗಾಗಿ ರೊನಾಲ್ಡೊ ಗೋಲು ಬಾರಿಸಬೇಕಿತ್ತು. ಅದು ಮಂಗಳವಾರ ನಡೆಯಿತು.

41 ವರ್ಷದ ರೊನಾಲ್ಡೊ ಈ ಪಂದ್ಯದಲ್ಲಿ ದಾಖಲಿಸಿದ ಎರಡು ಗೋಲುಗಳ ಮೂಲಕ ಆರು ವಿಭಿನ್ನ ವಿಶ್ವಕಪ್ ಟೂರ್ನಿಗಳಲ್ಲಿ ಗೋಲು ಗಳಿಸಿದ ಮೊದಲ ಆಟಗಾರ ಎಂಬ ಐತಿಹಾಸಿಕ ಸಾಧನೆ ಮಾಡಿದರು. ಅವರ ಅದ್ಭುತ ಪ್ರದರ್ಶನಕ್ಕೆ ಪಂದ್ಯಶ್ರೇಷ್ಠ ಪ್ರಶಸ್ತಿಯೂ ಲಭಿಸಿತು. ಕಾಂಗೊ ವಿರುದ್ಧದ ಮೊದಲ ಪಂದ್ಯದಲ್ಲಿ ನಿರಾಸೆ ಮೂಡಿಸಿದ್ದ ರೊನಾಲ್ಡೊ ಅವರನ್ನು ಆರಂಭಿಕ ತಂಡದಲ್ಲೇ ಮುಂದುವರಿಸಿದ್ದ ಕೋಚ್ ರೊಬೆರ್ಟೊ ಮಾರ್ಟಿನೆಜ್ ಅವರ ನಿರ್ಧಾರ ಸಾರ್ಥಕವಾಯಿತು. ಪಂದ್ಯ ಆರಂಭವಾಗಿ ಕೇವಲ ಆರನೇ ನಿಮಿಷದಲ್ಲಿ ಜೋವೊ ಕಾನ್ಸೆಲೊ ನೀಡಿದ ಕ್ರಾಸ್ ಅನ್ನು ಗೋಲಾಗಿ ಪರಿವರ್ತಿಸಿದ ರೊನಾಲ್ಡೊ ಪೋರ್ಚುಗಲ್‌ಗೆ ಮುನ್ನಡೆ ತಂದುಕೊಟ್ಟರು. 17ನೇ ನಿಮಿಷದಲ್ಲಿ ನುನೊ ಮೆಂಡೆಸ್ ಫ್ರೀ-ಕಿಕ್ ಮೂಲಕ ಮತ್ತೊಂದು ಗೋಲು ದಾಖಲಿಸಿ ಅಂತರವನ್ನು 2-0ಕ್ಕೆ ಏರಿಸಿದರು. 39ನೇ ನಿಮಿಷದಲ್ಲಿ ಬ್ರುನೊ ಫರ್ನಾಂಡಿಸ್ ಪಾಸ್ ಅನ್ನು ಸದುಪಯೋಗಪಡಿಸಿಕೊಂಡ ರೊನಾಲ್ಡೊ ತಮ್ಮ ಎರಡನೇ ಗೋಲು ಬಾರಿಸಿ ಪೋರ್ಚುಗಲ್‌ಗೆ 3-0 ಮುನ್ನಡೆ ನೀಡಿದರು. ಎರಡನೇ ಅರ್ಧದಲ್ಲಿ ಉಜ್ಬೇಕಿಸ್ತಾನದ ಆತ್ಮಹತ್ಯಾ ಗೋಲಿನಿಂದ ಪೋರ್ಚುಗಲ್ 4-0 ಮುನ್ನಡೆ ಸಾಧಿಸಿತು. 87ನೇ ನಿಮಿಷದಲ್ಲಿ ಬದಲಿ ಆಟಗಾರ ರಫೇಲ್ ಲಿಯೊ ಐದನೇ ಗೋಲು ದಾಖಲಿಸಿ ತಂಡದ ಗೆಲುವಿಗೆ ಮೆರುಗು ನೀಡಿದರು. ಈ ಜಯದೊಂದಿಗೆ ಪೋರ್ಚುಗಲ್ ಕೆ ಗುಂಪಿನಲ್ಲಿ ನಾಲ್ಕು ಅಂಕಗಳನ್ನು ಗಳಿಸಿ ತನ್ನ ನಾಕೌಟ್ ಹಂತದ ಆಸೆಗಳನ್ನು ಬಲಪಡಿಸಿಕೊಂಡಿದೆ.

ಅಂಕಿ-ಅಂಶ

- ರೊನಾಲ್ಡೊ ವಿಶ್ವಕಪ್ ಇತಿಹಾಸದಲ್ಲಿ ಆರು ವಿಭಿನ್ನ ಆವೃತ್ತಿಗಳಲ್ಲಿ ಗೋಲು ಗಳಿಸಿದ ಮೊದಲ ಆಟಗಾರ
- ರೊನಾಲ್ಡೊ ಎರಡು ಗೋಲು, ಪಂದ್ಯಶ್ರೇಷ್ಠ ಪ್ರಶಸ್ತಿ
- ನುನೊ ಮೆಂಡೆಸ್ ಮತ್ತು ರಫೇಲ್ ಲಿಯೊ ತಲಾ ಒಂದು ಗೋಲು

ನಾಕೌಟ್‌ಗೇರಿದ ಕೊಲಂಬಿಯಾ

ಗ್ವಾಡಲಜಾರಾ: ಡ್ಯಾನಿಯಲ್ ಮುನೋಜ್ ದಾಖಲಿಸಿದ ನಿರ್ಣಾಯಕ ಗೋಲಿನ ನೆರವಿನಿಂದ ಕೊಲಂಬಿಯಾ ತಂಡ ಕಾಂಗೊ ವಿರುದ್ಧ 1-0 ಅಂತರದ ಗೆಲುವು ಸಾಧಿಸಿ ಫಿಫಾ ವಿಶ್ವಕಪ್ ನಾಕೌಟ್ ಹಂತಕ್ಕೆ ಅರ್ಹತೆ ಪಡೆದುಕೊಂಡಿದೆ.

ಪಂದ್ಯದ ಬಹುತೇಕ ಅವಧಿಯಲ್ಲಿ ಕಾಂಗೊ ಗೋಲ್‌ಕೀಪರ್ ಲಿಯೊನೆಲ್ ಎಂಪಾಸಿ ಅದ್ಭುತ ಪ್ರದರ್ಶನ ನೀಡಿ ಕೊಲಂಬಿಯಾದ ದಾಳಿಯನ್ನು ತಡೆದಿದ್ದರು. ಆರಂಭದ 20 ನಿಮಿಷಗಳಲ್ಲೇ ಐದು ಕಠಿಣ ಸೇವ್‌ಗಳನ್ನು ಮಾಡಿ ಕೊಲಂಬಿಯಾ ಆಟಗಾರರನ್ನು ನಿರಾಸೆಗೊಳಿಸಿದ್ದರು. ಆದರೆ 76ನೇ ನಿಮಿಷದಲ್ಲಿ ಡ್ಯಾನಿಯಲ್ ಮುನೋಜ್ ಅವಕಾಶವನ್ನು ಕೈಚೆಲ್ಲಲಿಲ್ಲ. ರಕ್ಷಣಾ ಆಟಗಾರನ ಕಾಲಿಗೆ ತಾಗಿ ಬಂದ ಚೆಂಡನ್ನು ಎಡಗಾಲಿನ ಶಾಟ್ ಮೂಲಕ ಗೋಲಾಗಿ ಪರಿವರ್ತಿಸಿ ಕೊಲಂಬಿಯಾಗೆ ಅಮೂಲ್ಯ ಮುನ್ನಡೆ ನೀಡಿದರು. ಈ ಗೋಲನ್ನು ತಡೆಯಲು ಎಂಪಾಸಿಗೆ ಯಾವುದೇ ಅವಕಾಶ ಇರಲಿಲ್ಲ. ಈ ಗೆಲುವಿನೊಂದಿಗೆ ಕೊಲಂಬಿಯಾ ಎರಡು ಪಂದ್ಯಗಳಿಂದ ಆರು ಅಂಕಗಳನ್ನು ಗಳಿಸಿ ಕೆ ಗುಂಪಿನಿಂದ ನಾಕೌಟ್ ಹಂತ ಪ್ರವೇಶಿಸಿದ ಮೊದಲ ತಂಡ ಎನಿಸಿತು. ಈಗ ಕೊನೆಯ ಲೀಗ್ ಪಂದ್ಯದಲ್ಲಿ ಕೊಲಂಬಿಯಾ ಮತ್ತು ಪೋರ್ಚುಗಲ್ ಮುಖಾಮುಖಿಯಾಗಲಿವೆ. ಆ ಪಂದ್ಯದಲ್ಲಿ ಡ್ರಾ ಸಾಧಿಸಿದರೂ ಕೊಲಂಬಿಯಾ ಗುಂಪಿನ ಬೆಸ್ಟ್ ತಂಡವಾಗಲಿದೆ. ಅದೇ ಫಲಿತಾಂಶ ಪೋರ್ಚುಗಲ್ ತಂಡಕ್ಕೂ ನಾಕೌಟ್ ಹಂತದ ಟಿಕೆಟ್ ನೀಡಲಿದೆ.

- ಡ್ಯಾನಿಯಲ್ ಮುನೋಜ್ (76ನೇ ನಿಮಿಷ) ನಿರ್ಣಾಯಕ ಗೋಲು
- ಗೋಲ್‌ಕೀಪರ್ ಲಿಯೊನೆಲ್ ಎಂಪಾಸಿ ಐದು ಅದ್ಭುತ ಸೇವ್

ಕ್ರೊಯೇಷ್ಯಾ ಆಸೆ ಜೀವಂತ

ಟೊರೊಂಟೊ: ಅನುಭವಿ ನಾಯಕ ಲೂಕಾ ಮೊಡ್ರಿಚ್ ಅವರ 200ನೇ ಅಂತಾರಾಷ್ಟ್ರೀಯ ಪಂದ್ಯದಲ್ಲಿ, ಬದಲಿ ಆಟಗಾರ ಆಂಟೆ ಬುಡಿಮಿರ್ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಕ್ರೊಯೇಷ್ಯಾ 1-0 ಅಂತರದಲ್ಲಿ ಪನಾಮಾವನ್ನು ಮಣಿಸಿ ಫಿಫಾ ವಿಶ್ವಕಪ್‌ನ ನಾಕೌಟ್ ಹಂತದ ಆಸೆಯನ್ನು ಜೀವಂತವಾಗಿರಿಸಿಕೊಂಡಿತು. ಮೊದಲಾರ್ಧದಲ್ಲಿ ಉಭಯ ತಂಡಗಳು ಎಚ್ಚರಿಕೆಯ ಆಟ ಪ್ರದರ್ಶಿಸಿದವು. ಆದರೆ ದ್ವಿತೀಯಾರ್ಧ ಆರಂಭವಾದ ಕೆಲವೇ ಕ್ಷಣಗಳಲ್ಲಿ ಕ್ರೊಯೇಷ್ಯಾ ಪಂದ್ಯದ ಮೇಲೆ ಹಿಡಿತ ಸಾಧಿಸಿತು. 54ನೇ ನಿಮಿಷದಲ್ಲಿ ಜೋಸಿಪ್ ಸ್ಟಾನಿಶಿಕ್ ನೀಡಿದ ನಿಖರ ಕ್ರಾಸ್ ಅನ್ನು ಆಂಟೆ ಬುಡಿಮಿರ್ ಗೋಲಾಗಿ ಪರಿವರ್ತಿಸಿ ತಂಡಕ್ಕೆ ಮುನ್ನಡೆ ತಂದರು. ಅದೇ ಗೋಲಿನ ಬಲದಿಂದ ಕ್ರೊಯೇಷ್ಯಾ ಪಂದ್ಯವನ್ನು ಗೆದ್ದುಕೊಂಡಿತು.

ಇಂಗ್ಲೆಂಡ್-ಘಾನಾ ಪಂದ್ಯ ಡ್ರಾ

ಫಾಕ್ಸ್‌ಬರೋ: ಚೆಂಡಿನ ಮೇಲೆ ಸಂಪೂರ್ಣ ಹಿಡಿತ ಸಾಧಿಸಿ, ಗೋಲು ಅವಕಾಶಗಳ ಸುರಿಮಳೆಯನ್ನೇ ಸೃಷ್ಟಿಸಿದರೂ ಇಂಗ್ಲೆಂಡ್‌ಗೆ ಗೆಲುವು ಸಿಗಲಿಲ್ಲ. ಘಾನಾ ವಿರುದ್ಧದ ವಿಶ್ವಕಪ್ ಎಲ್ ಗುಂಪಿನ ಪಂದ್ಯ 0-0 ಗೋಲುರಹಿತ ಡ್ರಾದಲ್ಲಿ ಅಂತ್ಯಗೊಂಡಿತು. ಪಂದ್ಯದುದ್ದಕ್ಕೂ ಮೇಲುಗೈ ಸಾಧಿಸಿದ ಇಂಗ್ಲೆಂಡ್ 19 ಶಾಟ್‌ಗಳನ್ನು ಪ್ರಯತ್ನಿಸಿದರೆ, ಘಾನಾ ಕೇವಲ ಒಂದು ಪ್ರಯತ್ನಕ್ಕೆ ಸೀಮಿತವಾಯಿತು. ಆದರೆ ಗೋಲು ಮಾತ್ರ ಎರಡೂ ತಂಡಗಳಿಂದ ಬರಲಿಲ್ಲ. ಮೊದಲಾರ್ಧದಲ್ಲಿ 60 ಶೇಕಡಾ ಚೆಂಡಿನ ಹಿಡಿತ ಹೊಂದಿದ್ದ ಇಂಗ್ಲೆಂಡ್ ಹಲವು ದಾಳಿಗಳನ್ನು ನಡೆಸಿದರೂ ಗೋಲು ಖಾತೆ ತೆರೆಯಲಿಲ್ಲ. ದ್ವಿತೀಯಾರ್ಧದಲ್ಲಿ ಘಾನಾ ಹೆಚ್ಚು ಆಕ್ರಮಣಕಾರಿ ಆಟವಾಡಿ ಇಂಗ್ಲೆಂಡ್‌ಗೆ ಸವಾಲೊಡ್ಡಿತು. ಈ ಫಲಿತಾಂಶದೊಂದಿಗೆ ಗುಂಪು ಎಲ್‌ನಲ್ಲಿ ನಾಕೌಟ್ ಪ್ರವೇಶದ ಹೋರಾಟ ಮತ್ತಷ್ಟು ರೋಚಕವಾಗಿದೆ. ಇಂಗ್ಲೆಂಡ್ ಮತ್ತು ಘಾನಾ ಎರಡೂ ತಂಡಗಳು ತಮ್ಮ ಅಂತಿಮ ಗುಂಪು ಪಂದ್ಯಗಳಲ್ಲಿ ಉತ್ತಮ ಫಲಿತಾಂಶಕ್ಕಾಗಿ ಕಾದಿವೆ.

ತ್ರಿಶಾ-ಗಾಯತ್ರಿ ಮುನ್ನಡೆ

ಯುಎಸ್ ಓಪನ್ ಬ್ಯಾಡ್ಮಿಂಟನ್

ಫುಲ್ಲರ್‌ಟನ್(ಅಮೆರಿಕ): ಮೂರು ಸುತ್ತುಗಳ ರೋಚಕ ಪಂದ್ಯದಲ್ಲಿ ಗೆಲುವು ಸಾಧಿಸಿರುವ ಭಾರತದ ತ್ರಿಶಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ ಜೋಡಿ ಇಲ್ಲಿ ನಡೆಯುತ್ತಿರುವ ಪ್ರತಿಷ್ಠಿತ ಯುಎಸ್ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಎರಡನೇ ಸುತ್ತಿಗೆ ಮುನ್ನಡೆದೆ.

ಬುಧವಾರ ಶುರುವಾಗಿರುವ ಬ್ಯಾಡ್ಮಿಂಟನ್ ಕ್ಷೇತ್ರದ ಉತ್ತುಂಗ ಪಂದ್ಯಾವಳಿಯಲ್ಲಿ ಒಂದಾದ ಯುಎಸ್ ಓಪನ್ ಟೂರ್‌ನಲ್ಲಿ ಸ್ಪೇನ್‌ನ ಪೌಲಾ ಲೋಪೆಜ್ ಮತ್ತು ಲೂಸಿಯಾ ಅವರನ್ನು ಎದುರಿಸಿದ್ದ ಭಾರತ ಜೋಡಿ 21-12, 14-21, 21-13ರಿಂದ ಮೇಲುಗೈ ಸಾಧಿಸಿತು. ಗಾಯದ ಕಾರಣದಿಂದಾಗಿ ಸ್ಪರ್ಧಾತ್ಮಕ ಬ್ಯಾಡ್ಮಿಂಟನ್‌ನಿಂದ ದೂರ ಉಳಿದಿದ್ದ ತ್ರಿಶಾ ಕಂಬ್ಯಾಕ್ ಮಾಡಿದರು. ಅವರಿಗೆ ಗಾಯತ್ರಿ ಸಾಥ್ ಸಿಕ್ಕಿತು. ಇಬ್ಬರೂ ಮೊದಲಿನಿಂದಲೂ ಕರಾರುವಾಕ್ ದಾಳಿ ಸಂಘಟಿಸಿದರು. ಆಕ್ರಮಣಕಾರಿ ಆಟದೊಂದಿಗೆ ಮೊದಲ ಸೆಟ್ ಅನ್ನು 21-12ರಿಂದ ಗೆದ್ದರು. ಎರಡನೇ ಸೆಟ್‌ನಲ್ಲಿ ಹಿನ್ನಡೆಯಾಯಿತು. ಎದುರಾಳಿ ಲೂಸಿಯಾ ಮತ್ತು ಪೌಲಾ ಎರಡನೇ ಸೆಟ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ 21-14ರಿಂದ ಗೆದ್ದರು. ಮೂರನೇ ಸೆಟ್‌ನಲ್ಲಿ ಮತ್ತೆ ದಾಳಿಗಿಳಿದ ಭಾರತ 21-13ರೊಂದಿಗೆ ಗೆದ್ದು ಎರಡನೇ ಸೆಟ್‌ಗೆ ಲಗ್ಗೆ ಹಾಕಿತು. ಮುಂದಿನ ಸೆಟ್‌ನಲ್ಲಿ ಈ ಜೋಡಿ, ಜಪಾನ್‌ನ ನಾಜಾಡೆ ಮತ್ತು ಮಿಯು ಅವರನ್ನು ಎದುರಿಸಲಿದೆ.

ಮುಖ್ಯ ಡ್ರಾಗೆ ರೌನಕ್: ಭಾರತದ ಉದಯೋನ್ಮುಖ ಆಟಗಾರ ರೌನಕ್ ಚೌಹಾಣ್ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಮಿಂಚುವುದರೊಂದಿಗೆ ಮೊದಲ ಸ್ಥಾನ ಪಡೆದು ಮುಖ್ಯ ಡ್ರಾಗೆ ಅರ್ಹರಾದರು. ಸತತ ಎರಡು ಗೆಲುವು ಸಾಧಿಸಿದ ಅವರು, ಮೊದಲಿಗೆ ಇಸೊಗಾಟ್ ಎರಡನೇ ಸುತ್ತಿನಲ್ಲಿ ಕುಷ್ಮೊ ಕುವಾನ್ ಅವರನ್ನು ಎದುರಿಸಿದ್ದರು. ದಿನದ ಮೊದಲ ಪಂದ್ಯದಲ್ಲಿ ಫ್ರಾನ್ಸ್‌ನ ಇಸೊಗಾಟ್ ರಾಯ್ ಅವರನ್ನು ಎದುರಿಸಿ 21-19, 21-16ರಿಂದ ಗೆದ್ದರು. ಎರಡನೇ ಪಂದ್ಯದಲ್ಲಿ ತೈವಾನ್‌ನ ಕುವಾನ್ ಅವರೊಂದಿಗೆ 13-21 21-14 21-10ರಿಂದ ಗೆದ್ದರು.

ಶುಭಮನ್ ಗಿಲ್‌ಗೆ 2ನೇ ಶ್ರೇಯಾಂಕ

ದುಬೈ: ಟೆಸ್ಟ್ ಹಾಗೂ ಏಕದಿನ ತಂಡಗಳ ನಾಯಕ ಶುಭಮನ್ ಗಿಲ್ ಅವರು ಏಕದಿನ ಮಾದರಿಯಲ್ಲಿ ನಂಬರ್ 1 ಆಗುವತ್ತ ಸಾಗಿದ್ದು, ಪ್ರಕಟಗೊಂಡ ಶ್ರೇಯಾಂಕ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದ್ದಾರೆ.

ಅಫ್ಘಾನಿಸ್ತಾನ ವಿರುದ್ಧದ ಪಂದ್ಯಗಳಲ್ಲಿ ಭರ್ಜರಿ ಪ್ರದರ್ಶನ ನೀಡಿರುವ ಅವರು, ತಮ್ಮ ಮೊದಲ ಸ್ಥಾನಕ್ಕೇರಲು ದೂರವೇನಿಲ್ಲ. ಮೊದಲಿನಿಂದಲೂ ಏಕದಿನ ಮಾದರಿಯಲ್ಲಿ ಪರಿಣಾಮಕಾರಿಯಾಗಿ ಪ್ರದರ್ಶನ ನೀಡಿರುವ ಗಿಲ್ ಅಫ್ಘಾನಿಸ್ತಾನ ವಿರುದ್ಧದ ಸರಣಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ ಆನಿಸಿದ್ದರು. ಈ ಬೆನ್ನಲ್ಲೇ ನ್ಯೂಜಿಲೆಂಡ್‌ನ ಡ್ಯಾರಿಲ್ ಮಿಚೆಲ್ ಅವರ ನಂತರದ ಸ್ಥಾನ ಪಡೆದಿದ್ದಾರೆ.

ತಂಡದ ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ಅಫ್ಘಾನಿಸ್ತಾನ ಸರಣಿ ಆಡದ ಬೆನ್ನಲ್ಲೇ ಒಂದು ಸ್ಥಾನ ಇಳಿದಿದ್ದಾರೆ. ಇಷ್ಟು ದಿನ ಎರಡನೇ ಸ್ಥಾನದಲ್ಲಿದ್ದ ಅವರು, 768 ಅಂಕಗಳೊಂದಿಗೆ ಮೂರನೇ ಸ್ಥಾನಕ್ಕಿಳಿದಿದ್ದಾರೆ. ರೋಹಿತ್ ಶರ್ಮಾ ನಾಲ್ಕನೇ ಸ್ಥಾನದಲ್ಲಿರುವ ಬೆನ್ನಲ್ಲೇ ಅಗ್ರ ಐದರಲ್ಲಿ ಮೂವರು ಭಾರತೀಯರಿರುವುದು ಭಾರೀ ಭರವಸೆ ಹೆಚ್ಚಿಸಿದೆ.

ಟೆಸ್ಟ್ ಬೌಲಿಂಗ್: ಬೂಮ್ರಾ ಸರಿಗಟ್ಟಿದ ಹೆನ್ರಿ: ಟೆಸ್ಟ್ ಬೌಲಿಂಗ್ ಶ್ರೇಯಾಂಕದಲ್ಲಿ ಗಮನಾರ್ಹ ಬದಲಾವಣೆಯಾಗಿದೆ. ವರ್ಷಾನುಗಟ್ಟಲೆ ನಂಬರ್ 1 ಆಗಿದ್ದ ಜಸ್‌ಪ್ರೀತ್ ಬೂಮ್ರಾ ಮೊದಲನೇ ಸ್ಥಾನದಲ್ಲಿದ್ದರೂ, ಅವರ ಸನಿಹಕ್ಕೂ ಯಾರೊಬ್ಬರು ಬಂದಿರಲಿಲ್ಲ. ಆದರೆ ಇತ್ತೀಚೆಗಷ್ಟೇ ಇಂಗ್ಲೆಂಡ್‌ನಲ್ಲಿ ನಡೆದಿದ್ದ ಟೆಸ್ಟ್ ಪಂದ್ಯದಲ್ಲಿ 11 ವಿಕೆಟ್ ಪಡೆದು ಗಮನ ಸೆಳೆದಿದ್ದರು. ಈ ಬೆನ್ನಲ್ಲೇ ನಂಬರ್ ಒನ್ ಸ್ಥಾನವನ್ನು ಬೂಮ್ರಾ ಅವರೊಂದಿಗೆ 870 ಅಂಕಗಳೊಂದಿಗೆ ಹಂಚಿಕೊಂಡಿದ್ದಾರೆ.

ಮಹಿಳೆಯರ ವಿಶ್ವಕಪ್ | ಇಂದು ಭಾರತ–ಬಾಂಗ್ಲಾ ಪಂದ್ಯ
ಭಾರತಕ್ಕೆ ಪುಟಿದೇಳುವ ಭರವಸೆ

ಬ್ರಿಸ್ಟಾಲ್(ಇಂಗ್ಲೆಂಡ್): ಎರಡು ಪಂದ್ಯಗಳಲ್ಲಿ ಗೆಲುವು ಸಾಧಿಸಿದ್ದರೂ ಕಳೆದ ಪಂದ್ಯದಲ್ಲಿ ಸೋಲಿನೊಂದಿಗೆ ನಿರಾಸೆ ಮೂಡಿಸಿರುವ ಭಾರತ ಮಹಿಳಾ ತಂಡವು ಗುರುವಾರದ ಮಹತ್ವ ಪಂದ್ಯದಲ್ಲಿ ಬಾಂಗ್ಲಾದೇಶವನ್ನು ಎದುರಿಸಲಿದೆ.

ಮೊದಲ ಪಂದ್ಯದಲ್ಲಿ ಪಾಕಿಸ್ತಾನ ಮತ್ತು ಎರಡನೇ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡವನ್ನು ಸೋಲಿಸಿ ವಿಶ್ವಕಪ್‌ನಲ್ಲಿ ದೊಡ್ಡ ಮುನ್ನಡೆ ಸಾಧಿಸಿದ್ದ ಭಾರತ ಮಹಿಳೆಯರ ತಂಡ ಕಳೆದ ಪಂದ್ಯದಲ್ಲಿ ದ.ಆಫ್ರಿಕಾ ವಿರುದ್ಧ ವಿರೋಚಿತ ಸೋಲನುಭವಿಸಿದ್ದು, ಗೆಲುವಿನ ಮೂಲಕ ಉತ್ತರಿಸಬೇಕಿದೆ. ಅತ್ತ ಬಾಂಗ್ಲಾದೇಶವು ಉಳಿಗಾಲಕ್ಕಾಗಿ ಹೋರಾಡಬೇಕಿದೆ. ಭಾರತದ ನಾಲ್ಕನೇ ಪಂದ್ಯ ಬ್ರಿಸ್ಟಾಲ್‌ನಲ್ಲಿ ನಡೆಯಲಿದೆ. ಭಾರತದ ಎಲ್ಲಾ ಪಂದ್ಯಗಳು ಸಂಜೆ ನಡೆಯಲಿವೆ.

ಮಂಧಾನ, ಕೌರ್, ಶೆಫಾಲಿ ಮತ್ತು ರಿಚಾ ಅವರ ಬ್ಯಾಟಿಂಗ್ ಬಲದೊಂದಿಗೆ ಭಾರತ ಕಣಕ್ಕಿಳಿಯುತ್ತಿದೆ. ಕಳೆದ ಪಂದ್ಯಗಳಲ್ಲಿ ಹಿನ್ನಡೆ ಅನುಭವಿಸಿರುವ ಬಾಂಗ್ಲಾದೇಶವು ಸಂಯೋಜಿತ ತಂಡದೊಂದಿಗೆ ಕಣಕ್ಕಿಳಿಯಲಿದೆ. ಗೆದ್ದರೆ ಭಾರತದ ಸೂಪರ್-8 ಬಹುತೇಕ ಖಚಿತವಾಗಲಿದೆ. ಅತ್ತ ಬಾಂಗ್ಲಾ ಗೆದ್ದರೆ ಸಮಾಧಾನ ಸಿಗಲಿದೆ.

ಭಾರತಕ್ಕೆ ಭರವಸೆ: ಮೂರು ಪಂದ್ಯಗಳಲ್ಲಿ ಸ್ಮೃತಿ ಮಂಧಾನ 159 ರನ್ ಗಳಿಸಿದ್ದಾರೆ. ಆ ಮೂಲಕ ಭಾರತದ ಭರವಸೆಯಾಗಿದ್ದು, ರನ್ ಗಳಿಸುವ ದೊಡ್ಡ ಜವಾಬ್ದಾರಿ ನಿಭಾಯಿಸಲು ಸಜ್ಜಾಗಿದ್ದಾರೆ. 92 ರನ್ ಗೂಡಿಸಿರುವ ಶೆಫಾಲಿ ವರ್ಮಾ ಕೂಡ ಪರಿಣಾಮಕಾರಿ ಪ್ರದರ್ಶನ ನೀಡುವುದಕ್ಕೆ ಸಿದ್ಧರಾಗಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಹರ್ಮನ್‌ಪ್ರೀತ್ ಕೌರ್ ಇನ್ನಷ್ಟು ಸ್ಫೋಟಕ ಬ್ಯಾಟಿಂಗ್ ಮಾಡಬೇಕಿದೆ. 72 ರನ್ ಮಾಡಿರುವ ಅವರು, ದೊಡ್ಡ ಇನ್ನಿಂಗ್ಸ್ ಕಟ್ಟಬೇಕಿದೆ. ಏಕದಿನ ವಿಶ್ವಕಪ್‌ನ ಗೆಲುವಿನ ರೂವಾರಿಯಾಗಿದ್ದ ಜೆಮಿಮಾ ರಾಡ್ರಿಗ್ಸ್ ಬ್ಯಾಟ್‌ನಿಂದ ರನ್ ಬರಬೇಕಿದೆ. ರಿಚಾ ಘೋಷ್ ಕೊನೆಯಲ್ಲಿ ಲಯದಲ್ಲಿದ್ದು, ಕೊನೆಯ ಓವರ್‌ಗಳಲ್ಲಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಈ ವರೆಗೂ 69 ರನ್ ಗಳಿಸಿದ್ದಾರೆ.

ಚರಣಿ ಬಲ: ಭಾರತಕ್ಕಿರುವ ದೊಡ್ಡ ಬಲವೇ ಶ್ರೀ ಚರಣಿ ಅವರ ಅದ್ಭುತ ಪ್ರದರ್ಶನ. ಪಾಕಿಸ್ತಾನ ವಿರುದ್ಧದ ಪಂದ್ಯದಿಂದಲೂ ಕರಾರುವಾಕ್ ದಾಳಿಯೊಂದಿಗೆ ಗೆಲುವಿನಲ್ಲಿ ಮಿಂಚುತ್ತಿರುವ ಅವರು, ಭಾರತದ ದೊಡ್ಡ ಶಕ್ತಿ. ಆಡಿರುವ ಮೂರೇ ಪಂದ್ಯಗಳಲ್ಲಿ ಈಗಾಗಲೇ 10 ವಿಕೆಟ್ ಕಿತ್ತಿದ್ದಾರೆ. ಉಳಿದಂತೆ ದೀಪ್ತಿ ಶರ್ಮಾ ಮೊದಲನೇ ಪಂದ್ಯದಲ್ಲಿ ಐದು ವಿಕೆಟ್ ಕಿತ್ತಿದ್ದರು. ಪರಿಣಾಮ ಅವರೂ ಭರ್ಜರಿ ಲಯದಲ್ಲಿದ್ದಾರೆ. ಬ್ಯಾಟಿಂಗ್‌ನಲ್ಲಿ ಮಿಂಚುವ ಶೆಫಾಲಿ ವರ್ಮಾ ಬೌಲಿಂಗ್‌ನಲ್ಲೂ ಮಿಂಚಿದ್ದಾರೆ. ಚರಣಿ ಅವರ ಬಲದೊಂದಿಗೆ ಭಾರತ ಗೆಲುವಿನ ಹಾದಿಯಲ್ಲಿರುವ ಭರವಸೆಯಲ್ಲಿದೆ.

ಪಿಚ್

ಇಂಗ್ಲೆಂಡ್‌ನ ಬ್ರಿಸ್ಟಾಲ್ ಕ್ರೀಡಾಂಗಣ ಸಮತೋಲಿತ ಟ್ರ್ಯಾಕ್ ಅನ್ನು ಹೊಂದಿದೆ. ಆಸ್ಟ್ರೇಲಿಯಾ ಅಂಥ ತಂಡಗಳು ಭರ್ಜರಿ ಬ್ಯಾಟಿಂಗ್ ಮಾಡಿದ್ದರೂ ಬೌಲಿಂಗ್ ಮಾಡುವ ವೇಳೆ ಎದುರಾಳಿಗಳು ಪರದಾಡಿದ್ದಾರೆ. ಹಾಗೆಂದರೆ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡನ್ನೂ ಮಾಡಬಹುದಾದ ಪಿಚ್ ಹೊಂದಿದೆ. ಮೊದಲು ಬೌಲಿಂಗ್ ಮಾಡುವ ತಂಡಕ್ಕೆ ಅಲ್ಪ ಲಾಭ ಸಿಗಲಿದೆ.

ಮೈಸೂರು ವಾರಿಯರ್ಸ್‌ಗೆ ಮೊದಲ ಗೆಲುವು

ಮೈಸೂರು/ಬೆಂಗಳೂರು: ಸತತ ಎರಡು ಸೋಲಿನ ಬಳಿಕ ಕೊನೆಗೂ ಗೆಲುವು ಸಾಧಿಸಿರುವ ಮೈಸೂರು ವಾರಿಯರ್ಸ್ ತಂಡವು ಮಹಾರಾಜ ಟ್ರೋಫಿ ಪಂದ್ಯಾವಳಿಯಲ್ಲಿ ಖಾತೆ ತೆರೆದಿದೆ. ಅತ್ತ ಬೆಂಗಳೂರು ಬ್ಲಾಸ್ಟರ್ಸ್ ಮೊದಲ ಸೋಲು ಕಂಡರೂ ಬುಧವಾರದ ಪಂದ್ಯದಲ್ಲಿ ಮತ್ತೆ ಗೆಲುವು ಸಾಧಿಸಿದೆ.

ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ ಮೈಸೂರು ದೊಡ್ಡ ಗೆಲುವು ಸಾಧಿಸಿತು. ಮೊದಲು ಬ್ಯಾಟಿಂಗ್ ಮಾಡಿ 203 ರನ್ ಗಳಿಸಿದ ಮೈಸೂರು ಬೆಂಗಳೂರು ತಂಡವನ್ನು 131 ರನ್‌ಗಳಿಗೆ ಆಲೌಟ್ ಮಾಡುವುದಕ್ಕೆ 16 ಓವರ್ ತೆಗೆದುಕೊಂಡಿತು. ಚೇತನ್ ಎಲ್.ಆರ್. ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. 60 ಬಾಲ್‌ಗಳಲ್ಲಿ 9 ಬೌಂಡರಿ, 7 ಸಿಕ್ಸರ್ ಬಾರಿಸಿ 100 ರನ್ ಗಳಿಸಿದರು. ಅತ್ತ ಕೆಪಿ ಕಾರ್ತಿಕ್ ಕೂಡ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. 41 ಬಾಲ್ ಎದುರಿಸಿದ ಕಾರ್ತಿಕ್ ಔಟಾಗದೆ 61 ರನ್ ಗಳಿಸಿದರು. ಗುರಿ ಬೆನ್ನತ್ತುವಾಗ ಬೆಂಗಳೂರು ಪರ ಸಮಿತ್ ದ್ರಾವಿಡ್ 30, ಪ್ರವೀಣ್ ದುಬೆ 36 ರನ್ ಗಳಿಸಿದರು. ಮೈಸೂರು ಪರ ಅರ್ವಿಂದ್ ಕುಮಾರ್ 17 ರನ್ ಮಾತ್ರಕ್ಕೆ 4 ವಿಕೆಟ್ ಕಿತ್ತರು.


ಮಂಗಳೂರು-ಬೆಂಗಳೂರು ಪಂದ್ಯದ ವೇಳೆ ಮಿಂಚಿದ ಸೂರಜ್ ಅಹುಜಾ.

ಮಂಗಳೂರು ವಿರುದ್ಧ ಗೆದ್ದ ಬ್ಲಾಸ್ಟರ್ಸ್: ಸಾಂಘಿಕ ಬ್ಯಾಟಿಂಗ್ ಪ್ರದರ್ಶನದೊಂದಿಗೆ ಮಂಗಳೂರು ತಂಡದ ಮೇಲೆ ಒತ್ತಡ ಹೇರಿದ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಮತ್ತೆ ಗೆಲುವಿನ ನಗೆ ಬೀರಿತು. ಮಂಗಳವಾರ ರಾತ್ರಿಯಷ್ಟೇ ಸೋಲನುಭವಿಸಿದ್ದ ಕಲ್ಯಾಣಿ ತಂಡವು, ಗೆಲುವಿನ ಹಾದಿಗೆ ಮರಳಿಯೇ ಬಿಟ್ಟಿತು.

ಮೈಸೂರಿನ ಶ್ರೀಕಂಠದತ್ತ ಒಡೆಯರ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 226 ರನ್ ಗಳಿಸಿತು. ರೋಹನ್ ಪಾಟೀಲ್ 30, ಕೃಷ್ಣನ್ ಶ್ರೀಜಿತ್ 59, ಸಮಿತ್ ದ್ರಾವಿಡ್ 39, ಶುಭಾಂಗ್ ಹೆಗ್ಡೆ 34 ಮತ್ತು ಪ್ರವೀಣ್ ದುಬೆ 45 ರನ್ ಗಳಿಸಿದರು. ಮಂಗಳೂರು ಪರ ಕೋದಂಡ ಅಜಿತ್ 3 ವಿಕೆಟ್ ಕಿತ್ತರು.

ಸೂರಜ್ ಹೋರಾಟ ವ್ಯರ್ಥ: ಗುರಿ ಬೆನ್ನತ್ತಿದ ಮಂಗಳೂರು ಕೂಡ ಹೋರಾಟ ನಡೆಸಿತು. 8 ಸಿಕ್ಸರ್ ಹಾಗೂ 5 ಬೌಂಡರಿಗಳನ್ನು ಬಾರಿಸಿದ ಮಂಗಳೂರು ವಿಕೆಟ್ ಕೀಪರ್ ಸೂರಜ್ ಅಹುಜಾ 38 ಬಾಲ್ ಮಾತ್ರದಲ್ಲಿ 96 ರನ್ ಬಾರಿಸಿದರು. ಆರಂಭಿಕರಿಂದ ರನ್ ಬರದಿದ್ದಾಗ ಮಿಂಚಿದ ಅವರು, ಗಮನ ಸೆಳೆದಿದ್ದಂತೂ ಸುಳ್ಳಲ್ಲ. ಅಜಿತ್ ಕೂಡ 27 ಬಾಲ್‌ಗಳಲ್ಲಿ 49 ರನ್ ಬಾರಿಸಿದರು. ಇವರಿಬ್ಬರ ಶತಪ್ರಯತ್ನ ಹೊರತಾಗ್ಯೂ 5 ವಿಕೆಟ್ ಕಳೆದುಕೊಂಡ ಮಂಗಳೂರು 20 ಓವರ್‌ಗಳಲ್ಲಿ 206 ರನ್ ಮಾತ್ರವೇ ಗಳಿಸಿತು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6025

ಎಡದಿಂದ ಬಲಕ್ಕೆ
1.ಮಂಚ-ಪಲ್ಲಂಗದ ಸಮಾನಪದ (3)
4.ಕಾಡ ಸಜ್ಜನರುಗಳನ್ನು ಮಾಡುವವನು (5)
6.ಜಲದಲ್ಲಿ ಹುಟ್ಟಿದ್ದು-ತಾವರೆ (3)
7.ಎಲ್ಲರ ಕಾಲೆಳೆಯುವ ಸಮಯ (3)
9.ನಾಲ್ಕುವರ್ಣಗಳಿಗಿಂತ ಮನುಷ್ಯಜಾತಿ (4)
10.ಈತ ದುರ್ಯೋಧನನ ಹೆಂಡತಿ (4)
12.ಗಣಪತಿಯಿಂದ ಹಾರೈಸಿಕೊಂಡ ಪತಿವ್ರತೆ (3)
14.ಒಂದು ವಿಷಯದಲ್ಲಿ ಪಂಡಿತನಾದ (3)
15.ವಧೂವರರ ನಡುವೆ ಹಿಡಿದ ಬಟ್ಟೆ (5)
17.ಉಗುರು ಮುಂತಾದವುಗಳಿಂದ ಗೀರು (3)
ಮೇಲಿನಿಂದ ಕೆಳಕ್ಕೆ
1.ಪರಿಹಾರ ಪಡೆದು ಮಾಡಿದ ಆಣೆ (4)
2.ಎಗರಿಸಿದ್ದು-ಲಪಟಾಯಿಸಿದುದು (4)
3.ತಂಪು-ನೆಗಡಿಯ ಸಮಾನಪದ (2)
4.ಇವರು ಒಳ್ಳೆಯ ಮಂದಿ (3)
5.ಕರ ತೀರದುದ್ದಕ್ಕೂ ಹೋದದ್ದು ಈ ಸಮುದ್ರದಂಡೆಯವರೆಗೆ (5)
8.ಕೌರವ-ಪಾಂಡವರ ಕಥೆ ಹೇಳುವ ಕಾವ್ಯ (5)
11.ಮಹಾರಾಷ್ಟ್ರ ಗಡಿಯಲ್ಲಿರುವ ವಿಜಯಪುರ ಜಿಲ್ಲೆಯ ತಾಲ್ಲೂಕು (3)
12.ಜೋರು ಮಾಡಿ ಹೆದರಿಸುವುದು (4)
13.ಅನ್ನದೊಂದಿಗೆ ಸೇವಿಸುವ ತೆಳ್ಳನೆಯ ಮೇಲೋಗರ (4)
16.ಸರಕನ್ನು ಹೊರದೇಶಕ್ಕೆ ಕಳಿಸುವುದು (2)

6024 ಉತ್ತರ

ಎಡದಿಂದ ಬಲಕ್ಕೆ:
1.ತೋರಣ
3.ಸುಗಂಧರಾಜ
5.ಸಹಿತ 7.ರಿಕ್ತ
8.ಗಣಪಣ್ಣ 9.ರಾಮಾಯಣ
11.ಕಂಸ 13.ನಿಬ್ಬಣ
15.ದಂತಧಾವನ
16.ಉದಾತ್ತ
ಮೇಲಿನಿಂದ ಕೆಳಕ್ಕೆ :
1.ತೋಟಾಪುರಿ 2.ಕಲಶ
3.ಸುಧೀರ 4.ರಾಜದೂತ
6.ಹಿರಿತನ 8.ಗದಗುಟ್ಟು
10.ಸಾಲಂಕೃತ
12.ಸಮುಚಿತ್ತ 13.ನಯನ
14.ಉದ್ಭವ

ಸಾರ್ವಜನಿಕರಿಗೆ ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಮನವಿ

5 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯ ಲಸಿಕೆ ಹಾಕಿಸಿ

• **ಶಿವಮೊಗ್ಗ :** ಪೋಷಕರು 5 ವರ್ಷದೊಳಗಿನ ತಮ್ಮ ಮಕ್ಕಳನ್ನು ಕಡ್ಡಾಯವಾಗಿ ಜೂನ್ 28ರಂದು ಪೋಲಿಯೋ ಲಸಿಕಾ ಕೇಂದ್ರಕ್ಕೆ ಕರೆದುಕೊಂಡು ಹೋಗಿ ತಪ್ಪದೇ ಲಸಿಕೆ ಹಾಕಿಸುವಂತೆ ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ತಮ್ಮ ಕಚೇರಿ ಸಭಾಂಗಣದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಡೆಸಲಿರುವ ಪಲ್ಸ್ ಪೋಲಿಯೊ ಲಸಿಕಾ ಆಂದೋಲನದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

5 ವರ್ಷದೊಳಗಿನ ಯಾವುದೇ ಮಗು ಪೋಲಿಯೊ ಲಸಿಕೆಯಿಂದ ಹೊರಗುಳಿಯದಂತೆ ವಿಶೇಷ ಕಾಳಜಿ ವಹಿಸಬೇಕು. ಜಿಲ್ಲೆಯಲ್ಲಿ ಐದು ವರ್ಷದೊಳಗಿನ ಒಟ್ಟು 1,23,388 ಮಕ್ಕಳು ಇದ್ದಾರೆ. 17 ಮೊಬೈಲ್ ಮತ್ತು 36 ಸಂಚಾರಿ ಕೇಂದ್ರಗಳು ಸೇರಿದಂತೆ ಒಟ್ಟು 1069 ಲಸಿಕಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಲಸಿಕೆ ನೀಡಲು 3889 ಸಿಬ್ಬಂದಿ ನೇಮಿಸಲಾಗಿದೆ. ಸ್ವಯಂ ಸೇವಕರ ಸೇವೆ ಪಡೆದುಕೊಳ್ಳಲಾಗುತ್ತಿದೆ. ಮೇಲ್ವಿಚಾರಣೆಗಾಗಿ 194 ವೈದ್ಯಕೀಯ ಅಧಿಕಾರಿಗಳು, ತಾಲ್ಲೂಕು ಆರೋಗ್ಯಾಧಿಕಾರಿ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಮೇಲ್ವಿಚಾರಕರನ್ನು ನಿಯೋಜಿಸಲಾಗಿದೆ ಎಂದರು.

ಜೂನ್ 28ರಂದು ಬಿಒಪಿವಿ ಲಸಿಕೆ ಬಳಸಿ ರಾಜ್ಯದಲ್ಲಿ ಪಲ್ಸ್ ಪೋಲಿಯೊ ಕಾರ್ಯಕ್ರಮವನ್ನು ಒಂದೇ ಸುತ್ತಿನಲ್ಲಿ ನಡೆಸಲಾಗುತ್ತಿದೆ. ದೇಶವು ಕಳೆದ 14 ವರ್ಷಗಳಿಂದ ಪೋಲಿಯೊ ಮುಕ್ತವಾಗಿದ್ದರೂ, ನೆರೆಯ ರಾಷ್ಟ್ರಗಳಲ್ಲಿ ಪೋಲಿಯೋ ವೈರಸ್ ಹರಡುವಿಕೆ ಇನ್ನೂ ನಿಯಂತ್ರಣಕ್ಕೆ ಬಾರದಿರುವುದರಿಂದ ಮುನ್ನೆಚ್ಚರಿಕೆ ಕ್ರಮ ಅತ್ಯಗತ್ಯವಾಗಿದೆ ಎಂದರು.

ಜೂನ್ 28 ರಂದು ಪೋಲಿಯೋ ಬೂತ್‌ಗಳಲ್ಲಿ ಲಸಿಕೆ ನೀಡಲಾಗುವುದು. ನಂತರದ 2 ರಿಂದ 3 ದಿನಗಳಲ್ಲಿ ಆರೋಗ್ಯ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ ಲಸಿಕೆ ವಂಚಿತ ಮಕ್ಕಳಿಗೆ ಲಸಿಕೆ ಹಾಕಲಿದ್ದಾರೆ. ವಲಸಿಗ ಮಕ್ಕಳು, ಹೆಚ್ಚು ಅಪಾಯದಂಚಿನಲ್ಲಿರುವ ಪ್ರದೇಶಗಳು ಹಾಗೂ ನಗರ ಪ್ರದೇಶದ ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳಿಗೆ ಎರಡು ದಿನಗಳ ಈ ಅವಧಿಯಲ್ಲಿ ವಿಶೇಷ ಆದ್ಯತೆ ನೀಡಲಾಗುವುದು ಎಂದರು.

ಅಧಿಕಾರಿಗಳಿಗೆ ಮನವಿ:

ಆರೋಗ್ಯ ಇಲಾಖೆ ಆಂದೋಲನವನ್ನು ಯಶಸ್ವಿಗೊಳಿಸಲು ಎಲ್ಲಾ ಇಲಾಖೆಗಳ ಸಹಕಾರ ಬಯಸಿದೆ. ಅಗತ್ಯ ಸಹಕಾರ ನೀಡುವಂತೆ ಸಾರಿಗೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪಂಚಾಯತ್ ರಾಜ್ ಇಲಾಖೆ, ಗ್ರಾಮ ಪಂಚಾಯತಿಗಳ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ನಗರದ ಸ್ವಯಂಸೇವಾ ಸಂಸ್ಥೆಗಳ ಸಹಯೋಗ ಪಡೆದುಕೊಳ್ಳಲಾಗುವುದು ಎಂದರು.

ಪಲ್ಸ್ ಪೋಲಿಯೋ ಕೇಂದ್ರಗಳಿಗೆ ಅಗತ್ಯ ಔಷಧಗಳನ್ನು ಸರಬರಾಜು ಮಾಡಲು, ಅಗತ್ಯ ವಾಹನಗಳನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಆರೋಗ್ಯ ಇಲಾಖೆಗೆ ನೀಡಬೇಕು. ಪೋಲಿಯೋ ಲಸಿಕೆ ಸಂಗ್ರಹಿಸಿರುವ ಆಸ್ಪತ್ರೆ ಹಾಗೂ ಲಸಿಕಾ ಸಂಗ್ರಹಣಾಗಾರಗಳಿಗೆ ನಿರಂತರ ವಿದ್ಯುತ್ ಸಂಪರ್ಕ ಇರುವಂತೆ ಮೆಸ್ಕಾಂ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ನಿಖಿಲ್, ಅಪರ ಜಿಲ್ಲಾಧಿಕಾರಿ ಅಭಿಷೇಕ್, ಜಿಪಂ ಉಪಕಾರ್ಯದರ್ಶಿ ಸುಜಾತಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಟರಾಜ್, ಡಾ. ಮಲ್ಲಪ್ಪ, ಡಾ.ನಾಗರಾಜ ನಾಯ್ಕ ಉಪಸ್ಥಿತರಿದ್ದರು.

ಡಾ. ಪ್ರಕೃತಿ ಮಂಚಾಲೆಯವರಿಗೆ ಪಿಎಚ್‌ಡಿ ಪದವಿ ಪ್ರದಾನ

• **ಶಿವಮೊಗ್ಗ:** ನಗರದ ದುರ್ಗಿಗುಡಿಯಲ್ಲಿರುವ ಕೃತ್ತಿ ಆಯುರ್ವೇದ ಆಸ್ಪತ್ರೆಯ ತಜ್ಞ ವೈದ್ಯೆ ಹಾಗೂ ಟಿಎಂಎಇಎಸ್ ಆಯುರ್ವೇದಿಕ್ ಕಾಲೇಜಿನ ಪ್ರಾಧ್ಯಾಪಕಿ ಮತ್ತು ಸಂಹಿತಾ ಸಿದ್ಧಾಂತ ವಿಭಾಗ ಮುಖ್ಯಸ್ಥೆ ಡಾ. ಪ್ರಕೃತಿ ಮಂಚಾಲೆ ಅವರಿಗೆ ಬೆಂಗಳೂರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪ್ರದಾನ ಮಾಡಲಾಗಿದೆ.

ಡಾ. ಪ್ರಕೃತಿ ಮಂಚಾಲೆ ಹುಬ್ಬಳ್ಳಿಯ ಆಯುರ್ವೇದ ಮಹಾವಿದ್ಯಾಲಯದ ಡಾ.ಜಿ.ಆರ್.ಜೋಶಿ ಅವರ ಮಾರ್ಗದರ್ಶನದಲ್ಲಿ ಆಯುರ್ವೇದದಲ್ಲಿ ಸೌಂದರ್ಯ ವರ್ಧಕಗಳ ವಿಮರ್ಶಾತ್ಮಕ ಅಧ್ಯಯನ ಮತ್ತು ನೆತ್ತಿಯ ಸೋರಿಯಾಸಿಸ್ ನಿರ್ವಹಣೆಯಲ್ಲಿ ಗುಂಜಾ ಭೃಂಗರಾಜ ತೈಲದ ಕ್ಲಿನಿಕಲ್ ಅಧ್ಯಯನ ಕುರಿತ ಸಂಶೋಧನೆಯನ್ನು ಪೂರ್ಣಗೊಳಿಸಿದ್ದಾರೆ. ಈ ಸಂಶೋಧನೆ ಆಯುರ್ವೇದದ ಪರಂಪರೆಯ ತತ್ವಗಳನ್ನು ಆಧುನಿಕ ಸೌಂದರ್ಯ ವಿಜ್ಞಾನದೊಂದಿಗೆ ಸಂಯೋಜಿಸುವ ಮಹತ್ವದ ಹೆಜ್ಜೆಯಾಗಿದೆ.

ಈ ಪದವಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ 28ನೇ ಘಟಿಕೋತ್ಸವದಲ್ಲಿ ಪ್ರದಾನ ಮಾಡಲಾಗಿದೆ. ಡಾ. ಪ್ರಕೃತಿ ಕಳೆದ 12 ವರ್ಷಗಳಿಂದ ಶಿವಮೊಗ್ಗದಲ್ಲಿ ಆಯುರ್ವೇದ ವೈದ್ಯಕೀಯ ಸೇವೆಯಲ್ಲಿದ್ದಾರೆ. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಅನೇಕ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದ್ದಾರೆ.

ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ಅಧ್ಯಕ್ಷ ಎಚ್.ಆರ್. ಬಸವರಾಜಪ್ಪ ಆಗ್ರಹ

ಕೆರೆಗಳಿಗೆ ನೀರು ತುಂಬಿಸಲು ಕ್ರಮ ಕೈಗೊಳ್ಳಿ

• **ಶಿವಮೊಗ್ಗ :** ತಾಲೂಕಿನ ಪುರದಾಳು ಕೆರೆ, ಬಾರೆ ಹಳ್ಳಿ, ಗೌಡನಕೆರೆಗಳಿಗೆ ನೀರು ತುಂಬಿಸುವ ತುಂಗಾ ಏತನೀರಾವರಿಯ ವಿದ್ಯುತ್ ಬಿಲ್ ಪಾವತಿಸಿ ಈ ಕೆರೆಗಳಿಗೆ ತಕ್ಷಣದಿಂದಲೇ ನೀರು ತುಂಬಿಸಲು ಕ್ರಮಕೈಗೊಳ್ಳುವಂತೆ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ಅಧ್ಯಕ್ಷ ಎಚ್.ಆರ್. ಬಸವರಾಜಪ್ಪ ಆಗ್ರಹಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತೀ ವರ್ಷ ಜೂನ್‌ನಿಂದಲೇ ಕೆರೆಗಳಿಗೆ ನೀರು ತುಂಬಿಸಲು ಇಲಾಖೆ ಕ್ರಮಕೈಗೊಳ್ಳುತ್ತಿತ್ತು. ಆದರೆ ಈ ಬಾರಿ ಸಣ್ಣ ನೀರಾವರಿ ಇಲಾಖೆ ಮೆಸ್ಕಾಂಗೆ 25.22 ಕೋಟಿ ರೂ. ಬಾಕಿ ಉಳಿಸಿಕೊಂಡಿದೆ. ಹೀಗಾಗಿ ಮೆಸ್ಕಾಂ ವಿದ್ಯುತ್ ಕಡಿತ ಮಾಡಿರುವುದರಿಂದ ಪಂಪ್ ಚಾಲನೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದರು.

28 ಹಳ್ಳಿಗಳ 7500 ಎಕರೆಗೆ ಏತ ನೀರಾವರಿಯಿಂದ ನೀರು ಹರಿಸಲಾಗುತ್ತದೆ. ಕಳೆದ 8 ವರ್ಷಗಳಿಂದ ಸುಸೂತ್ರವಾಗಿ ನಡೆಸಿಕೊಂಡು ಬಂದ ಈ ಯೋಜನೆಗೆ ಈಗ ವಿದ್ಯುತ್ ಶುಲ್ಕ ಪಾವತಿಸದೆ ರೈತರಿಗೆ ತೊಂದರೆಯಾಗುತ್ತಿದೆ. ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಹಂತಹಂತವಾಗಿ ಹಣ ಪಾವತಿಸಿ ಪಂಪ್ ಸೆಟ್ ಚಾಲನೆಗೊಳಿಸುವಂತೆ ಒತ್ತಾಯಿಸಿದರು.

ಈ ಬಾರಿ ಮಳೆ ಕಡಿಮೆಯಾಗುವುದರಿಂದ ಬರ ಆವರಿಸುವ ಆತಂಕವಿದೆ. ಬೇಸಿಗೆಗೆ ನೀರಿನ ಕೊರತೆಯಾಗುವ ಸಾಧ್ಯತೆ ಇದೆ. ಇದನ್ನು ನಿವಾರಿಸಲು ಈಗಿನಿಂದಲೇ ಕ್ರಮಕೈಗೊಳ್ಳಬೇಕು. ಇಲ್ಲದಿದ್ದರೆ ರೈತರು ಬೃಹತ್ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮಳೆ ಮಾಪನ ಯಂತ್ರ ಸರಿಪಡಿಸಿ : ಬೆಳೆ ವಿಮೆ ನೀತಿಯಲ್ಲಿ ಮಳೆಮಾಪನ ಅತೀ ಮುಖ್ಯವಾಗಿದ್ದರೂ ಜಿಲ್ಲೆಯಲ್ಲಿ ಕೆಟ್ಟು ಹೋಗಿರುವ ಮಳೆ ಮಾಪನ ಯಂತ್ರಗಳನ್ನು ಕೂಡಲೇ ಸರಿಪಡಿಸಬೇಕು. ಮಳೆಮಾಪನ ಯಂತ್ರಗಳ ಸೆನ್ಸಾರ್ ಕೆಟ್ಟು ಹೋಗಿದ್ದರೂ ಕೂಡ ಸರಿಪಡಿಸಿಲ್ಲ. ಈ ಬಗ್ಗೆ ತ್ವರಿತವಾಗಿ ಗಮನಹರಿಸಿ ಸರಿಪಡಿಸುವಂತೆ ಆಗ್ರಹಿಸಿದರು.

ಸಮರ್ಪಕವಾಗಿ ಮಳೆ ಮಾಪನ ಮಾಡದಿರುವುದರಿಂದ ನಷ್ಟಕ್ಕೊಳಗಾಗುವ ರೈತರು ಪರಿಹಾರ ಸಿಕ್ಕದೆ ಪರಿತಪಿಸುವಂತಾಗುತ್ತಿದೆ. ಕಳೆದ ವರ್ಷ ಅತಿವೃಷ್ಟಿಯಾಗಿ ಬೆಳೆ ನಷ್ಟವಾಗಿದ್ದರೂ ಕೂಡ ರೈತರಿಗೆ ಪರಿಹಾರ ಸಿಕ್ಕಿಲ್ಲ. ಈ ಬಾರಿ ಮಳೆ ಕೊರತೆಯಾಗಿ ಮತ್ತೊಂದು ರೀತಿಯ ನಷ್ಟ ಅನುಭವಿಸುವ ಸಾಧ್ಯತೆ ಇದೆ. ಇದನ್ನೇ ನೆಪ ಮಾಡಿಕೊಂಡು ವಿಮಾ ಕಂಪನಿಗಳು ಲೂಟಿ ಮಾಡಲಿವೆ ಎಂದರು.

ಸರ್ಕಾರ ಕೂಡಲೇ ಮಳೆಮಾಪನ ಯಂತ್ರಗಳನ್ನು ಸರಿಪಡಿಸಬೇಕು. ಸರ್ಕಾರಕ್ಕೆ ನಿಖರವಾದ ಅಂಕಿ ಅಂಶ ರವಾನೆಯಾಗುವಂತೆ ಕ್ರಮಕೈಗೊಳ್ಳುವಂತೆ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಕೆ. ರಾಘವೇಂದ್ರ, ಇ.ಬಿ. ಜಗದೀಶ್, ಸಿ. ಚಂದ್ರಪ್ಪ, ಕಸೆಟ್ಟಿ ರುದ್ರೇಶ್, ಪುರದಾಳು ನಾಗರಾಜ್, ರವಿ, ಆನಂದ, ಕುಮಾರ್ ಇದ್ದರು.

ಖಾಸಗಿ ಕಂಪನಿಗೆ ವಿದ್ಯುತ್ ವಿತರಣಾ ಪರವಾನಿಗೆ ಪ್ರಸ್ತಾವನೆಗೆ ವಿರೋಧ

• **ದಾವಣಗೆರೆ:** ಖಾಸಗಿ ಕಂಪನಿಗೆ ಕರ್ನಾಟಕ ರಾಜ್ಯದಲ್ಲಿ ಸಮಾನಾಂತರ ವಿದ್ಯುತ್ ವಿತರಣಾ ಪರವಾನಿಗೆ ನೀಡುವ ಪ್ರಸ್ತಾವನೆಯನ್ನು ಅಖಿಲ ಭಾರತ ಕಿಸಾನ್ ಸಭಾ ವಿರೋಧಿಸಿದೆ.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಆವರಗೆರೆ ಚಂದ್ರು ಮಾತನಾಡಿ, ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ವಿದ್ಯುತ್ ವಿತರಣಾ ವ್ಯವಸ್ಥೆಯು ಜನರ ಆಸ್ತಿಯಾಗಿದೆ. ಅದರ ಸಮರ್ಪಕ ಬಳಕೆ ಮತ್ತು ಸಂರಕ್ಷಣೆ ಸರ್ಕಾರ ಹಾಗೂ ನಿಯಂತ್ರಣ ಸಂಸ್ಥೆಗಳ ಜವಾಬ್ದಾರಿಯಾಗಿದೆ. ಹೀಗಿರುವಾಗ ಖಾಸಗಿ ಕಂಪನಿಗಳಿಗೆ ಸಮಾನಾಂತರ ವಿತರಣಾ ಪರವಾನಿಗೆ ನೀಡುವುದರಿಂದ ಮತ್ತೊಂದು ಪ್ರತ್ಯೇಕ ವಿದ್ಯುತ್ ಜಾಲ ನಿರ್ಮಾಣದ ಅಗತ್ಯ ಉಂಟಾಗುತ್ತದೆ. ಇದರಿಂದ ಸಾರ್ವಜನಿಕ ಹಣದಿಂದ ನಿರ್ಮಿಸಲಾಗಿರುವ ಉಪಕೇಂದ್ರ, ವಿತರಣಾ ಮಾರ್ಗ, ಟ್ರಾನ್ಸ್‌ಫಾರ್ಮರ್ ಮತ್ತಿತರೆ ಮೂಲಸೌಕರ್ಯಗಳು ಕಡಿಮೆ ಬಳಕೆಯಾಗುವ ಸಾಧ್ಯತೆ ಇದೆ ಎಂದರು.

ಸಮಾನಾಂತರ ವಿದ್ಯುತ್ ವಿತರಣಾ ವ್ಯವಸ್ಥೆಯಿಂದ ಲಾಭದಾಯಕ ನಗರ ಮತ್ತು ಕೈಗಾರಿಕಾ ಪ್ರದೇಶಗಳ ಗ್ರಾಹಕರನ್ನು ಖಾಸಗಿ ಕಂಪನಿಗಳು ಆಕರ್ಷಿಸುವ ಸಾಧ್ಯತೆ ಇರುವುದರಿಂದ ರಾಜ್ಯ ಸ್ವಾಮ್ಯದ ಎಸ್ಕಾಂ ಗಳ ಆದಾಯಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಬಹುದು. ಇದರ ಪರಿಣಾಮವಾಗಿ ಗ್ರಾಮೀಣ ಪ್ರದೇಶ, ಕೃಷಿ ಪಂಪ್‌ಸೆಟ್ ಹಾಗೂ ಗ್ರಾಹಕರಿಗೆ ನೀಡಲಾಗುತ್ತಿರುವ ಸಹಾಯಧನ, ಸಾಮಾಜಿಕ ಬದ್ಧತೆಗಳ ಮೇಲೆ ಒತ್ತಡ ಉಂಟಾಗುತ್ತದೆ. ವಿದ್ಯುತ್ ವಿತರಣೆಯು ಕೇವಲ ವ್ಯಾಪಾರ ಚಟುವಟಿಕೆ ಮಾತ್ರವಲ್ಲದೆ, ಕೃಷಿ, ಗ್ರಾಮೀಣಾಭಿವೃದ್ಧಿ, ಜನರ ಜೀವನೋಪಾಯ ಮತ್ತು ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದ ಸಾರ್ವಜನಿಕ ಅಗತ್ಯ ಸೇವೆಯಾಗಿದೆ ಎಂದು ಅವರು ತಿಳಿಸಿದರು.

ಸಂಘಟನೆಯ ಜಿಲ್ಲಾ ಖಜಾಂಚಿ ಹೆಚ್.ಜಿ.ಉಮೇಶ ಮಾತನಾಡಿ, ಟಾಟಾ ಪವರ್ ಕಂಪನಿ ಲಿಮಿಟೆಡ್ ಸಲ್ಲಿಸಿರುವ ಸಮಾನಾಂತರ ವಿದ್ಯುತ್ ವಿತರಣಾ ಪರವಾನಿಗೆ ಅರ್ಜಿಯನ್ನು ಸರ್ಕಾರ ಸಾರ್ವಜನಿಕ ಹಿತದೃಷ್ಟಿಯಿಂದ ತಿರಸ್ಕರಿಸಬೇಕು. ಖಾಸಗಿಯವರ ಸಹಭಾಗಿತ್ವಕ್ಕೆ ಕೋರಿಕೆ ಅರ್ಜಿ ಸಲ್ಲಿಸಿದವರು ಮತ್ತು ಶಿಫಾರಸ್ಸು ಮಾಡಿದವರ ವಿವರಗಳನ್ನು ಸಾರ್ವಜನಿಕವಾಗಿ ಚರ್ಚಿಸಬೇಕು. ಯಾವುದೇ ಖಾಸಗಿ ವಿತರಣಾ ಪರವಾನಿಗೆ ನೀಡುವ ಮೊದಲು ಗ್ರಾಹಕರು, ರೈತ ಮತ್ತು ಕಾರ್ಮಿಕ ಸಂಘಟನೆಗಳು ಹಾಗೂ ಸಾರ್ವಜನಿಕ ಪ್ರತಿನಿಧಿಗಳ ಅಭಿಪ್ರಾಯ ಪಡೆಯಬೇಕು. ರಾಜ್ಯದ ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿ ಅಗತ್ಯವಿರುವ ಕಡೆ ಸಾರ್ವಜನಿಕ ಹೂಡಿಕೆ ಮತ್ತು ಎಸ್ಕಾಂ ಗಳ ಆರ್ಥಿಕ ಸ್ಥಿರತೆ ರಕ್ಷಿಸುವ ಕ್ರಮಗಳನ್ನು ಕೈಗೊಳ್ಳಬೇಕು. ಕೃಷಿ ಮತ್ತು ಗ್ರಾಮೀಣ ಗ್ರಾಹಕರಿಗೆ ದೊರೆಯುತ್ತಿರುವ ವಿದ್ಯುತ್ ಸೇರಿದಂತೆ ಸಾಮಾಜಿಕ ಸೌಲಭ್ಯಗಳಿಗೆ ಯಾವುದೇ ಧಕ್ಕೆಯಾಗದಂತೆ ನೋಡಿಕೊಳ್ಳಬೇಕು. ವಿದ್ಯುತ್ ವಿತರಣಾ ಕ್ಷೇತ್ರದ ಖಾಸಗೀಕರಣದಿಂದ ಉಂಟಾಗಬಹುದಾದ ದೀರ್ಘಕಾಲೀನ ಪರಿಣಾಮಗಳ ಕುರಿತು ಸಾರ್ವಜನಿಕ ವಿಚಾರಣೆ ನಡೆಸಬೇಕು ಎಂದು ಆಗ್ರಹಿಸಿದರು.

ಮಾನ್ಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಭದ್ರಾವತಿ

ಅಸಲು ದಾವೆ ನಂ : 243/2025

ವಾದಿ : ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಭದ್ರಾವತಿ.

ವಿರುದ್ಧ

ಪ್ರತಿವಾದಿಗಳು : ಶ್ರೀ ಜುಲ್ಫಿಕರ್ ಅಹಮದ್ ಕೆ.ಜಿ. ಬಿನ್ ಅಬ್ದುಲ್ ಮುದಸ್ಸರ್, ವಾಸ: ಮನೆ ನಂ.34, ಯಕೀನ್ ಕಾಲೋನಿ, ಹಂಚಿಕೆ ರಸ್ತೆ, ಹೊಸಮನೆ, ಭದ್ರಾವತಿ.

ಸಾರ್ವಜನಿಕ ಪ್ರಕಟಣೆ

ವಾದಿಯು ಪ್ರತಿವಾದಿಗಳ ವಿರುದ್ಧ ಮೇಲ್ಕಂಡ ದಾವೆಯನ್ನು ದಾಖಲು ಮಾಡಿದ್ದು, ಸದರಿ ದಾವೆಯಲ್ಲಿ ಮೇಲ್ಕಂಡ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಈ ಸಂಬಂಧವಾಗಿ ಪ್ರತಿವಾದಿಗೆ ಮಾನ್ಯ ನ್ಯಾಯಾಲಯವು ನೋಟೀಸು, ಸಮನ್ಸ್, ವಗೈರೆಗಳನ್ನು ಜಾರಿ ಮಾಡುವ ಸಲುವಾಗಿ ಮತ್ತು ಪ್ರತಿವಾದಿಗೆ ನ್ಯಾಯಾಲಯಕ್ಕೆ ಹಾಜರಾಗುವ ಸಲುವಾಗಿ ಸಾರ್ವಜನಿಕ ಪ್ರಕಟಣೆ ಮುಖಾಂತರ ಹಾಜರಾಗಲು ಸೂಚಿಸುವಂತೆ ಈ ಸಂಬಂಧ ತಾವು ಸದರಿ ದಾವೆಯ ಬಗ್ಗೆ ಯಾವುದೇ ತಕರಾರು ಇದ್ದಲ್ಲಿ **ದಿನಾಂಕ:20-07-2026 ರಂದು ಆ ದಿನ ಬೆಳಿಗ್ಗೆ 11.00 ಘಂಟೆಗೆ** ಹಾಜರಾಗಿ ಅಥವಾ ತಮ್ಮ ಪರ ವಕೀಲರುಗಳ ಮುಖಾಂತರ ಹಾಜರಾಗಿ ತಮ್ಮ ತಕರಾರು ಸಲ್ಲಿಸತಕ್ಕದ್ದು. ಒಂದೊಮ್ಮೆ ಗೈರು ಹಾಜರಾದಲ್ಲಿ ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ವಾದಿಯ ಪರ ವಕೀಲರು
ಬಿ.ಎಸ್.ಹರೀಶ್
ವಕೀಲರು, ಭದ್ರಾವತಿ
ದಿನಾಂಕ:24-06-2026

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/-ಶಿರಸ್ತೇದಾರರು,
ಮಾನ್ಯ 2ನೇ ಹೆಚ್ಚುವರಿ ಪ್ರಧಾನ ನ್ಯಾಯಾಧೀಶರ ಪರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.
ಭದ್ರಾವತಿ

ಮಾನ್ಯ 2ನೇ ಹೆಚ್ಚುವರಿ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಹರಿಹರ

ಸಿ.ಆರ್.ಮಿಸ್.ನಂ.286/2026

ಅರ್ಜಿದಾರರು: ಬಸವರಾಜು ತಂದೆ ಸಿದ್ದಪ್ಪ ಕೋಳ್ಳಪ್ಪರ, ವಯಸ್ಸು ಸುಮಾರು 45 ವರ್ಷ, ವ್ಯವಸಾಯಗಾರರು, ವಾಸ: ಕುಣೆಬೆಳಕೆರೆ ಗ್ರಾಮ, ಹರಿಹರ ತಾಲ್ಲೂಕ್, ದಾವಣಗೆರೆ ಜಿಲ್ಲೆ

ವಿರುದ್ಧ

ಎದುರುದಾರರು : ಜನನ ಮತ್ತು ಮರಣ ನೋಂದಣಾಧಿಕಾರಿಗಳು ತಾಲ್ಲೂಕು ತಹಶೀಲ್ದಾರ್ ರವರ ಕಛೇರಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರ ತಂದೆಯಾದ **ಸಿದ್ದಪ್ಪ ಕೋಳ್ಳಪ್ಪರ ತಂದೆ ಹನುಮಂತಪ್ಪ, ತಾಯಿ ಸಣ್ಣವ್ವ ಹೆಂಡತಿ ಲಕ್ಷ್ಮವ್ವ,** ಇವರು **ದಿನಾಂಕ:01-07-1979** ರಂದು ಹರಿಹರ ತಾಲ್ಲೂಕು, ಕುಣೆಬೆಳಕೆರೆ ಗ್ರಾಮದಲ್ಲಿ ತಮ್ಮ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಸದರಿ ಅಂಶವನ್ನು ನೋಂದಾಯಿಸಿಕೊಂಡು ಮರಣ ಸಮರ್ಥನಾ ಪತ್ರ ನೀಡುವಂತೆ ಎದುರುದಾರರಿಗೆ ಆದೇಶಿಸಲು ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿ ಕುರಿತು ಯಾರದ್ದಾದರೂ ತಕರಾರಿದ್ದಲ್ಲಿ **ದಿನಾಂಕ:07-08-2026 ರಂದು ಬೆಳಿಗ್ಗೆ 11 ಗಂಟೆಗೆ** ಹಾಜರಾಗಿ ಅಥವಾ ವಕೀಲರ ಮುಖಾಂತರವಾಗಿ ಹಾಜರಾಗಿ, ಆಕ್ಷೇಪಣೆ ಸಲ್ಲಿಸಬಹುದು. ತಪ್ಪಿದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು. ನ್ಯಾಯಾಲಯದ ಅಪ್ಪಣೆ ಮೇರೆಗೆ ದಿನಾಂಕ:19-06-2026 ರಂದು ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು.
ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.
ನ್ಯಾಯಾಲಯ, ಹರಿಹರ
ಅರ್ಜಿದಾರರ ಪರ ವಕೀಲರು
ಚನ್ನಪ್ಪ.ಕೆ
ವಕೀಲರು, ಹರಿಹರ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರವರ ಕಛೇರಿ, ಯೋಜನಾ ವಿಭಾಗ,
ಜಯನಗರ 1 ನೇ ಕ್ರಾಸ್, ವಿನಾಯಕ ಹಾಲ್ ಎದುರುಗಡೆ ಧಾರವಾಡ-580001.
ಫೋನ್ ನಂ : 0836-2959474 E-mail :eepiudwd@gmail.com

ಕ್ರ.ಸಂ:ಕಾನಿಇಂ/ಯೋವಿಧಾ/ಸ.ಇಂ.2/2026-27/216 ದಿನಾಂಕ : 24-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರು, ಯೋಜನಾ ವಿಭಾಗ, ಧಾರವಾಡ ಇವರ ಕಛೇರಿಯಿಂದ ಕಾಮಗಾರಿಯ ಏಟಂ ರೇಟ್ ದರಗಳ ಟೆಂಡರನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರ ದ್ವಿ ಲಕೋಟೆಯಲ್ಲಿ ಇಚ್ಛೆಯುಳ್ಳ ನೋಂದಾಯಿತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಅನುದಾನವನ್ನು ಒದಗಿಸುತ್ತದೆ.

ಕಾಮಗಾರಿ ವಿವರಗಳು : ಇಂಡೆಂಟ್ ನಂ. 1) KRRDA/2025-26/RD/Work Indent 535/CALL-2,
ಟೆಂಡರಗಿಟ್ಟ ಮೊತ್ತ & ಮುಂಗಡ ಠೇವಣಿ: ಕೆ.ಪಿ.ಪಿ ಪೋರ್ಟಲ್‌ನಲ್ಲಿ ವೀಕ್ಷಿಸುವುದು.

ಕ್ಯಾಲೆಂಡರ್ ಆಫ್ ಇವೆಂಟ್ : (1) ಟೆಂಡರ್ ದಾಖಲೆಗಳನ್ನು ಡೌನಲೋಡ್ ಮಾಡಿಕೊಳ್ಳುವುದಕ್ಕಾಗಿ ದಿನಾಂಕ : **25-06-2026** (2) ಪ್ರಿ ಬಿಡ್ ಮೀಟಿಂಗ್ ದಿನಾಂಕ : **30-06-2026** ಬೆಳಿಗ್ಗೆ 11.00 ಗಂಟೆಗೆ (3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **04-07-2026** ಸಂಜೆ 4.30 ಗಂಟೆಯವರೆಗೆ (4) ಟೆಂಡರ್ ಬಿಡ್ ತೆರೆಯುವ ದಿನಾಂಕ : **06-07-2026** ಮುಂಜಾನೆ 11.00 ಗಂಟೆಗೆ.

ಲೋಕೋಪಯೋಗಿ ಇಲಾಖೆ/ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿಕೊಂಡ ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಕಾರ್ಯಪಾಲಕ ಇಂಜನೀಯರ್, ಯೋಜನಾ ವಿಭಾಗ, ಧಾರವಾಡ ಇವರನ್ನು ಸಂಪರ್ಕಿಸಬಹುದು. ಮಾಹಿತಿಯನ್ನು https://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- (ಬಿ.ಕೆ. ಓಲೇಕರ್)
ಕಾರ್ಯನಿರ್ವಾಹಕ ಅಭಿಯಂತರು,
ಯೋಜನಾ ವಿಭಾಗ, ಧಾರವಾಡ.

ವಾಕಾಸಂಇ/ಧಾರವಾಡ/354/ಕೆಎಸ್‌ಎಂಸಿಎ/2026-27

ಮಹಾನಗರ ಪಾಲಿಕೆ, ಕಲಬುರಗಿ
ದೂ.: 08472/ 278675 ಫ್ಯಾಕ್ಸ್ : 08472/ 260776 ಇ ಮೇಲ್ – itstaff_ulb_gulbarga@yahoo.com

No: KMP/TS-01/KKRDB Garden/01/2026-27 DATE: 23/06/2026

ಕೋರಿಜೆಂಡಮ್ ವಿಸ್ತರಣಾ ಅವಧಿ

ವಿಷಯ: ಕೆಪಿಪಿಪಿ ಪೋರ್ಟಲ್-2.00 (02) ರಲ್ಲಿ ಟೆಂಡರ್ ಸಲ್ಲಿಕೆಯನ್ನು ಮುಂದೂಡಲಾಗಿದೆ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ: 1) 56449/CALL-2 & 2) 56444/CALL-2

ಉಲ್ಲೇಖ: ಕಮಪಾ/ತಾ.ಶಾ-01/ಕೆ.ಕೆ.ಆರ್.ಡಿ.ಬಿ ಗಾರ್ಡನ್/01/2026-27 ದಿನಾಂಕ: 12/06/2026

ಮೇಲಿನ ವಿಷಯಕ್ಕೆ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಅಧಿಸೂಚನೆಯಲ್ಲಿ ಪ್ರಕಟವಾದ ಸಂ ಕಮಪಾ/ತಾ.ಶಾ-01/ಕೆ.ಕೆ.ಆರ್.ಡಿ.ಬಿ ಗಾರ್ಡನ್/01/2026-27 ದಿನಾಂಕ: 12/06/2026ರಂತೆ ಒಟ್ಟು 02 ಸಂಖ್ಯೆಯ ಕಾಮಗಾರಿಗಳು 2024-25 & 2025-26ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಮ್ಯಾಕ್ರೋ ಕ್ರಿಯಾ ಯೋಜನೆಯಡಿ ಟೆಂಡರ್ ದಿನಾಂಕಗಳನ್ನು ಕ್ಯಾಲೆಂಡರ್ ದಿನಾಂಕಗಳ ಪ್ರಕಾರ ಮುಂದೂಡಲಾಗಿದೆ.

1	ಪೂರ್ವಭಾವಿ ಸಭೆ ದಿನಾಂಕ: **22.06.2026** ರಂದು ಬೆಳಿಗ್ಗೆ 11:00 ಗಂಟೆಗೆ.	1	ಪೂರ್ವಭಾವಿ ಸಭೆ ದಿನಾಂಕ: **29.06.2026** ರಂದು ಬೆಳಿಗ್ಗೆ 11:00 ಗಂಟೆಗೆ.
2	ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **29.06.2026** ರಂದು ಸಾಯಂಕಾಲ 4:30 ಗಂಟೆಗೆ.	2	ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **07.07.2026** ರಂದು ಸಾಯಂಕಾಲ 4:30 ಗಂಟೆಗೆ.
3	ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: **30.06.2026** ರಂದು ಸಾಯಂಕಾಲ 04:35 ಗಂಟೆಗೆ.	3	ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: **08.07.2026** ರಂದು ಸಾಯಂಕಾಲ 04:35 ಗಂಟೆಗೆ.
4	ಆರ್ಥಿಕ ಬಿಡ್ ತೆರೆಯುವ ದಿನಾಂಕ: **01.07.2026** ರಂದು ಬೆಳಿಗ್ಗೆ 11:30 ಗಂಟೆಗೆ	4	ಆರ್ಥಿಕ ಬಿಡ್ ತೆರೆಯುವ ದಿನಾಂಕ: **09.07.2026** ರಂದು ಬೆಳಿಗ್ಗೆ 11:30 ಗಂಟೆಗೆ

ಸಹಿ/- ಕಾರ್ಯಪಾಲಕ ಅಭಿಯಂತರರು
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/242/ಕೆ.ಎಸ್.ಎಂ.ಸಿ.ಎ/2026-27

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಯಾದಗಿರ.
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ ರಾಜ್ ಇಂಜನೀಯರಿಂಗ್, ವಿಭಾಗ,
ಎಸ್.ಪಿ.ಎಮ್. ಹೋಟೆಲ್ ಎದುರುಗಡೆ, ಸ್ಟೇಷನ್ ರಸ್ತೆ, ಯಾದಗಿರಿ-585202.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಟೆಂಡರ್‌ಡಿವ/ಶಾಸ-1/2026-27/ 557 ದಿನಾಂಕ: 23.06.2026

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) KW- 4(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

1) ಕಾಮಗಾರಿಯ ಹೆಸರು ಇಂಡೆಂಟ್ ಸಂಖ್ಯೆ: ಸುರಪುರ ತಾಲೂಕಿನ ರತ್ನಗಿ ಎಸ್.ಸಿ.ವಾಡ್‌ದಿಂದ ಜಾಕ್‌ವೆಲ್ ವರೆಗೆ ಜಿ.ಟಿ.ರಸ್ತೆ ಮತ್ತು ಸಿ.ಡಿ ನಿರ್ಮಾಣ. (0.00 ದಿಂದ 2.50 ಕಿಮೀ ವರೆಗೆ). RDPR/2026-27/RD/WORK_INDENT26924 **2) ಲೆಕ್ಕ ಶೀರ್ಷಿಕೆ:** 2025-26ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಯೋಜನೆ **3) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ಮತ್ತು ಗರಿಷ್ಠ ರೂ. 225.00 ಲಕ್ಷ **4) ಗುತ್ತಿಗೆದಾರರ ದರ್ಜೆ:** 2ನೇ ದರ್ಜೆ ಮೇಲ್ಪಟ್ಟು **5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:** 24.06.2026 ರಿಂದ 04.07.2026 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲ) **7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 04.07.2026 ಸಾಯಂಕಾಲ 4:00 ಗಂಟೆವರೆಗೆ **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 06.07.2026 ಬೆಳಿಗ್ಗೆ 11:00 ನಂತರ **9) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್:** 10.07.2026 ಬೆಳಿಗ್ಗೆ 11:00 ನಂತರ **10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯಪಾಲಕ ಅಭಿಯಂತರರ ಕಛೇರಿ ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಎಸ್.ಪಿ.ಎಮ್. ಹೋಟೆಲ್ ಎದುರುಗಡೆ, ಸ್ಟೇಷನ್ ರಸ್ತೆ, ಯಾದಗಿರಿ-585202

ಸೂಚನೆ :- ಟೆಂಡರುಗೆಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳ ಹೊರತುಪಡಿಸಿ).

ಸಹಿ/- ಕಾರ್ಯಪಾಲಕ ಇಂಜನೀಯರರು,
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ,ಯಾದಗಿರ.

ವಾ.ಸಾ.ಸಂ.ಇ/ಯಾದಗಿರಿ/127/ಕೆ.ಎಸ್.ಎಂ.ಸಿ.ಎ/2026-27

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ದಾಮಪಾ/ಸಾಆವಿ/ಪೌ.ಕಾ./ಸಿಬ್ಬಂದಿ/3/ಸಿಆರ್/111/2026-27 ದಿನಾಂಕ:23-06-2026

ಅಧಿಸೂಚನೆ

ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ನೇರಪಾವತಿಯಡಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ನಡವಳಿ ಆದೇಶ ಸಂಖ್ಯೆ:**1572124/DMA/EST3/GRPD/5/2024**, ದಿನಾಂಕ: 13-01-2026 ಪ್ರಕಾರ ಕರ್ನಾಟಕ ರಾಜ್ಯ ಪತ್ರ ಅಧಿಸೂಚನೆ ಸಂಖ್ಯೆ: ನಅಇ 171 ಎಂಎನ್‌ಯು 2022(ಇ), ದಿನಾಂಕ:23.11.2022ರ ಅಧಿಸೂಚನೆ ಅನ್ವಯ ಮತ್ತು ಸರ್ಕಾರದ ಪತ್ರ ಸಂಖ್ಯೆ: ಯುಡಿಡಿ 188 ಎಂಎನ್‌ಯು 2022(ಇ) ದಿನಾಂಕ:20-12-2022 ಹಾಗೂ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 02 ಸೇಹಿಮ 2026, ದಿನಾಂಕ:13-05-2026 ರನ್ವಯ ದಾವಣಗೆರೆ ಮಹಾನಗರ ಪಾಲಿಕೆಗಳಲ್ಲಿ ದಿನಾಂಕ:07-08-2017 ಪೂರ್ವದಲ್ಲಿ ನೇಮಕಾತಿ ಹೊಂದಿ ಪ್ರಸ್ತುತ ನೇರಪಾವತಿಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಮಾತ್ರ ನೇರ ನೇಮಕಾತಿಗೆ ಅರ್ಹರಾಗಿರುತ್ತಾರೆ. ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ರಾಜ್ಯದ ಪಾಲಿಕೆಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು-2022ರಡಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ	ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ	ಅರ್ಹತೆಗಳು
1	ಪೌರಕಾರ್ಮಿಕರು (ವೇತನ ಶ್ರೇಣಿ: ರೂ. 27,000-46,675)	15	(1) ಕನ್ನಡ ಮಾತನಾಡಲು ಗೊತ್ತಿರಬೇಕು. (2) ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ನೇರಪಾವತಿ ಪೌರಕಾರ್ಮಿಕರು, ನೇರಪಾವತಿ ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ಕನಿಷ್ಠ 2 ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರುವ ಮತ್ತು ದಾವಣಗೆರೆ ಮಹಾನಗರ ಪಾಲಿಕೆಗಳಲ್ಲಿ ದಿನಾಂಕ: 07-08-2017 ರ ಪೂರ್ವದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿ ಅಥವಾ ವ್ಯಕ್ತಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. (3) ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 02 ಸೇಹಿಮ 2026, ದಿನಾಂಕ:13-05-2026 ರನ್ವಯ ಹುದ್ದೆಗಳ ವರ್ಗೀಕರಣ ಮಾಡಲಾಗಿದೆ. (4) ಕರ್ನಾಟಕ ರಾಜ್ಯ ಪತ್ರ ಅಧಿಸೂಚನೆ ಸಂಖ್ಯೆ: ನಅಇ 171 ಎಂಎನ್‌ಯು 2022(ಇ), ದಿನಾಂಕ: 23.11.2022ರ ಅಧಿಸೂಚನೆ ಜಾರಿಗೆ ಬಂದ ದಿನಾಂಕಕ್ಕೆ ಗರಿಷ್ಠ ವಯೋಮಿತಿ 55 ವರ್ಷಗಳನ್ನು ಮೀರತಕ್ಕದ್ದಲ್ಲ.

ಹುದ್ದೆಗಳ ವರ್ಗೀಕರಣ:

ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ 15 ಪೌರಕಾರ್ಮಿಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ವಿವರ

ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾ.ಸೈ	ಯೋ.ನಿ	ಕ.ಮಾ.ಅ	ಅಂ.ವಿ	ತೃ.ಲಿಂ	ಒಟ್ಟು
ಪ.ಜಾ	1	0	0	0	0	0	0	0	1
ಪ.ಪಂ	0	1	0	0	0	0	0	0	1
ಪ್ರ-1	0	0	0	0	0	0	0	0	0
ಪ್ರ-2ಎ	0	0	1	0	1	0	0	0	2
ಪ್ರ-2ಬಿ	0	0	0	1	0	0	0	0	1
ಪ್ರ-3ಎ	0	0	0	1	0	0	0	0	1
ಪ್ರ-3ಬಿ	0	1	0	0	0	0	0	0	1
ಸಾ.ಅ	1	3	3	0	0	0	1	0	8
ಒಟ್ಟು	2	5	4	2	1	0	1	0	15

ಅರ್ಜಿ ವಿವರ	ದಿನಾಂಕ	ಕಛೇರಿ ವಿಳಾಸ
ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ	24-06-2026	ದಾವಣಗೆರೆ ಮಹಾನಗರ ಪಾಲಿಕೆ ಕೇಂದ್ರ ಕಛೇರಿ, ರೈಲ್ವೆ ನಿಲ್ದಾಣ ಎದುರು, ಪಿ.ಬಿ ರಸ್ತೆ, ದಾವಣಗೆರೆ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	23-07-2026	

ವಿಶೇಷ ಸೂಚನೆ:
1. ಅಧಿಸೂಚನೆಯನ್ನು ದಾವಣಗೆರೆ ಮಹಾನಗರ ಪಾಲಿಕೆ ವೆಬ್‌ಸೈಟ್ www.davanagerecity.mrc. gov.in ಹಾಗೂ ಕೇಂದ್ರ ಕಛೇರಿ ಸೂಚನಾ ಫಲಕದಲ್ಲಿ ವೀಕ್ಷಿಸಬಹುದು.
2. ಈ ನೇಮಕಾತಿಯು ಸರ್ಕಾರದ/ಪೌರಾಡಳಿತ ನಿರ್ದೇಶನಾಲಯದಿಂದ ಕಾಲ ಕಾಲಕ್ಕೆ ಹೊರಡಿಸಲಾಗುವ ಆದೇಶ/ಸುತ್ತೋಲೆ/ಅಧಿಸೂಚನೆಗಳ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿದೆ.

ವಾಸಾಇ/ದಾವಣಗೆರೆ/175/
ಕೆಎಸ್‌ಎಂಸಿಎ/2026-27

ಸಹಿ/- ಅಧ್ಯಕ್ಷರು,
ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ
ಹಾಗೂ ಆಯುಕ್ತರು, ಮಹಾನಗರ ಪಾಲಿಕೆ ದಾವಣಗೆರೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನೀಯರರವರ ಕಚೇರಿ, ಕನೀನಿನಿ,
ಪಿಣ್ಣಾಂದ ಏತ ನೀರಾವರಿ ವಿಭಾಗ, ಕೆ.ಎ.ಡಿ. ವೃತ್ತ, ಗುಲಾಬಿ ದೇವಸ್ಥಾನದ
ಹಿಂದುಗಡೆ, ದಾಸನಕೊಪ್ಪ ಮುಖ್ಯ ರಸ್ತೆ, ಧಾರವಾಡ-580 001.
ಇ-ಮೇಲ್: eeslilddwd@gmail.com ಫೋನ್: 0836-2955347

No. EE/KNNL/PB/Kalaghatagi107/Tender/2026-27/249 Date: 23.06.2026

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ಪಿಣ್ಣಾಂದ ಏತ ನೀರಾವರಿ ವಿಭಾಗ ಧಾರವಾಡ ರವರು, ಅರ್ಹ ನೋಂದಾಯಿತ ಗುತ್ತಿಗೆದಾರರಿಂದ (individual /firm/company)" Survey, Investigation, Design, Supply, Erection, Testing & Commissioning of Kalaghatagi Tank Filling Scheme for filling up of 107 Tanks located on left bank and right bank of river by lifting water from Bedti river in Kalaghatagi taluk on Turn-key Basis - Phase - 1 work Consisting of the following components: Construction of Jackwell cum Pump House Vertical turbine pumps coupled to HT motors, power transformers, 33/6.6kv Electrical substation, 33 KV transmission line and 33 Kv Tapping point, Raising Main, pressure distribution network for filling up of 30 tanks on left bank through MS/HDPE pipes with Installation of surge protection system, Including Operation and Maintenance for five years after successful Commissioning of the entire system on turnkey basis" (ಜಿ.ಎಸ್.ಟಿ. ಹೊರತುಪಡಿಸಿ ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.45.09 ಕೋಟಿಗಳು) ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂ ರೇಟ್ ಆಧಾರದ ಮುಖಾಂತರ ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ಕೆ.ಪಿ.ಪಿ.ಪಿ. ವೆಬ್‌ಸೈಟ್ (http://kppp.karnataka.gov.in) ಮುಖಾಂತರವೇ ದಿನಾಂಕ: 07/07/2026 ಬೆಳಗ್ಗೆ 11.00 ರಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 07/08/2026ರ ಸಂಜೆ 4.00 ಗಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಪೂರ್ವಭಾವಿ ಸಭೆಯನ್ನು ದಿನಾಂಕ: 18/07/2026ರಂದು ಬೆಳಗ್ಗೆ 11.00 ರಿಂದ 1.00 ಗಂಟೆಯವರೆಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, 4ನೇ ಮಹಡಿ, ಕಾಫಿ ಬೋರ್ಡ್ ಕಟ್ಟಡ, ಬೆಂಗಳೂರು ಇವರ ಕಚೇರಿಯಲ್ಲಿ ಜರುಗಿಸಲಾಗುವುದು. ತಾಂತ್ರಿಕ ಟೆಂಡರ್‌ಗಳನ್ನು ದಿನಾಂಕ: 10/08/2026 ರಂದು ಬೆಳಗ್ಗೆ 11.00 ಗಂಟೆಗೆ ಹಾಗೂ ಆರ್ಥಿಕ ಟೆಂಡರ್‌ಗಳನ್ನು ದಿನಾಂಕ: 14/08/2026 ರಂದು ಬೆಳಗ್ಗೆ 11.00 ಗಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟೆಂಡರ್‌ನಲ್ಲಿ ಯಾವುದೇ ಬದಲಾವಣೆ/ತಿದ್ದುಪಡಿಗಳು ಇದ್ದಲ್ಲಿ ವಿದ್ಯುನ್ಮಾನ ಸಂಗ್ರಹಣೆ (KPP portal) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ರದ್ದುಗೊಳಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/- (ಮಂಜುನಾಥ ಬಿ.)
ಕಾರ್ಯಪಾಲಕ ಇಂಜಿನೀಯರ್,
ಕನೀನಿನಿ, ಪಿಣ್ಣಾಂದ ಏತ ನೀರಾವರಿ ವಿಭಾಗ,
ಧಾರವಾಡ.

ವಾ.ಸ.ಇ./ಧಾರವಾಡ/
348/2026-27/[illegible]

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ತಾಂತ್ರಿಕ ಸಹಾಯಕರು, ದಾವಣಗೆರೆ ವಿಭಾಗ, ದಾವಣಗೆರೆ .

ದೂರವಾಣಿ ಸಂಖ್ಯೆ: 08192-262527 ಇ-ಮೇಲ್:- dcfdvg@gmail.com

ಸಂಖ್ಯೆ: ಸಅಸಂ/ಟೆಂಡರ್/ಐದ/2026-27 ದಿನಾಂಕ: 23-06-2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

2026-27ನೇ ಸಾಲಿಗೆ ದಾವಣಗೆರೆ ಅರಣ್ಯ ವಿಭಾಗ ವ್ಯಾಪ್ತಿಯ ಇಂದಿರಾ ಪ್ರಿಯದರ್ಶಿನಿ ಪ್ರಾಣಿ ಸಂಗ್ರಹಾಲಯ, ಆನಗೋಡು ಇಲ್ಲಿಯ ಕಛೇರಿಗೆ ಕಂಪ್ಯೂಟರ್ ಆಪರೇಟರ್, ಜೂ ಸ್ವಚ್ಛತಾಗಾರ ಹಾಗೂ ಗಾರ್ಡನರ್ ನೌಕರರನ್ನು ಒದಗಿಸಲು ದಿನಾಂಕ : 23-06-2026 ರಂದು ಪ್ರಕಟಣೆ ಹೊರಡಿಸಿ, ದಿನಾಂಕ: 01-07-2026 ರಂದು ಬೆಳಗ್ಗೆ 11:00 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ದಿನಾಂಕ: 03-07-2026ರ ಟೆಂಡರ್‌ನಲ್ಲಿ ಯಾರೂ ಭಾಗವಹಿಸದ ಸಂದರ್ಭದಲ್ಲಿ ಮರು ಟೆಂಡರನ್ನು ದಿನಾಂಕ: 13-07-2026 ರಂದು ಬೆಳಗ್ಗೆ 11:00 ಗಂಟೆಯವರೆಗೆ ನಿಗಧಿಪಡಿಸಿ ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ವಾಇಇ/ದಾವಣಗೆರೆ/173/
ಕೆಎಸ್‌ಎಂಸಿಎ/2026-27

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಹಾಗೂ ತಾಂತ್ರಿಕ ಸಹಾಯಕರು, ದಾವಣಗೆರೆ.

ಮಾನ್ಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಶೃಂಗೇರಿ

ಕ್ರಿಮಿನಲ್ ಮಿಸ್. ನಂ : 22/2026

ಪಕ್ಷಕಾರ

ಅರ್ಜಿದಾರ : ಕೆ.ಎಸ್.ರವಿ ಬಿನ್ ಸೋಮಪ್ಪ, ಸುಮಾರು 54 ವರ್ಷ, ಕಿಕ್ರೆ, ಕಿಕ್ರೆ ಗ್ರಾಮ, ಮೆಣಸೆ ಅಂಚೆ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

ಎದುರುದಾರರು : 1) ತಹಶೀಲ್ದಾರ್, ಶೃಂಗೇರಿ, ಶೃಂಗೇರಿ ತಾಲ್ಲೂಕು. 2)ಪ್ರೇಮಾ ಮಹೇಶ್ ಮುಲ್ಯ, ಕೋಂ ಮಹೇಶ್ ಶೇಷಪ್ಪ ಮುಲ್ಯ, ಸುಮಾರು 51 ವರ್ಷ, ಕಿಕ್ರೆ, ಕಿಕ್ರೆ ಗ್ರಾಮ, ಮೆಣಸೆ ಅಂಚೆ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. 3)ವಿಜಯ ಎಸ್ ಮುಲ್ಯ ಬಿನ್ ಸೋಮಪ್ಪ, ಸುಮಾರು 50 ವರ್ಷ, ಗೋಟಖಿಂಡಿ ಗಲ್ಲಿ, ಅಥಣಿ,ಬೆಳಗಾವ್-591304. 4) ಲತಾ ಕೆ ಕೋಂ ಕರುಣಾಕರ ಎಂ. ಸುಮಾರು 44 ವರ್ಷ, 37/1 ಎಸ್ ಆರ್‌ಎ ಬಿಲ್ಡಿಂಗ್, 3ನೇ ಮುಖ್ಯ ರಸ್ತೆ, ಸಾಕಮ್ಮ ಗಾರ್ಡನ್, ಬಸವನಗುಡಿ, ಬೆಂಗಳೂರು ದಕ್ಷಿಣ, ಬೆಂಗಳೂರು. 5)ಕಿಶೋರ್ ಬಿನ್ ಸತೀಶ್, ಸುಮಾರು 31 ವರ್ಷ, ಪಡುಬೆಳ್ಳೆ, ಮೂಡುಬೆಳ್ಳೆ ಗ್ರಾಮ, ಕುರ್ಕಾಲು, ಕುಂಜಾರುಗಿರಿ, ಉಡುಪಿ ಜಿಲ್ಲೆ-574105. 6)ಕಿರಣ್ ಮುಲ್ಯ ಬಿನ್ ಸತೀಶ್, ಪಡುಬೆಳ್ಳೆ, ಮೂಡುಬೆಳ್ಳೆ ಗ್ರಾಮ, ಕುಂಜಾರುಗಿರಿ ಅಂಚೆ, ಉಡುಪಿ ಜಿಲ್ಲೆ-574105.

ಸೂಚನೆ

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರಾದ ಕೆ.ಎಸ್.ರವಿ ರವರ ಅಣ್ಣ ಲೇಟ್ ಸತೀಶ್ ಕುಮಾರ್ ಬಿನ್ ಸೋಮಪ್ಪ ಇವರು **ದಿನಾಂಕ:18-04-2000** ರಲ್ಲಿ ಅವರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಈ ಸಂಬಂಧ ಮರಣ ದೃಢೀಕರಣ ಪತ್ರ ಪಡೆಯುವ ಉದ್ದೇಶದಿಂದ ಮೇಲ್ಕಂಡ ಪ್ರಕರಣವನ್ನು ಶೃಂಗೇರಿ ನ್ಯಾಯಾಲಯದಲ್ಲಿ ಅರ್ಜಿದಾರರು ಸಲ್ಲಿಸಿದ್ದು, **ದಿನಾಂಕ:25-07-2026**ಕ್ಕೆ ಪ್ರಕರಣವು ವಿಚಾರಣೆಗೆ ನಿಗದಿಯಾಗಿರುತ್ತದೆ. ಯಾರಾದರೂ ಹಿತಾಸಕ್ತಿಯುಳ್ಳವರು ಈ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಬಹುದಾಗಿರುತ್ತದೆ. ಇಲ್ಲವಾದಲ್ಲಿ ನ್ಯಾಯಾಲಯವು ಸೂಕ್ತ ಆದೇಶವನ್ನು ಪ್ರಕರಣವನ್ನು ಧರಿಸಿ ನೀಡಲಿದೆ.

ಅರ್ಜಿದಾರರ ಪರ ನ್ಯಾಯವಾದಿ
ಪ್ರದೀಪ್.ಕೆ. ವಕೀಲರು,
ಬ್ಯಾಂಕ್ ಆಫ್ ಬರೋಡ ಮುಂಭಾಗ
ಭಾರತಿ ಬೀದಿ, ಶೃಂಗೇರಿ-577139

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು,
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಶೃಂಗೇರಿ

ಮಾನ್ಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಶಿವಮೊಗ್ಗ

ಸಿ.ಮಿಸ್. ನಂ : 317/2026

ಅರ್ಜಿದಾರರು: 1)ರಾಜೇಶ ಬಿ. ಬಿನ್ ಈರಪ್ಪ 51 ವರ್ಷ, ವಾಸ: ಉಪ್ಪಾರಕೇರಿ, ಕುಂಸಿ ಗ್ರಾಮ, ಶಿವಮೊಗ್ಗ ತಾಲ್ಲೂಕು ಮತ್ತು ಜಿಲ್ಲೆ, 2)ಬಸವರಾಜ ಬಿನ್ ಈರಪ್ಪ, 57 ವರ್ಷ, ವಾಸ: ಉಪ್ಪಾರ ಬೀದಿ, ಕುಂಸಿ ಗ್ರಾಮ, ಶಿವಮೊಗ್ಗ ತಾಲ್ಲೂಕು ಮತ್ತು ಜಿಲ್ಲೆ, 3)ಸುಜಾತ ಎಸ್.ಆರ್. ಬಿನ್ ಈರಪ್ಪ, ಕೋಂ ರಾಜಪ್ಪ ಎಸ್.ಹೆಚ್.39ವರ್ಷ, ವಾಸ: ಉಪ್ಪಾರ ಬೀದಿ, ಕುಂಸಿ ಗ್ರಾಮ, ಶಿವಮೊಗ್ಗ ತಾಲ್ಲೂಕು ಮತ್ತು ಜಿಲ್ಲೆ, 4)ಲಕ್ಷ್ಮಿ @ ಇಂದುಮತಿ ಬಿನ್ ಈರಪ್ಪ, ಕೋಂ ಕರಿಯಪ್ಪ 43 ವರ್ಷ, ವಾಸ: ಹೊಳೆಹೊನ್ನೂರು ಗ್ರಾಮ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ವಿರುದ್ಧ

ಎದುರುದಾರರು : ತಹಶೀಲ್ದಾರ್, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಅರ್ಜಿಯನ್ನು ಸಲ್ಲಿಸಿ ಅರ್ಜಿದಾರರ ಅಪ್ಪನಾದ **ಈರಪ್ಪ ಬಿನ್ ಸೋಮಣ್ಣ** ಇವರು **ದಿನಾಂಕ:20-09-1972** ರಂದು ಮರಣ ಹೊಂದಿದ್ದು, ಆ ಸಂಬಂಧ ಮರಣ ಸಮರ್ಥನಾ ಪತ್ರ ಪಡೆಯಲು ಆದೇಶಿಸಬೇಕೆಂದು ಮೇಲ್ಕಂಡ ನ್ಯಾಯಾಲಯದಲ್ಲಿ ಕೋರಿಕೊಂಡಿರುತ್ತಾರೆ. ಸದರಿ ಮರಣ ಸಮರ್ಥನಾ ಪತ್ರ ನೀಡುವಲ್ಲಿ ಯಾರದ್ದಾದರೂ ತಂಟೆ ತಕರಾರು ಇದ್ದಲ್ಲಿ ಮೇಲ್ಕಂಡ ನ್ಯಾಯಾಲಯದಲ್ಲಿ **ದಿನಾಂಕ:25-07-2026 ರಂದು ಬೆಳಗ್ಗೆ 11 ಗಂಟೆ** ಹಾಜರಾಗೀ ತಮ್ಮ ಅನುಮತಿ ಪಡೆದ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸುವುದು. ತಪ್ಪಿದ್ದಲ್ಲಿ ಪ್ರಕರಣವನ್ನು ಇತ್ಯರ್ಥ ಪಡಿಸಲಾಗುವುದು ಎಂದು ತಿಳಿಯುವುದು.

ಅರ್ಜಿದಾರರ ಪರ ವಕೀಲರು
ಮಡಿವಾಳರ ಬಸವಣ್ಣಪ್ಪ
ವಕೀಲರು, ಶಿವಮೊಗ್ಗ
ದಿನಾಂಕ:10-06-2026

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/-ಶಿರಸ್ತೇದಾರರು,
ಮಾನ್ಯ 2ನೇ ಹೆಚ್ಚುವರಿ ನ್ಯಾಯಾಲಯದ
ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.
ಶಿವಮೊಗ್ಗ

ಪುರಸಭೆ ಕಾರ್ಯಾಲಯ, ರೋಣ

ರೋಣ - 582209. ಜಿಲ್ಲೆ ಗದಗ. ದೂರವಾಣಿ : 08381-267234
ಇಮೇಲ್ : itstaff_ulb_ron@yahoo.in

ಸಂಖ್ಯೆ : ಪು.ಸ.ರೋ./C.M.I.D.P. & Scarcity/ಟೆಂ/2026-27
ದಿನಾಂಕ : 23-06-2026

ಮರು ಟೆಂಡರ್ ಪ್ರಕಟಣೆ

(ಕೆ.ಪಿ.ಪಿ. ಪೋರ್ಟಲ್ ಮುಖಾಂತರ)

ರೋಣ ಪುರಸಭೆಯಿಂದ ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ - 2000 ರ ಪ್ರಕಾರ "ಕೆ.ಪಿ.ಪಿ. ಪೋರ್ಟಲ್" ಪದ್ಧತಿಯಲ್ಲಿ ಸನ್ 2025-26 ನೇ ಸಾಲಿನ **CMIDP & SFC Scarcity** 2026-27 ಅನುದಾನದಲ್ಲಿ ಮಂಜೂರಾದ ಕ್ರಿಯಾಯೋಜನೆಯ ಕಾಮಗಾರಿಗಳ ನಿರ್ವಹಣೆಗಾಗಿ ಕೆ.ಡಬ್ಲ್ಯು-1, ಕೆ.ಡಬ್ಲ್ಯು-3, "ಕೆ.ಪಿ.ಪಿ. ಪೋರ್ಟಲ್" ನೊಂದಾಯಿತ ಅರ್ಹ ಗುತ್ತಿಗೆದಾರರು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರನ್ನು "ಕೆ.ಪಿ.ಪಿ. ಪೋರ್ಟಲ್" ವೆಬ್‌ಸೈಟ್ : **www.ronatown.mrc.gov.in/Tenders** ಅಥವಾ **http://kppp.karnataka.gov.in** ಮೂಲಕ ಷರತ್ತುಗಳಂತೆ ಟೆಂಡರನಲ್ಲಿ ಭಾಗವಹಿಸಲು ಪ್ರಕಾರ ಪಡಿಸಲಾಗಿದೆ.

ಕ್ರ. ನಂ.	ಇಂಡೆಂಟ್ ನಂಬರ್	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಮೀಸಲಾತಿ
	CMIDP		
01	DMA/2025-26/OW/WORK_INDENT52995/CALL-2	84.00	SC
02	DMA/2025-26/OW/WORK_INDENT52998/CALL-2	74.30	ST
	SFC Scarcity 2026-27		
01	DMA/2026-27/WS/WORK_INDENT58373/CALL-2	6.00	Other
	Total	164.30	

ನಿರ್ಧಾರಿತ ದಿನಾಂಕಗಳ ವಿವರ : 1) ದಿನಾಂಕ : 10-07-2026 ರ ಸಂಜೆ 5.30 ಘಂಟೆವರೆಗೆ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್‌ಗೆ ಅರ್ಜಿ ಸಲ್ಲಿಸಬಹುದು. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 13-07-2026. 3) ಆರ್ಥಿಕ ಬಿಡ್ ತೆರೆಯುವ ದಿನಾಂಕ : 15-07-2026.

ಸೂಚನೆ : ಸದರ ಟೆಂಡರಗಳಿಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಣೆ ಮಾಡಲಾಗುವುದು.

ಸಹಿ/- ಮುಖ್ಯಾಧಿಕಾರಿಗಳು,
ಪುರಸಭೆ, ರೋಣ.

ಸಹಿ/- ಆಡಳಿತಾಧಿಕಾರಿಗಳು,
ಪುರಸಭೆ, ರೋಣ.

[illegible]/2026-27

ಕರ್ನಾಟಕ ಸರ್ಕಾರ

ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ, ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

ಸಂಖ್ಯೆ: ಎಸ್‌ಯುಪಿ(1)C-49/2026-27 ದಿನಾಂಕ: 02-06-2026

ಟೆಂಡರ್ ಅಧಿಸೂಚನೆ (ದ್ವಿ-ಲಕೋಟೆ ಪದ್ಧತಿಯಲ್ಲಿ)
(ಕೆಪಿಪಿ. ಕರ್ನಾಟಕ ಪೋರ್ಟಲ್ ಮುಖಾಂತರ ಮಾತ್ರ)

ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ಇಲ್ಲಿನ ವಿವಿಧ ವಿಭಾಗದ ರೋಗಿಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಬೇಕಾಗುವ Consumables ಗಳ ಟೆಂಡರ್ ಕರೆಯಲಾಗಿದೆ. ಕೆಪಿಪಿ. ಕರ್ನಾಟಕ ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 14.07.2026 (ಮಧ್ಯಾಹ್ನ 4.30 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.in ನ್ನು ಸಂಪರ್ಕಿಸಲು ಕೋರಿದೆ.

Tender number: DHFWS/2026-27/IND2514

ಸಹಿ/- ಸದಸ್ಯ ಕಾರ್ಯದರ್ಶಿ, ಆರೋಗ್ಯ ರಕ್ಷಾ ಸಮಿತಿ ಹಾಗೂ
ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರು,
ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

DIPR/DK/KSMCA/408/
26-27 dt. 24.06.2026

ಪ್ರಮಾಣ ಪತ್ರ

ಇದರಲ್ಲಿ ನಾನು **ಕಾಳಿಂಗಪ್ಪ ಮಲ್ಲಪ್ಪ ಅಲದಗೇರಿ** ವಯಸ್ಸು: 57 ವರ್ಷ, ಉ:ಶಿಕ್ಷಕ ಸಾ: ಉಕ್ಕುಂದ ತಾ: ರಾಣೇಬೆನ್ನೂರು ಜಿ: ಹಾವೇರಿ ಆದ ನಾನು ಮಾಡುವ ಪ್ರಮಾಣ ಪತ್ರ ಏನೆಂದರೆ, ಇದರಲ್ಲಿ ನಾನು ಈ ಮೇಲ್ಕಂಡ ವಿಳಾಸದಲ್ಲಿ ಖಾಯಂ ನಿವಾಸಿ ಆಗಿರುತ್ತೇನೆ. ನನ್ನ ಮಗಳ ಜನನಪ್ರಮಾಣ ಪತ್ರದಲ್ಲಿ ನನ್ನ ಮಗಳ ಹೆಸರು **ಶ್ರೇಯಾಂಕ ಕೆ.** ಕಲಂ 01 05 ಮತ್ತು 06 ತಪ್ಪಾಗಿ ನಮೂದಾಗಿದ್ದು, ಕಾರಣ, ಅದನ್ನು ಈ ಕೆಳಗಿನಂತೆ ನಮೂದಾಗಬೇಕು. ನನ್ನ ಮಗಳ ಜನನ **ದಿನಾಂಕ:24-11-2012** ರಂದು ಜನನ ಹೊಂದಿರುತ್ತಾಳೆ. ನೋಂದಣಿ ಸಂಖ್ಯೆ: 2012-B - 6066

ಕ್ರ. ಸಂ.	ತಪ್ಪಾಗಿ ನಮೂದಾಗಿರುವುದು	ತಿದ್ದುಪಡಿ/ಸರಿಯಾದುದು
01	ಶ್ರೇಯಾಂಕ.ಕೆ.	ಶ್ರೇಯಾಂಕ ಕಾಳಿಂಗಪ್ಪ ಅಲದಗೇರಿ SHREYANKA KALINGAPPA ALADAGERI
05	ಸವಿತಾ	ಸವಿತಾ ಕಾಳಿಂಗಪ್ಪ ಅಲದಗೇರಿ SAVITA KALINGAPPA ALADAGERI
06	ಕಾಳಿಂಗಪ್ಪ	ಕಾಳಿಂಗಪ್ಪ ಮಲ್ಲಪ್ಪ ಅಲದಗೇರಿ KALINGAPPA MALLAPPA ALADAGERI

ನಮೂದು ಮಾಡಬೇಕಾಗಿರುತ್ತದೆ. ಕಾರಣ ಈ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಅಧಿಕಾರಿಗಳ ಮುಂದೆ ಹಾಜರುಪಡಿಸಿ ನನ್ನ ಮಗಳ ಜನನ ಪ್ರಮಾಣ ಪತ್ರದಲ್ಲಿ ಕಲಂ ನಂ:01,05 ಮತ್ತು 06 ರಲ್ಲಿ ಮಗುವಿನ ಹೆಸರು ಮತ್ತು ಮಗುವಿನ ತಾಯಿಯ ಹೆಸರು ಹಾಗೂ ಮಗುವಿನ ತಂದೆಯ ಹೆಸರು ವಿಳಾಸ,ಈ ಮೇಲ್ಕಂಡಂತೆ ಹೆಸರು ತಿದ್ದುಪಡಿ ಮಾಡಿಕೊಡುವ ಕುರಿತು ಸದರಿ ಪ್ರಮಾಣ ಪತ್ರ ಮಾಡಿದ್ದು ಇರುತ್ತದೆ. ಇದರಲ್ಲಿ ನಾನು ಪ್ರಮಾಣ ಮಾಡಿ ಹೇಳುವುದೇನೆಂದರೆ ಮೇಲಿನ ಪ್ಯಾರಾಗಳಲ್ಲಿ ಬರೆದ ಮಜಕೂರು ಮಾಹಿತಿಗಳು ನನ್ನ ಸ್ವಂತ ಜ್ಞಾನದ ಮಾಹಿತಿಗಳ ಮೇರೆಗಿಂದ ನಿಜ ಇರುತ್ತದೆ. ಅಂತಾ ಒಪ್ಪಿ ನಾನು ಸಹಿ ಮಾಡಿರುತ್ತೇನೆ.

ಸ್ಥಳ :ರಾಣೇಬೆನ್ನೂರು
ದಿನಾಂಕ:01-06-2026

ಸಹಿ/- ಪ್ರಮಾಣಕರ್ತ

ಮಾನ್ಯ 1ನೇ ಹೆಚ್ಚುವರಿ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಹರಿಹರ

ಸಿ.ಆರ್.ಮಿಸ್.ನಂ.649/2026

ಅರ್ಜಿದಾರರು: ಹನುಮಂತಪ್ಪ ಎ.ಕೆ.ತಂದೆ ಲೇಟ್ ಮಂಜಪ್ಪ, ವಯಸ್ಸು ಸುಮಾರು 50ವರ್ಷ, ಕೂಲಿಕೆಲಸ, ವಾಸ: ಹಿರೆ ಹಾಲಿವಾಣ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

ವಿರುದ್ಧ

ಎದುರುದಾರರು : ಜನನ ಮತ್ತು ಮರಣ ನೋಂದಣಾಧಿಕಾರಿಗಳು ತಾಲ್ಲೂಕು ತಹಶೀಲ್ದಾರ್ ರವರ ಕಛೇರಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರ ಅಜ್ಜಿಯಾದ **ಬೀರಮ್ಮ ಕೋಂ ಹಾಲಸಿದ್ದಪ್ಪ, ತಂದೆ ನಾಗಪ್ಪ, ತಾಯಿ ಸಿದ್ದಮ್ಮ,** ಇವರು **ದಿನಾಂಕ:04-01-1965** ರಂದು ಹರಿಹರ ತಾಲ್ಲೂಕು, ಹಾಲಿವಾಣ ಗ್ರಾಮದಲ್ಲಿ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಸದರಿ ಮರಣವನ್ನು ನೋಂದಾಯಿಸಿಕೊಂಡು ಮರಣ ಸಮರ್ಥನಾ ಪತ್ರ ನೀಡುವಂತೆ ಎದುರುದಾರರಿಗೆ ಆದೇಶಿಸಲು ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿ ಕುರಿತು ಯಾರದ್ದಾದರೂ ತಕರಾರಿದ್ದಲ್ಲಿ **ದಿನಾಂಕ:17-07-2026** ರಂದು ಬೆಳಗ್ಗೆ **11 ಗಂಟೆಗೆ** ಹಾಜರಾಗಿ ಅಥವಾ ವಕೀಲರ ಮೂಲಕವಾಗಿ ಹಾಜರಿದ್ದು, ಆಕ್ಷೇಪಣೆ ಸಲ್ಲಿಸಬಹುದು. ಇಲ್ಲವಿದ್ದರೆ ಪ್ರಕರಣವನ್ನು ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು. ನ್ಯಾಯಾಲಯದ ಅಪ್ಪಣೆ ಮೇರೆಗೆ ದಿನಾಂಕ:18-06-2026 ರಂದು ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು.
ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.
ನ್ಯಾಯಾಲಯ, ಹರಿಹರ

ಅರ್ಜಿದಾರರ ಪರ ವಕೀಲರು
ಚನ್ನಪ್ಪ.ಕೆ
ವಕೀಲರು, ಹರಿಹರ

ಮಾನ್ಯ 1ನೇ ಹೆಚ್ಚುವರಿ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಹರಿಹರ

ಸಿ.ಆರ್.ಮಿಸ್.ನಂ.690/2026

ಅರ್ಜಿದಾರರು: ಹನುಮಂತಪ್ಪ ಎ.ಕೆ.ತಂದೆ ಲೇಟ್ ಮಂಜಪ್ಪ, ವಯಸ್ಸು ಸುಮಾರು 50ವರ್ಷ, ಕೂಲಿಕೆಲಸ, ವಾಸ:ಹಿರೆ ಹಾಲಿವಾಣ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

ವಿರುದ್ಧ

ಎದುರುದಾರರು : ಜನನ ಮತ್ತು ಮರಣ ನೋಂದಣಾಧಿಕಾರಿಗಳು ತಾಲ್ಲೂಕು ತಹಶೀಲ್ದಾರ್ ರವರ ಕಛೇರಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರ ತಂದೆಯಾದ **ಮಂಜಪ್ಪ ತಂದೆ ಹಾಲಸಿದ್ದಪ್ಪ, ತಾಯಿ ಬೀರಮ್ಮ, ಹೆಂಡತಿ ಹನುಮಮ್ಮ,** ಇವರು **ದಿನಾಂಕ:06-03-1970**ರಂದು ಹರಿಹರ ತಾಲ್ಲೂಕು, ಹಾಲಿವಾಣ ಗ್ರಾಮದಲ್ಲಿ, ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಸದರಿ ಮರಣವನ್ನು ನೋಂದಾಯಿಸಿಕೊಂಡು ಮರಣ ಸಮರ್ಥನಾ ಪತ್ರ ನೀಡುವಂತೆ ಎದುರುದಾರರಿಗೆ ಆದೇಶಿಸಲು ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿ ಕುರಿತು ಯಾರದ್ದಾದರೂ ತಕರಾರಿದ್ದಲ್ಲಿ **ದಿನಾಂಕ:17-07-2026** ರಂದು ಬೆಳಗ್ಗೆ **11 ಗಂಟೆಗೆ** ಹಾಜರಾಗಿ ಅಥವಾ ವಕೀಲರ ಮೂಲಕವಾಗಿ ಹಾಜರಿದ್ದು, ಆಕ್ಷೇಪಣೆ ಸಲ್ಲಿಸಬಹುದು. ಇಲ್ಲವಿದ್ದರೆ ಪ್ರಕರಣವನ್ನು ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು. ನ್ಯಾಯಾಲಯದ ಅಪ್ಪಣೆ ಮೇರೆಗೆ ದಿನಾಂಕ:23-06-2026 ರಂದು ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು.
ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.
ನ್ಯಾಯಾಲಯ, ಹರಿಹರ

ಅರ್ಜಿದಾರರ ಪರ ವಕೀಲರು
ಚನ್ನಪ್ಪ.ಕೆ
ವಕೀಲರು, ಹರಿಹರ

ಸಾರ್ವಜನಿಕ ಪ್ರಕಟಣೆ

ದಿನಾಂಕ:16-06-2026 ರಂದು ಪುಟ ಸಂಖ್ಯೆ 4 ರಲ್ಲಿ ಶ್ರೀಮತಿ ಎಂ.ಆರ್. ಸಾವಿತ್ರಮ್ಮನವರು, ಚಿಕ್ಕಮಗಳೂರು ತಾ|| ಅಂಬಳೆ ಹೋಬಳಿ ಮರ್ಲೆ ಗ್ರಾಮದ ಕೃಷಿ ಜಮೀನುಗಳನ್ನು ತಮ್ಮ ಪಿತ್ರಾರ್ಜಿತ ಆಸ್ತಿಗಳೆಂದು ತಪ್ಪು ಮಾಹಿತಿ ನೀಡಿ ಸಾರ್ವಜನಿಕ ಪ್ರಕಟಣೆ ಹೊರಡಿಸಿರುತ್ತಾರೆ. ಸದರಿ ಕೃಷಿ ಜಮೀನುಗಳು ನಮ್ಮ ತಂದೆಯವರಾದ ದಿ|| ಕೇಶವಯ್ಯನವರಿಗೆ ಚಿಕ್ಕಮಗಳೂರು ಜಿಲ್ಲಾ ವಿಭಾಗಾಧಿಕಾರಿಗಳ ಆದೇಶದ ಮೇರೆಗೆ ಸ್ವತ್ತುಗಳು ಮರು ಮಂಜೂರಾತಿಯಾದ ಜಮೀನುಗಳಾಗಿರುತ್ತವೆ. ನಮ್ಮ ತಂದೆ ನಿಧನರಾದ ನಂತರ ನಮ್ಮ ತಾಯಿಯವರ ಹೆಸರಿಗೆ ಬಂದಿದ್ದು, ತಾಯಿಯವರ ನಿಧನದ ನಂತರ ನನಗೆ ಮತ್ತು ನನ್ನ ಸಹೋದರರ ಹೆಸರಿಗೆ ಬಂದಿರುತ್ತದೆ. ನಾವುಗಳು ಹಕ್ಕುದಾರರಾಗಿ ಮುಂದುವರೆದಿರುತ್ತೇವೆ. ಈ ವಿಷಯವನ್ನು ಸಾರ್ವಜನಿಕರ ಗಮನಕ್ಕೆ ತರಲು ಬಯಸುತ್ತೇನೆ.

ಸ್ಥಳ : ಮರ್ಲೆ ಗ್ರಾಮ
ದಿನಾಂಕ:24-06-2026

ಸಹಿ/- ಎಂ.ಕೆ.ವಿಶ್ವೇಶ್ವರ

ಮಾನ್ಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಶಿವಮೊಗ್ಗ

ಸಿ.ಮಿಸ್. ನಂ : 316/2026

ಅರ್ಜಿದಾರರು: 1)ರಾಜೇಶ ಬಿ. ಬಿನ್ ಈರಪ್ಪ 51 ವರ್ಷ, ವಾಸ: ಉಪ್ಪಾರಕೇರಿ, ಕುಂಸಿ ಗ್ರಾಮ, ಶಿವಮೊಗ್ಗ ತಾಲ್ಲೂಕು ಮತ್ತು ಜಿಲ್ಲೆ, 2)ಬಸವರಾಜ ಬಿನ್ ಈರಪ್ಪ, 57 ವರ್ಷ, ವಾಸ: ಉಪ್ಪಾರ ಬೀದಿ, ಕುಂಸಿ ಗ್ರಾಮ, ಶಿವಮೊಗ್ಗ ತಾಲ್ಲೂಕು ಮತ್ತು ಜಿಲ್ಲೆ, 3)ಸುಜಾತ ಎಸ್.ಆರ್. ಬಿನ್ ಈರಪ್ಪ, ಕೋಂ ರಾಜಪ್ಪ ಎಸ್.ಹೆಚ್.39ವರ್ಷ, ವಾಸ: ಉಪ್ಪಾರ ಬೀದಿ, ಕುಂಸಿ ಗ್ರಾಮ, ಶಿವಮೊಗ್ಗ ತಾಲ್ಲೂಕು ಮತ್ತು ಜಿಲ್ಲೆ, 4) ಲಕ್ಷ್ಮಿ @ ಇಂದುಮತಿ ಬಿನ್ ಈರಪ್ಪ, ಕೋಂ ಕರಿಯಪ್ಪ 43 ವರ್ಷ, ವಾಸ: ಹೊಳೆಹೊನ್ನೂರು ಗ್ರಾಮ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ವಿರುದ್ಧ

ಎದುರುದಾರರು : ತಹಶೀಲ್ದಾರ್, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಅರ್ಜಿಯನ್ನು ಸಲ್ಲಿಸಿ ಅರ್ಜಿದಾರರ ಅಜ್ಜಿಯಾದ **ಸಿದ್ದಮ್ಮ ಕೋಂ ಸೋಮಣ್ಣ** ಇವರು **ದಿನಾಂಕ:20-06-1973** ರಂದು ಮರಣ ಹೊಂದಿದ್ದು, ಆ ಸಂಬಂಧ ಮರಣ ಸಮರ್ಥನಾ ಪತ್ರ ಪಡೆಯಲು ಆದೇಶಿಸಬೇಕೆಂದು ಮೇಲ್ಕಂಡ ನ್ಯಾಯಾಲಯದಲ್ಲಿ ಕೋರಿಕೊಂಡಿರುತ್ತಾರೆ. ಸದರಿ ಮರಣ ಸಮರ್ಥನಾ ಪತ್ರ ನೀಡುವಲ್ಲಿ ಯಾರದ್ದಾದರೂ ತಂಟೆ ತಕರಾರು ಇದ್ದಲ್ಲಿ ಮೇಲ್ಕಂಡ ನ್ಯಾಯಾಲಯದಲ್ಲಿ **ದಿನಾಂಕ:25-07-2026 ರಂದು ಬೆಳಗ್ಗೆ 11 ಗಂಟೆ** ಹಾಜರಾಗೀ ತಮ್ಮ ಅನುಮತಿ ಪಡೆದ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸುವುದು. ತಪ್ಪಿದ್ದಲ್ಲಿ ಪ್ರಕರಣವನ್ನು ಇತ್ಯರ್ಥ ಪಡಿಸಲಾಗುವುದು ಎಂದು ತಿಳಿಯುವುದು.

ಅರ್ಜಿದಾರರ ಪರ ವಕೀಲರು
ಮಡಿವಾಳರ ಬಸವಣ್ಣಪ್ಪ
ವಕೀಲರು, ಶಿವಮೊಗ್ಗ
ದಿನಾಂಕ:10-06-2026

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/-ಶಿರಸ್ತೇದಾರರು,
ಮಾನ್ಯ 2ನೇ ಹೆಚ್ಚುವರಿ ನ್ಯಾಯಾಲಯದ
ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.
ಶಿವಮೊಗ್ಗ

ಪ್ರಾದೇಶಿಕ ಭೂ ದಾಖಲೆಗಳ ಜಂಟಿ ನಿರ್ದೇಶಕರವರ ನ್ಯಾಯಾಲಯ, ಬೆಂಗಳೂರು ವಿಭಾಗ, ಕೆ.ಆರ್.ವೃತ್ತ, ಬೆಂಗಳೂರು

ನಂ.ಪ್ರಾ.ಭೂ.ಜಂ.ನಿ ರಿವಿಜನ್(ಶಿಮೊ):23/2026-27 ದಿನಾಂಕ:22-06-2026

ಮೇಲ್ಮನವಿದಾರರು: ಜೋಸೆಫ್ ಲೂಯಿಸ್ ಬಿನ್ ಅಂಥೋಣಿ ಲೂಯಿಸ್, ವಯಸ್ಸು 67 ವರ್ಷ, ವಾಸ: ಜಂಬುಗಾರು ಗ್ರಾಮ, ಕಸಬಾ ಹೋಬಳಿ,ಸಾಗರ ತಾಲ್ಲೂಕು. ರಿವಿಜನ್ ದಾರರ ಪರ ವಕೀಲರು: ಲಕ್ಷ್ಮೀಕಾಂತ್ ರಾವ್ ವಕೀಲರು, ಶಿವಮೊಗ್ಗ.

ವಿರುದ್ಧ

ಎದುರುದಾರರು:1)ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ಉಪನಿರ್ದೇಶಕರು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.2)ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಸಾಗರ ತಾಲ್ಲೂಕು.3)ಟಿ.ಆರ್.ಅರುಣಾಚಲಭಟ್ಟ ಬಿನ್ ರಾಮಕೃಷ್ಣಭಟ್, ಅರುಣಗಿರಿ, ಮಿಟ್ಟಲಕೊಪ್ಪ ಗ್ರಾಮ, ಆರಗ ಪೋಸ್ಟ್, ತೀರ್ಥಹಳ್ಳಿ ತಾಲ್ಲೂಕು. 4)ಪಿ.ಕೃಷ್ಣಮೂರ್ತಿ. 5)ತಹಶೀಲ್ದಾರರು ಸಾಗರ ತಾಲ್ಲೂಕು. 6)ಸೂರ್ಯ ನಾರಾಯಣ. 7)ಸುಬ್ರಮಣ್ಯ.ಬಿ. 8) ಕೋಟ ಲಕ್ಷ್ಮಣ್ ರಾವ್. 9)ಎಸ್.ಪಿ.ಮಹಿತಿ. ಜಂಬುಗಾರು ಗ್ರಾಮ ಕಸಬಾ ಹೋಬಳಿ,ಸಾಗರ ತಾಲ್ಲೂಕು. 4,6,7,8 ಮತ್ತು 9ನೇ ಎದುರುದಾರರ ವಾಸ: ಜಂಬುಗಾರು ಗ್ರಾಮ, ಕಸಬಾ ಹೋಬಳಿ, ಸಾಗರ ತಾಲ್ಲೂಕು.

* * *

ವಿಷಯ: ಜೋಸೆಫ್ ಲೂಯಿಸ್ ಬಿನ್ ಅಂಥೋಣಿ ಲೂಯಿಸ್ ಅವರ ಪರ ವಕೀಲರ ಮುಖಾಂತರ, ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 56ರ ಅಡಿಯಲ್ಲಿ ರಿವಿಜನ್ ಅರ್ಜಿ ಸಲ್ಲಿಸಿರುವ ಕುರಿತು.

ಪ್ರಕಟಣೆ

ಮೇಲ್ಕಂಡ ಪ್ರಕರಣದಲ್ಲಿ ರಿವಿಜನ್ ಅರ್ಜಿದಾರರಾದ ಜೋಸೆಫ್ ಲೂಯಿಸ್ ಬಿನ್ ಅಂಥೋಣಿ ಲೂಯಿಸ್ ರವರು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 56ರ ಅಡಿಯಲ್ಲಿ ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ಕಸಬಾ ಹೋಬಳಿ ಜಂಬುಗಾರು ಗ್ರಾಮದ ಸ.ನಂ.15ರಲ್ಲಿ, 15M 15N 15O, 15P, 15Q, 15R, 156 ರವರೆಗೆ ಆಗಿರುವ ಪೋಡಿ ದುರಸ್ತಾಯಾಗಿರುವುದನ್ನು ಪ್ರಶ್ನಿಸಿ ರಿವಿಜನ್ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದ ಬಾಬ್ತು 4,6,7,8 ಮತ್ತು 9ನೇ ಎದುರುದಾರರುಗಳಿಗೆ ಈ ಹಿಂದೆ ಜಾರಿಗೊಳಿಸಿದ ತಿಳುವಳಿಕೆ ಪತ್ರವು ಸ್ವೀಕೃತವಾಗದೇ ವಾಪಸ್ಸು ಬಂದಿರುವುದನ್ನು ಪರಿಗಣಿಸಿ, ನ್ಯಾಯಾಲಯವು ದಿನ ಪತ್ರಿಕೆಯಲ್ಲಿ ಪ್ರಕಟಣೆ ಮಾಡಲು ಆದೇಶಿಸಿರುವ ಪ್ರಯುಕ್ತ ಈ ಪ್ರಕಟಣೆಯನ್ನು ಹೊರಡಿಸಲಾಗಿದೆ. **ದಿನಾಂಕ:01-07-2026** ರಂದು ಪ್ರಾದೇಶಿಕ ಭೂ ದಾಖಲೆಗಳ ಜಂಟಿ ನಿರ್ದೇಶಕರ ಕಚೇರಿ, ಬೆಂಗಳೂರು ವಿಭಾಗ, ಕೆ.ಆರ್. ವೃತ್ತ, ಬೆಂಗಳೂರು ಇಲ್ಲಿಂದ ವೀಡಿಯೋ ಕಾನ್ಫರೆನ್ಸ್ ಮೂಲಕ ನಡೆಸಲಾಗುವ ಪ್ರಾದೇಶಿಕ ಭೂದಾಖಲೆಗಳ ಜಂಟಿ ನಿರ್ದೇಶಕರ ನ್ಯಾಯಾಲಯದ ಪ್ರಕರಣದ ವಿಚಾರಣೆಗೆ 4,6,7,8 ಮತ್ತು 9ನೇ ಎದುರುದಾರರುಗಳಾದ ಪಿ.ಕೃಷ್ಣಮೂರ್ತಿ, ಸೂರ್ಯನಾರಾಯಣ, ಸುಬ್ರಮಣ್ಯ ಬಿ. ಕೋಟ ಲಕ್ಷ್ಮಣ್ ರಾವ್, ಎಸ್.ಪಿ.ಮಹಿತಿ, 4,6,7,8 ಮತ್ತು 9ನೇ ಎದುರುದಾರರುಗಳ ವಾರಸುದಾರರು, ಹಿತಾಸಕ್ತಿ ಉಳ್ಳವರು ಮತ್ತು ತಕರಾರು ಉಳ್ಳವರು ಯಾರೇ ಆಗಲಿ ನಿಮ್ಮ ಗುರುತಿನ ಚೀಟಿಯೊಂದಿಗೆ ಮುಖ್ಯಾಗಿ ಅಥವಾ ವಕೀಲರ ಮೂಲಕವಾಗಲೀ ದಾಖಲಾತಿಯೊಂದಿಗೆ ಭೂದಾಖಲೆಗಳ ಉಪನಿರ್ದೇಶಕರ ಕಚೇರಿಯ ವಿಡಿಯೋ ಸಿಸ್ಟಮ್ ದ್ವಾರಾ ಮೂಲಕ ಗೂಗಲ್ ಮೀಟ್ ಮುಖಾಂತರ ಹಾಜರಾಗಿ ತಮ್ಮ ಸಮರ್ಥನೆಯನ್ನು ದಾಖಲಿಸತಕ್ಕದ್ದು. ತಪ್ಪಿದ್ದಲ್ಲಿ ಅಂತಹ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ, ಪ್ರಕರಣವನ್ನು ಲಭ್ಯ ದಾಖಲಾತಿಗಳ ಮೇಲೆ ಇತ್ಯರ್ಥಪಡಿಸಲಾಗುವುದು ಎಂದು ತಿಳಿಯುವುದು. ದಿನಾಂಕ:22-06-2026 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/-ಪ್ರಾದೇಶಿಕ ಭೂದಾಖಲೆಗಳ ಜಂಟಿ ನಿರ್ದೇಶಕರು
ಬೆಂಗಳೂರು ವಿಭಾಗ, ಬೆಂಗಳೂರು

ಮಾನ್ಯ 1ನೇ ಹೆಚ್ಚುವರಿ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಹರಿಹರ

ಸಿ.ಆರ್.ಮಿಸ್.ನಂ.647/2026

ಅರ್ಜಿದಾರರು: ಹನುಮಂತಪ್ಪ ಎ.ಕೆ.ತಂದೆ ಲೇಟ್ ಮಂಜಪ್ಪ, ವಯಸ್ಸು ಸುಮಾರು 50 ವರ್ಷ, ಕೂಲಿಕೆಲಸ, ವಾಸ: ಹಿರೆ ಹಾಲಿವಾಣ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

ವಿರುದ್ಧ

ಎದುರುದಾರರು : ಜನನ ಮತ್ತು ಮರಣ ನೋಂದಣಾಧಿಕಾರಿಗಳು ತಾಲ್ಲೂಕು ತಹಶೀಲ್ದಾರ್ ರವರ ಕಛೇರಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರ ಅಜ್ಜನಾದ (ತಂದೆಯ ತಂದೆ) **ಎ.ಕೆ.ಹಾಲಸಿದ್ದಪ್ಪ ತಂದೆ ಸಿದ್ದಪ್ಪ, ತಾಯಿ ಗಂಗಮ್ಮ, ಹೆಂಡತಿ ಬೀರಮ್ಮ,** ಇವರು **ದಿನಾಂಕ:01-10-1970** ರಂದು ಹರಿಹರ ತಾಲ್ಲೂಕು, ಹಾಲಿವಾಣ ಗ್ರಾಮದಲ್ಲಿ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಸದರಿ ಮರಣವನ್ನು ನೋಂದಾಯಿಸಿಕೊಂಡು ಮರಣ ಸಮರ್ಥನಾ ಪತ್ರ ನೀಡುವಂತೆ ಎದುರುದಾರರಿಗೆ ಆದೇಶಿಸಲು ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿ ಕುರಿತು ಯಾರದ್ದಾದರೂ ತಕರಾರಿದ್ದಲ್ಲಿ **ದಿನಾಂಕ:27-07-2026** ರಂದು ಬೆಳಗ್ಗೆ **11 ಗಂಟೆಗೆ** ಹಾಜರಾಗಿ ಅಥವಾ ವಕೀಲರ ಮೂಲಕವಾಗಿ ಹಾಜರಿದ್ದು, ಆಕ್ಷೇಪಣೆ ಸಲ್ಲಿಸಬಹುದು. ಇಲ್ಲವಿದ್ದರೆ ಪ್ರಕರಣವನ್ನು ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು. ನ್ಯಾಯಾಲಯದ ಅಪ್ಪಣೆ ಮೇರೆಗೆ ದಿನಾಂಕ:18-06-2026 ರಂದು ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು.
ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.
ನ್ಯಾಯಾಲಯ, ಹರಿಹರ

ಅರ್ಜಿದಾರರ ಪರ ವಕೀಲರು
ಚನ್ನಪ್ಪ.ಕೆ
ವಕೀಲರು, ಹರಿಹರ

ಮಾನ್ಯ 1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಹರಿಹರ

ಸಿ.ಆರ್.ಮಿಸ್.ನಂ.652/2026

ಅರ್ಜಿದಾರರು: ಪ್ರಭು ಎ.ಎಸ್.ತಂದೆ ನೀಲಪ್ಪ ಆಸಂದಿ, ವಯಸ್ಸು ಸುಮಾರು 39 ವರ್ಷ, ಎಲ್.ಐ.ಸಿ.ಏಜೆಂಟ್, ವಾಸ: ಕುಣೆಬೆಳಕೆರೆ ಗ್ರಾಮ, ಹರಿಹರ ತಾಲ್ಲೂಕ್, ದಾವಣಗೆರೆ ಜಿಲ್ಲೆ.

ವಿರುದ್ಧ

ಎದುರುದಾರರು : ಜನನ ಮತ್ತು ಮರಣ ನೋಂದಣಾಧಿಕಾರಿಗಳು ತಾಲ್ಲೂಕು ತಹಶೀಲ್ದಾರ್ ರವರ ಕಛೇರಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರ ತಂದೆಯಾದ **ಆಸಂದಿ ನೀಲಪ್ಪ ತಂದೆ ಆಸಂದಿ ಭದ್ರಪ್ಪ, ತಾಯಿ ನೀಲಮ್ಮ, ಹೆಂಡತಿ ಮಂಜಮ್ಮ,** ಇವರು **ದಿನಾಂಕ:10-01-2005**ರಂದು ಹರಿಹರ ತಾಲ್ಲೂಕು, ಕುಣೆಬೆಳಕೆರೆ ಗ್ರಾಮದಲ್ಲಿ ತಮ್ಮ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಸದರಿ ಮರಣವನ್ನು ನೋಂದಾಯಿಸಿಕೊಂಡು ಮರಣ ಸಮರ್ಥನಾ ಪತ್ರ ನೀಡುವಂತೆ ಎದುರುದಾರರಿಗೆ ಆದೇಶಿಸಲು ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿ ಕುರಿತು ಯಾರದ್ದಾದರೂ ತಕರಾರಿದ್ದಲ್ಲಿ **ದಿನಾಂಕ:17-07-2026** ರಂದು ಬೆಳಗ್ಗೆ **11 ಗಂಟೆಗೆ** ಹಾಜರಾಗಿ ಅಥವಾ ವಕೀಲರ ಮೂಲಕವಾಗಿ ಹಾಜರಿದ್ದು, ಆಕ್ಷೇಪಣೆ ಸಲ್ಲಿಸಬಹುದು. ಇಲ್ಲವಿದ್ದರೆ ಪ್ರಕರಣವನ್ನು ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು. ನ್ಯಾಯಾಲಯದ ಅಪ್ಪಣೆ ಮೇರೆಗೆ ದಿನಾಂಕ:18-06-2026 ರಂದು ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು.
ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.
ನ್ಯಾಯಾಲಯ, ಹರಿಹರ

ಅರ್ಜಿದಾರರ ಪರ ವಕೀಲರು
ಚನ್ನಪ್ಪ.ಕೆ
ವಕೀಲರು, ಹರಿಹರ

ಸಾಗರ ಯೋಜನಾ ಪ್ರಾಧಿಕಾರ, ಸಾಗರ

ನಗರಸಭೆ ಆವರಣ, ಸಾಗರ -577 401.
Email: mstpasagara@gmail.com

ಸಂ:ಸಾಯೋಪ್ರಾ/ಭೂ.ಬ/09/2026-27 ದಿನಾಂಕ: 22.06.2026

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾಗರ ಪಟ್ಟಣದ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರನ್ವಯ ಈ ಕೆಳಕಂಡಂತೆ ಅರ್ಜಿದಾರರು ಸಾಗರ ಪಟ್ಟಣದ ವಿಸ್ತೃತ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಭೂ ಉಪಯೋಗ ಬದಲಾವಣೆ ಕೋರಿರುತ್ತಾರೆ.

ಅರ್ಜಿದಾರರ ಹೆಸರು : ಶ್ರೀಮತಿ ಸುಶೀಲಮ್ಮ ಕೋಂ ಕೃಷ್ಣಪ್ಪ **ಗ್ರಾಮ:** ಸಂಗಳ **ರಿ ಸ ನಂ:** 82/4 **ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ:** ವಿಸ್ತೃತ ಸ್ಥಳೀಯ ಯೋಜನಾ ಪ್ರದೇಶದಲ್ಲಿ ವ್ಯವಸಾಯ ವಲಯ **ಅರ್ಜಿದಾರರು ಕೋರಿರುವ ಭೂ ಉಪಯೋಗ:** ವಸತಿ **ವಿಸ್ತೀರ್ಣ ಎ-ಗು :** ಒಟ್ಟು 01ಎ-24ಗುಂಟೆ

ಸಾಗರ ಪಟ್ಟಣದ ಪ್ರಸ್ತಾಪಿತ ಜಮೀನಿಗೆ ರಸ್ತೆ ಸಂಪರ್ಕವಿರುವುದಾಗಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಕಾರ್ಯಾಲಯ, ಭೀಮನೇರಿ, ಸಾಗರ ತಾಲ್ಲೂಕು ರವರು ದೃಢೀಕರಣ ಪತ್ರ ಸಲ್ಲಿಸಿರುತ್ತಾರೆ. ಅರ್ಜಿದಾರರು ವಸತಿ ವಿನ್ಯಾಸವನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತಾರೆ. ಭೂ ಉಪಯೋಗ ಬದಲಾವಣೆ ಆದೇಶದ ನಂತರ ಪ್ರಾಧಿಕಾರದಿಂದ ವಲಯ ನಿಯಮಾವಳಿಗಳನ್ವಯ ವಿನ್ಯಾಸ ಅನುಮೋದನೆಗೊಂಡು ಅಭಿವೃದ್ಧಿ ಕಾರ್ಯ ಕೈಗೊಳ್ಳುವುದಾಗಿ ಕೋರಿರುತ್ತಾರೆ.

ಪ್ರಸ್ತುತ ಪ್ರದೇಶವು ಸಾಗರ ಪಟ್ಟಣದ ವಿಸ್ತೃತ ಸ್ಥಳೀಯ ಯೋಜನಾ ಪ್ರದೇಶದ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 58 2022 (ಇ-ಕಡತ) ದಿ:05-07-2022 ರನ್ವಯ ವ್ಯವಸಾಯ ವಲಯವೆಂದು ಅಧಿಸೂಚಿಸಲಾಗಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 72 ಗುಟಆಪ್ರ 2024 ದಿ:01-07- 2025ರನ್ವಯ ಸದರಿ ಜಮೀನನ್ನು ವಸತಿ ಉದ್ದೇಶಕ್ಕಾಗಿ ಹೊಸ ಭೂ ಉಪಯೋಗ ನಿಗದಿ ಪಡಿಸುವಂತೆ ಅರ್ಜಿದಾರರು ಕೋರಿರುತ್ತಾರೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ 1961ರ ಕಲಂ 14 (ಎ) ರನ್ವಯ ವಿಸ್ತೃತ ಸ್ಥಳೀಯ ಯೋಜನಾ ಪ್ರದೇಶದಲ್ಲಿ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಹೊಸ ಭೂ-ಉಪಯೋಗ ನಿಗದಿಪಡಿಸುವ ಸಂಬಂಧವಾಗಿ ಸಾರ್ವಜನಿಕರಿಂದ ಯಾವುದಾದರು ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಸದಸ್ಯ ಕಾರ್ಯದರ್ಶಿಗಳು, ಸಾಗರ ಯೋಜನಾ ಪ್ರಾಧಿಕಾರ, ಸಾಗರ ಇವರಿಗೆ ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿಯಾಗಲೀ ಅಥವಾ ನೋಂದಾಯಿತ ಅಂಚೆ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಅವಧಿ ಮೀರಿ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-ಸದಸ್ಯ ಕಾರ್ಯದರ್ಶಿಗಳು(ಪ್ರ.ಪ್ರ) ಸಾಗರ ಯೋಜನಾ ಪ್ರಾಧಿಕಾರ, ಸಾಗರ

[illegible]/6/26-27/113/06/425

ಗೌರವಾನ್ವಿತ ಹೊಳಲ್ಕೆರೆ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ

ಸಿ.ಆರ್.ಮಿಸ್. ನಂ : 82/2026

ಅರ್ಜಿದಾರರು: 1)ಮಸ್ತಾನ್‌ಬೇಗಂ ಬಿನ್ ಲೇಟ್ ಅಬ್ದುಲ್‌ಬೇಗ್, ವಯಸ್ಸು 54 ವರ್ಷ, ಮನೆಕೆಲಸ, ಹೊಸಕೆರೆ, ಬಸವಾಪಟ್ಟಣ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ, 2)ಅಲ್ತಾಫ್ ಬೇಗ್ ಬಿನ್ ಲೇಟ್ ಅಬ್ದುಲ್ ಬೇಗ್, ವಯಸ್ಸು 52 ವರ್ಷ, ಮಾಡದಕುರುಬರಹಟ್ಟಿ, ಚಿತ್ರದುರ್ಗ ಟೌನ್, 3)ರುಕ್ಸಾನಾ ಮೊಹಮ್ಮದ್ ಖಾನ್ ಪಠಾಣ ಕೋಂ ಮೊಹಮ್ಮದ್ ಖಾನ್ ಪಠಾಣ ಬಿನ್ ಲೇಟ್ ಅಬ್ದುಲ್ ಬೇಗ್, ವಯಸ್ಸು 51 ವರ್ಷ,ಪ್ರಿಯದರ್ಶಿನಿ ಕಾಲೋನಿ, ಮಿಲ್ಲತ್ ನಗರ, #1111, ಮಂಗಳೂರು ರಸ್ತೆ, ಹುಬ್ಬಳ್ಳಿ ನಗರ, ಧಾರವಾಡ ಜಿಲ್ಲೆ, 4) ಸಮೀವುಲ್ಲಾ ಬೇಗ್ ಬಿನ್ ಲೇಟ್ ಅಬ್ದುಲ್ ಬೇಗ್, ವಯಸ್ಸು 49 ವರ್ಷ, ಟ್ಯಾಂಕ್ ಮೊಹಲ್ಲಾ, ಕರೆಕಲ್ಲು ದಿಬ್ಬ ಹೊಳಲ್ಕೆರೆ ಟೌನ್, ಹೊಳಲ್ಕೆರೆ ತಾ||.

ವಿರುದ್ಧ

ಎದುರುದಾರರು : ಮುಖ್ಯಾಧಿಕಾರಿಗಳು, ಜನನ ಮತ್ತು ಮರಣ ನೋಂದಣಾಧಿಕಾರಿಗಳು, ಪುರಸಭೆ ಕಾರ್ಯಾಲಯ, ಹೊಳಲ್ಕೆರೆ.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ 1 ರಿಂದ 4ನೇ ಅರ್ಜಿದಾರರ ತಾಯಿಯವರಾದ **ಜಹರಾಬೇಗಂ ಕೋಂ ಲೇಟ್ ಅಬ್ದುಲ್ ಬೇಗ್** ರವರು ಹೊಳಲ್ಕೆರೆ ತಾಲ್ಲೂಕು, ಹೊಳಲ್ಕೆರೆ ಟೌನ್, ಟ್ಯಾಂಕ್ ಮೊಹಲ್ಲಾ, ಕರೆಕಲ್ಲು ದಿಬ್ಬದಲ್ಲಿ **ದಿನಾಂಕ:12-01-2025** ರಂದು ಮರಣ ಹೊಂದಿರುತ್ತಾರೆ. ಎಂದು ಮರಣ ಸಮರ್ಥನ ಪತ್ರ ಪಡೆಯಲು ಎದುರುದಾರರ ವಿರುದ್ಧ ಅರ್ಜಿದಾರರು ಮಾನ್ಯ ಹಿರಿಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ **ಜಹರಾಬೇಗಂ ಕೋಂ ಲೇಟ್ ಅಬ್ದುಲ್ ಬೇಗ್** ರವರ ಮರಣ ಸಮರ್ಥನ ಪತ್ರ ಪಡೆಯುವ ಬಗ್ಗೆ ಬೇರೆ ಯಾರಿಗಾದರೂ ತಂಟೆ ತಕರಾರು ಇದ್ದಲ್ಲಿ ಹೊಳಲ್ಕೆರೆ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ **ದಿನಾಂಕ:24-07-2026 ರಂದು ಬೆಳಗ್ಗೆ 11 ಗಂಟೆಗೆ** ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಲಿಖಿತ ತಕರಾರು/ಆಕ್ಷೇಪಣೆಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದ ಪಕ್ಷದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ.

ಅರ್ಜಿದಾರರ ಪರ ವಕೀಲರು
ಶ್ರೀ ಹೆಚ್.ಟಿ.ಚಂದ್ರಹಾಸ,
ವಕೀಲರು, ಹೊಳಲ್ಕೆರೆ,
ದಿನಾಂಕ:20-06-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು,
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ

ಮಾನ್ಯ ಜೆ.ಎಂ.ಎಫ್.ಸಿ. 2ನೇ ನ್ಯಾಯಾಧೀಶರ ನ್ಯಾಯಾಲಯ, ಶಿವಮೊಗ್ಗ

ಸಿ.ಮಿಸ್.ನಂ : 108/2026

ಅರ್ಜಿದಾರರು: 1) ಶ್ರೀ ಮಕ್‌ಬುಲ್ ಅಹಮದ್, ಬಿನ್ ಮೊಹಮ್ಮದ್ ಘೌಸ್,ಸುಮಾರು 55 ವರ್ಷ, 2)ಶ್ರೀಮತಿ ಮಲ್ಲಿಕಾ ತಬಸ್ಸುಮ್ ಬಿನ್ ಮಕ್‌ಬುಲ್ ಅಹಮದ್,ಸುಮಾರು 45 ವರ್ಷ, 3)ಶ್ರೀ ಆಸಿಫ್ ಬಿನ್ ಮೊಹಮ್ಮದ್ ಘೌಸ್, ಸುಮಾರು 47 ವರ್ಷ, ವಾಸ: ಫಾರೂಕ್ ಶಾದಿ ಮಹಲ್, 100ಅಡಿ ರಸ್ತೆ, ಇಲ್ಯಾಸ್ ನಗರ, ನ್ಯೂ ಮಂಡ್ಲಿ, ಶಿವಮೊಗ್ಗ,

ವಿರುದ್ಧ

ಎದುರುದಾರರು : ಮಾನ್ಯ ಆಯುಕ್ತರು ಮಹಾನಗರ ಪಾಲಿಕೆ, ಶಿವಮೊಗ್ಗ.

ಪತ್ರಿಕಾ ಪ್ರಕಟಣೆಗಾಗಿ

ಈ ಮೇಲ್ಕಂಡ ಅರ್ಜಿದಾರ ಒಂದರಿಂದ ಮೂರನೇ ಯವರ ತಾಯಿಯವರಾದ **ಶಹಜಾದಿ ಬಿ.ಕೋಂ ಮಹಮ್ಮದ್ ಗೌಸ್** ರವರು **ದಿನಾಂಕ:26-08-2023** ರಂದು ಅರ್ಜಿದಾರರ ವಾಸದ ಮನೆ ಇಲ್ಯಾಸ್ ನಗರ, ನ್ಯೂ ಮಂಡ್ಲಿ ಶಿವಮೊಗ್ಗ, ಇಲ್ಲಿ ಮರಣ ಹೊಂದಿರುವುದರಿಂದ ಇವರ ಮರಣ ದೃಢೀಕರಣ ಪಡೆಯಲು ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣವು **ದಿನಾಂಕ:20-08-2026 ರಂದು ಬೆಳಗ್ಗೆ 11 ಗಂಟೆಗೆ** ಸದರಿ ನ್ಯಾಯಾಲಯದಲ್ಲಿ ಇದ್ದು, ಆ ದಿನ ಯಾರಾದರೂ ತಂಟೆ ತಕರಾರು ಇದ್ದಲ್ಲಿ ಅಂತವರು ತಪ್ಪದೆ ಮುದ್ದಾಗಿ ಹಾಜರಾಗಲಿ, ಅಥವಾ ವಕೀಲರ ಮೂಲಕವಾಗಲಿ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ಘನ ನ್ಯಾಯಾಲಯವು ಸದರಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯುವುದು.

ಅರ್ಜಿದಾರರ ಪರ ವಕೀಲರು
ಪರ್ವೀಜ್ ಅಹಮದ್
ವಕೀಲರು, ಶಿವಮೊಗ್ಗ
ದಿನಾಂಕ:23-06-2026
ಮೊ: 9886772245

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/-ಶಿರಸ್ತೇದಾರರು,
ಮಾನ್ಯ ಜೆ.ಎಂ.ಎಫ್.ಸಿ. 2ನೇ ನ್ಯಾಯಾಧೀಶರ
ನ್ಯಾಯಾಲಯ, ಶಿವಮೊಗ್ಗ

ಮಾನ್ಯ 3ನೇ ಜೆ.ಎಂ.ಎಫ್.ಸಿ. ನ್ಯಾಯಾಲಯ, ಶಿವಮೊಗ್ಗ

ಕ್ರಿ.ಮಿ. ನಂ : 61/2026

ಅರ್ಜಿದಾರರು: ಅಂತೋಣಿ ರಾಜ್ ಬಿನ್ ಲೇಟ್ ಅಪ್ಪಾವುರಾಜು, ವಯಸ್ಸು ಸುಮಾರು 42 ವರ್ಷ, ವಾಸ: 6ನೇ ಕ್ರಾಸ್, ಇಂದಿರಾ ಕಾಲೋನಿ, ಶಿವಮೊಗ್ಗ.

ವಿರುದ್ಧ

ಎದುರುದಾರರು : ಜನನ ಮರಣ ಮುಖ್ಯ ನೋಂದಣಾಧಿಕಾರಿಗಳು, ಮಹಾನಗರ ಪಾಲಿಕೆ ಆಯುಕ್ತರು, ಶಿವಮೊಗ್ಗ.

ಪ್ರಕಟಣೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಅರ್ಜಿದಾರರು ಅಂತೋಣಿ ರಾಜ್ ಬಿನ್ ಲೇಟ್ ಅಪ್ಪಾವುರಾಜು, ವಯಸ್ಸು ಸುಮಾರು 42 ವರ್ಷ, ವಾಸ: 6ನೇ ಕ್ರಾಸ್, ಇಂದಿರಾ ಕಾಲೋನಿ ಶಿವಮೊಗ್ಗ, ಈ ಮೇಲ್ಕಂಡ ಕೇಸಿನಲ್ಲಿ ಅರ್ಜಿದಾರರ ತಾಯಿಯಾದ ಮಂಗಯರ್ ಜೋತಿ ಕೋಂ ಅಪ್ಪಾವುರಾಜು ಇವರ ಮರಣ ದೃಢೀಕರಣ ಪತ್ರ ನೋಂದಣಿ ಮಾಡಿಸುವ ಸಲುವಾಗಿ ಸಲ್ಲಿಸಿದ್ದು ಮೃತ ಮಂಗಯರ್ ಜೋತಿ ಕೋಂ ಅಪ್ಪಾವುರಾಜು ಇವರು **ದಿನಾಂಕ:22-12-2023** ರಂದು 6ನೇ ಕ್ರಾಸ್ ಇಂದಿರಾ ಕಾಲೋನಿ, ಶಿವಮೊಗ್ಗ, ಗಂಡನ ಮನೆಯಲ್ಲಿ ಅವರು ಮೃತ ಪಟ್ಟಿರುತ್ತಾರೆ. ಮೃತರ ಸಂಬಂಧಿಸಿದ ಏನಾದರೂ ಬದಲಾವಣೆ ಮತ್ತು ಇತರ ಅಗತ್ಯ ಪ್ರಮಾಣಿತ ಕೆಲಸಗಳಿಗಾಗಿ ಮರಣ ಸಮರ್ಥನಾ ಪತ್ರ ನೋಂದಣಿ ಮಾಡಿಕೊಳ್ಳುವ ಸಲುವಾಗಿ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು ಇದಕ್ಕೆ ಯಾರದಾದರೂ ತಂಟೆ ತಕರಾರು ಇದ್ದಲ್ಲಿ **ದಿನಾಂಕ:29-07-2026 ರಂದು ಬೆಳಗ್ಗೆ 11 ಗಂಟೆಗೆ** ಕೆಳಗಿನ ಮುದ್ದತ್ತು ಇದ್ದು ತಕರಾರು ಸಲ್ಲಿಸಬಹುದಾಗಿರುತ್ತದೆ. ಒಂದು ವೇಳೆ ತಕರಾರು ಸಲ್ಲಿಸದಿದ್ದರೆ. ಅರ್ಜಿಯನ್ನು ಸೂಕ್ತ ರೀತಿಯಲ್ಲಿ ನ್ಯಾಯಾಲಯವು ತೀರ್ಮಾನ ಮಾಡುತ್ತದೆ ಎಂದು ಈ ಪ್ರಕಟಣೆ ಮೂಲಕ ತಿಳಿಸಲಾಗಿದೆ.

ಅರ್ಜಿದಾರರ ಪರ ವಕೀಲರು
ಅತಾವುಲ್ಲಾ ಖಾನ್
ವಾದಿಹುದಾ, 4ನೇ ಮೇನ್, 4ನೇ ಕ್ರಾಸ್,
ಶಿವಮೊಗ್ಗ.
ದಿನಾಂಕ: 19-06-2026

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/-ಶಿರಸ್ತೇದಾರರು,
ಮಾನ್ಯ 3ನೇ ಜೆ.ಎಂ.ಎಫ್.ಸಿ.
ನ್ಯಾಯಾಲಯ, ಶಿವಮೊಗ್ಗ

Hosadigantha kannada daily Printed & Published by P.S. Prakash on behalf of Jnanabharathi Prakashana Limited. Printed at Digantha Mudrana, New Thirthahalli Road, Shivamogga - 577201 and Published at 'Madhura Nilaya', 4th Cross, Durgigudi, Park Extension, Shivamogga 577202. Ph: (08182) 401752, 8861209076. Editor : P.S. Prakash, Group Editor : Vinayak S. Bhat.

ಕಿರುಸುದ್ದಿ

ಮುಂಗಾರು ಮಳೆ ಕುಂಠಿತ

• **ಶೃಂಗೇರಿ:** ಮಂಗಳವಾರ ಅಲ್ಪ ಪ್ರಮಾಣದಲ್ಲಿ ಸುರಿದಿದ್ದ ಆರಿದ್ರಾ ಮಳೆ ಮತ್ತೆ ಬುಧವಾರ ಕುಂಠಿತವಾಗಿದ್ದು, ದಿನವಿಡಿ ಬಹುತೇಕ ಬಿಸಿಲಿನ ವಾತಾವರಣ ಉಂಟಾಗಿತ್ತು. ಒಂದೆರಡು ಬಾರಿ ತುಂತುರು ಮಳೆಯಾಗಿದ್ದು ಹೊರತುಪಡಿಸಿ ಬಿಸಿಲು ಕಾಣಿಸಿಕೊಂಡಿತ್ತು.

ಗಣೇಶೋತ್ಸವ ಸಮಿತಿಗೆ ಆಯ್ಕೆ

• **ಶೃಂಗೇರಿ:** ಸಾರ್ವಜನಿಕ ಶ್ರೀ ಮಹಾಗಣಪತಿ ಸೇವಾ ಸಮಿತಿಗೆ ಅಧ್ಯಕ್ಷರಾಗಿ ಪಟ್ಟಣ ಪಂಚಾಯಿತಿ ಮಾಜಿ ಸದಸ್ಯ ರತ್ನಾಕರ ಶೆಟ್ಟಿ ಆಯ್ಕೆಗೊಂಡಿದ್ದಾರೆ.

ಗೌರಿಶಂಕರ್ ಸಭಾಂಗಣದಲ್ಲಿ ಬುಧವಾರ ವೇಣುಗೋಪಾಲ್ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದ ಸರ್ವ ಸದಸ್ಯರ ಸಭೆಯಲ್ಲಿ ಆಯ್ಕೆ ನಡೆಯಿತು. 67ನೇ ವರ್ಷದ ಗಣೇಶೋತ್ಸವ ಇದಾಗಿದ್ದು, ಸೆ.14 ರಿಂದ 7 ದಿನ ಉತ್ಸವ ಆಚರಿಸಲು ನಿರ್ಧರಿಸಲಾಗಿದೆ.

ಸಮಿತಿಗೆ ಎಚ್.ಕುಮಾರ್ (ಗೌರವಾಧ್ಯಕ್ಷ), ಸುಮಾಸೋಮಶೇಖರ್ (ಉಪಾಧ್ಯಕ್ಷೆ), ಮಾನಗಾರು ನಾಗೇಂದ್ರ (ಕಾರ್ಯದರ್ಶಿ), ಎಂ.ಎಲ್. ಪ್ರಕಾಶ್ (ಖಜಾಂಚಿ), ಟಿ.ಕೆ. ಪರಾಶರ ಹಣಕಾಸು ಸಮಿತಿ ಅಧ್ಯಕ್ಷರಾಗಿದ್ದಾರೆ.

ಹಸು ಕಳ್ಳತನ

• **ಶೃಂಗೇರಿ:** ಮೆಣಸೆ ಗ್ರಾಮ ಪಂಚಾಯಿತಿ ಮಸಿಗೆಯ ಅಣ್ಣಪ್ಪ ಹೆಗ್ಡೆಯವರ ಮನೆ ಮುಂಭಾಗದಲ್ಲಿ ಕಟ್ಟಿ ಹಾಕಿದ್ದ ಹಸುವನ್ನು ಕದ್ದೊಯ್ದ ಘಟನೆ ವರದಿಯಾಗಿದೆ.

ಅಂದಾಜು 30 ಸಾವಿರ ಬೆಲೆಯ ಹಸುವನ್ನು ಕಟ್ಟಿ ಹಾಕಿ ಸಮೀಪದ ಬಂಧುಗಳ ಮನೆಗೆ ತೆರಳಿದ್ದರು. ಮನೆಗೆ ವಾಪಾಸ್ ಬಂದಾಗ ಹಸು ಇರಲಿಲ್ಲ ಎಂದು ಸ್ಥಳೀಯ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಕರಿಯಮ್ಮ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಲಕ್ಷ ರೂ. ಅನುದಾನ

• **ತರೀಕೆರೆ:** ತರೀಕೆರೆ ತಾಲೂಕಿನ ಸಿದ್ದರಹಳ್ಳಿ ಗ್ರಾಮದಲ್ಲಿರುವ ಶ್ರೀ ಸೇವಾಲಾಲ್ ಶ್ರೀ ಕರಿಯಮ್ಮ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ 1 ಲಕ್ಷ ರೂ. ಅನುದಾನದ ಚೆಕ್‌ನ್ನು ತಾಲೂಕು ಯೋಜನಾಧಿಕಾರಿ ಸದಾಶಿವಗೌಡ ದೇವಸ್ಥಾನ ಸಮಿತಿ ಅಧ್ಯಕ್ಷ ದೊರೆಸ್ವಾಮಿ ಅವರಿಗೆ ವಿತರಿಸಿದರು.

ದೇವಸ್ಥಾನ ಸಮಿತಿ ಅಧ್ಯಕ್ಷ ದೊರೆಸ್ವಾಮಿ, ಸಮಿತಿ ಸದಸ್ಯರಾದ ರಮೇಶ್‌ನಾಯ್ಕ, ಜಗದೀಶ್‌ನಾಯ್ಕ, ಚಂದ್ರನಾಯ್ಕ, ಮುನಿಯನಾಯ್ಕ, ವಲಯ ಮೇಲ್ವಿಚಾರಕಿ ಭಾರತಿಶೆಟ್ಟಿ, ಸೇವಾ ಪ್ರತಿನಿಧಿ ಮಂಜುನಾಥ್ ಹಾಗೂ ಇತರರು ಹಾಜರಿದ್ದರು.

ಎಂಜೆಎಂ ಸರ್ಕಾರಿ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿದ ಶಾಸಕಿ

• **ಮೂಡಿಗೆರೆ :** ತಾಲೂಕಿನ ಎಂ ಜೆ ಎಂ ಸರ್ಕಾರಿ ಆಸ್ಪತ್ರೆಗೆ ಶಾಸಕಿ ನಯನ ಮೋಟಮ್ಮ ದಿಢೀರ್ ಭೇಟಿ ನೀಡಿ ಅಲ್ಲಿನ ಕುಂದು ಕೊರತೆಗಳನ್ನು ಪರಿಶೀಲಿಸಿದರು.

150 ಹಾಸಿಗೆಯುಳ್ಳ ಆಸ್ಪತ್ರೆಯಲ್ಲಿ ಸಿಬ್ಬಂದಿಗಳು ಸರಿಯಾಗಿ ಕರ್ತವ್ಯವನ್ನು ಪಾಲಿಸುತ್ತಿಲ್ಲ ಎಂಬ ವದಂತಿಗೆ ಯಾವುದೇ ಸುಳಿವು ನೀಡದೆ ಆಸ್ಪತ್ರೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ಅವ್ಯವಸ್ಥೆ ಶಾಸಕರಿಗೆ ಗೊತ್ತಾಯಿತು. ಗ್ರಾಮಾಂತರದಿಂದ ಹೆಚ್ಚು ರೋಗಿಗಳು ಚಿಕಿತ್ಸೆಗೆ ಬಂದಿದ್ದರು. ವೈದ್ಯರು ಇಲ್ಲದೆ ಇರುವುದನ್ನು ಗಮನಿಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದು ಕೊಂಡರು. ಅಲ್ಲದೆ ಕರ್ತವ್ಯದಲ್ಲಿ ಇಲ್ಲದೆ ಇರುವ ವೈದ್ಯರ ಇರುಕೆಯ ಬಗ್ಗೆ ನಾಮಫಲಕದಲ್ಲಿ ಹಾಕಿದ್ದರಿಂದ ಆ ವೈದ್ಯರಿಗಾಗಿ ಗಂಟೆ ಯಿಂದ ಕಾದು ಕುಳಿತಿದ್ದ ರೋಗಿಗಳನ್ನು ನೋಡಿ ಸಾಂತ್ವನ ಹೇಳಿದಲ್ಲದೆ ಯಾವ ವೈದ್ಯರು ಕರ್ತವ್ಯದಲ್ಲಿ ಇರುತ್ತಾರೆ ಅಂತವರನ್ನು ಮಾತ್ರ ನಾಮಫಲಕದಲ್ಲಿ ಹೆಸರು ಹಾಕಬೇಕು ಸುಮ್ಮನೆ ಇವೊತ್ತು ದಿನ ವೈದ್ಯರಿಗಾಗಿ ಯಾವ ರೋಗಿಯೂ ಕಾಯಬಾರದು ಎಂದ ಅವರು ರೋಗಿಗಳಿಗೆ ಸರಿಯಾದ ಮಾಹಿತಿ ಸಂಬಂಧ ಪಟ್ಟ ಸಿಬ್ಬಂದಿಗಳು ನೀಡಬೇಕು. ಎಲ್ಲರೂ ಸರಿಯಾದ ಸಮಯಕ್ಕೆ ಕರ್ತವ್ಯದಲ್ಲಿ ಇರೋದನ್ನು ಆಸ್ಪತ್ರೆಯ ಎಲ್ಲಾ ಸಿಬ್ಬಂದಿಗಳು ಕಡ್ಡಾಯವಾಗಿ ಪಾಲಿಸಬೇಕು ಯಾರು ಬೇಜವಾಬ್ದಾರಿ ತೋರಬಾರದು ಎಂದರು.

ಸುಳ್ಳು ಮಾಹಿತಿ ನೀಡಿದ ಸಿಬ್ಬಂದಿಗಳನ್ನು ತರಾಟೆಗೆ ತೆಗೆದು ಕೊಂಡರು ಅಲ್ಲದೆ ಶಾಸಕರಿಗೆ ವೈದ್ಯರು ಶಸ್ತ್ರಚಿಕಿತ್ಸೆಯಲ್ಲಿ ಇದ್ದಾರೆ ಎಂದು ಸಿಬ್ಬಂದಿಯೋರ್ವರು ಸುಳ್ಳು ಹೇಳಿದನ್ನು ಗಮನಿಸಿ ನಮಗೆ ಇಷ್ಟು ಸುಳ್ಳು ಹೇಳುವ ನೀವು ರೋಗಿಗಳಿಗೆ ಇನ್ನೆಷ್ಟು ಮೋಸ ಮಾಡುತ್ತೀರ.ಇನ್ಮೇಲೆ ಈ ರೀತಿಯ ಅಸಡ್ಡೆ ವಾಗಿ ಯಾರು ನಡೆದುಕೊಳ್ಳಬಾರದು ಎಂದು ಎಚ್ಚರಿಸಿದ ಅವರು, ರೋಗಿಗಳಿಗೆ ನೀಡುವ ಊಟವನ್ನು ಸೇವಿಸಿ ಆಹಾರದ ಗುಣಮಟ್ಟವನ್ನು ಪರಿಶೀಲಿಸಿದರು.

ದೇವೇಗೌಡರ ರಾಜಕೀಯ ಜೀವನದಲ್ಲಿ ದತ್ತಾರವರ ಕೊಡುಗೆ ಅಪಾರ: ರೇವಣ್ಣ

• **ಕಡೂರು:** ದತ್ತಾರವರು ದೇವೇಗೌಡರ ರಾಜಕೀಯ ಬೆಳವಣಿಗೆಯಲ್ಲಿ ದತ್ತಾರವರ ಕೊಡುಗೆ ಅಪಾರವಾಗಿದೆ ಎಂದು ಮಾಜಿ ಸಚಿವ ಹಾಲಿ ಶಾಸಕ ಎಚ್. ಡಿ. ರೇವಣ್ಣ ಹೇಳಿದರು.

ತಾಲೂಕಿನ ಯಗಟಿ ಗ್ರಾಮದ ವೈ. ಎಸ್.ವಿ ದತ್ತಾರವರ ಮನೆಯಲ್ಲಿ ಅಭಿಮಾನಿಗಳು ಏರ್ಪಡಿಸಿದ್ದ ಮಾಜಿ ಶಾಸಕ ವೈ.ಎಸ್.ವಿ. ದತ್ತಾರವರ 7 ನೇ ಜನ್ಮದಿನದ ಶುಭ ಕೋರಲು ಆಗಮಿಸಿದ್ದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, ನಾವುಗಳು ರಾಜಕಾರಣಕ್ಕೆ ಬರುವ ಮೊದಲೇ ದೇವೇಗೌಡರಿಗೂ ದತ್ತಾರವರಿಗೂ ಉತ್ತಮ ಸಂಬಂಧ ಇತ್ತು. 1982 ರಿಂದಲೂ ದತ್ತಾರವರು ಪ್ರತಿ ಹೆಜ್ಜೆಯಲ್ಲಿಯೂ ದೇವೇಗೌಡರ ಜೊತೆ ಇದ್ದಾರೆ. ರಾಜ್ಯದ ನೀರಾವರಿ ಯೋಜನೆಗಳ ಚಿಂತನೆಯಲ್ಲಿ ದತ್ತಾರವರ ಸಲಹೆ ಅಪಾರವಾಗಿದೆ ಎಂದರು.

2028ರ ಚುನಾವಣೆಯಲ್ಲಿ ದೇವೇಗೌಡರಿಗೆ ಎಲ್ಲಾ ಕಷ್ಟಗಳು ದೂರವಾಗಿ ಒಳ್ಳೆಯ ಪ್ರತಿಫಲ ದೊರಕಲಿದೆ. ಕಡೂರು ದೇವೇಗೌಡರಿಗೆ ಶಕ್ತಿ ನೀಡಿದೆ. ಇದರಿಂದಾಗಿ ಕಡೂರಿನ ಬಗ್ಗೆ ನಮ್ಮ ಕುಟುಂಬಕ್ಕೆ ಉತ್ತಮ ಭಾವನೆ ಇದೆ. 2028ರ ವಿಧಾನಸಭಾ ಚುನಾವಣೆಯಲ್ಲಿ ಕಡೂರು ಕ್ಷೇತ್ರಕ್ಕೆ ಯಾರು ಅಭ್ಯರ್ಥಿ ಎಂಬುದನ್ನು ದೇವೇಗೌಡರೇ ತೀರ್ಮಾನ ಮಾಡಲಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಕಡೂರು ಮತ್ತು ಮೂಡಿಗೆರೆ ಕ್ಷೇತ್ರಗಳಿಗೆ ಜೆಡಿಎಸ್ ಅಭ್ಯರ್ಥಿಗಳನ್ನು ಹಾಕಲಾಗುವುದು. ಚಿಕ್ಕಮಗಳೂರು ಜಿಲ್ಲಾ ಜೆಡಿಎಸ್ ಅಧ್ಯಕ್ಷರನ್ನು ಹೊಸ ಹಾಕಲಾಗುವುದು. ಹಿಂದೆ ಮಂತ್ರಿಯಾಗಿ ನನ್ನ ಅವಧಿಯಲ್ಲಿ ಯಾವುದಾದರೂ ಲೋಪವಾಗಿದ್ದರೆ ತನಿಖೆ ನಡೆಸಿ ಎಂದು ಬರೆದು ಕೊಟ್ಟಿದ್ದೇನು, ಶಾಸಕರ ಅಕ್ರಮ ಮತದಾನ ಪಟ್ಟಿಕ್ಕೆ ಎಚ್ಚರಿಕೆ ಗಂಟೆಯಾಗಿದೆ ಎಂದರು.

ಇದೇ ಸಂದರ್ಭದಲ್ಲಿ ದತ್ತಾರವರು ವಿದ್ಯಾಭ್ಯಾಸ ಮಾಡಿದ ಯಗಟಿ ಪ್ರೌಢಶಾಲೆಗೆ 60 ವರ್ಷ ತುಂಬಿದ ಹಿನ್ನೆಲೆಯಲ್ಲಿ ಈಗ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಹುಟ್ಟು ಹಬ್ಬದ ಅಂಗವಾಗಿ ಬ್ಯಾಕ್ ಸೂಟ್ ವಿತರಿಸಿ ಗಣಿತ ಪಾಠವನ್ನು ಮಾಡಿದರು.

ಹೊಸದುರ್ಗ ಭಗೀರಥ ಪೀಠದ ಶ್ರೀ ಪುರುಷೋತ್ತಮಾನಂದ ಪುರಿ ಸ್ವಾಮಿಗಳು ಆಗಮಿಸಿ ಶುಭ ಕೋರಿದರು. ಪಕ್ಷಾತೀತವಾಗಿ ಮುಖಂಡರುಗಳು ಆಗಮಿಸಿ ಶುಭ ಕೋರಿದರು. ಪುರಸಭೆ ಮಾಜಿ ಅಧ್ಯಕ್ಷ ಭಂಡಾರಿ ಶ್ರೀನಿವಾಸ್, ಎಸ್. ರಾಜಪ್ಪ ಜೆಡಿಎಸ್ ಅಧ್ಯಕ್ಷ ಕೋಡಿಹಳ್ಳಿ ಮಹೇಶ್ವರಪ್ಪ, ಬದರಿ ಜಗದೀಶ್, ಚೇತನ್ ಕೆಂಪರಾಜು, ಗಂಗಾಧರ ನಾಯಕ್, ಪ್ರೇಮಕುಮಾರ್, ಮಚ್ಚೇರಿ ಮಹೇಶ್, ಬಿಳವಾಲ ಪ್ರಕಾಶ್ ಹಾಗೂ ಅಪಾರ ಸಂಖ್ಯೆಯ ಅಭಿಮಾನಿ ಬಳಗ ಶುಭ ಕೋರಿದರು.

ಶಿವಮೊಗ್ಗದ ದ ಒರಿಜಿನಲ್ ಆಭರಣದಲ್ಲಿ ಅವಿನಾಭಾವ ಕಲೆಕ್ಷನ್ ಮೇಲೆ ಶೇ.0 ಮೇಕಿಂಗ್ ಚಾರ್ಜಸ್ ಆಫರ್

ಹೊಸ ವಿಳಾಸದಲ್ಲಿ ಹೊಸ ಸಂಭ್ರಮ

• **ಶಿವಮೊಗ್ಗ:** ನಗರದ ಕುವೆಂಪು ರಸ್ತೆಯ ಜೈಲ್ ಸರ್ಕಲ್ ಸಮೀಪ ನೂತನವಾಗಿ ಸ್ಥಳಾಂತರಗೊಂಡಿರುವ 'ದ ಒರಿಜಿನಲ್ ಆಭರಣ' (The Original Abharan) ತನ್ನ ಗ್ರಾಹಕರಿಗಾಗಿ ವಿಶೇಷ ಆಫರ್ ಅನ್ನು ಘೋಷಿಸಿದೆ. ಜೂನ್ 24ರಿಂದ 26ರವರೆಗೆ, 'ಅವಿನಾಭಾವ ಕಲೆಕ್ಷನ್' ಸೇರಿದಂತೆ ಸಂಪೂರ್ಣ ಚಿನ್ನ ಮತ್ತು ವಜ್ರಾಭರಣಗಳ ಶ್ರೇಣಿಯ ಮೇಲೆ ಶೇ.0 ಮೇಕಿಂಗ್ ಚಾರ್ಜಸ್ ಸೌಲಭ್ಯವನ್ನು ಗ್ರಾಹಕರು ಪಡೆಯಬಹುದಾಗಿದೆ.

90 ವರ್ಷಗಳ ವಿಶ್ವಾಸ, ಪರಿಶುದ್ಧತೆ ಮತ್ತು ಅಪ್ರತಿಮ ಕರಕುಶಲತೆಯ ಪರಂಪರೆಯನ್ನು ಹೊಂದಿರುವ 'ದ ಒರಿಜಿನಲ್ ಆಭರಣ', ತನ್ನ ನೂತನ ಹಾಗೂ ವಿಶಾಲ ಶೋರೂಮ್ ಮೂಲಕ ಶಿವಮೊಗ್ಗದ ಗ್ರಾಹಕರಿಗೆ ಇನ್ನಷ್ಟು ಐಷಾರಾಮಿ ಹಾಗೂ ಸುಲಭವಾದ ಖರೀದಿ ಅನುಭವವನ್ನು ಒದಗಿಸುತ್ತಿದೆ.

ಮದುವೆ, ಹಬ್ಬ-ಹರಿದಿನಗಳು ಹಾಗೂ ವಿಶೇಷ ಸಂದರ್ಭಗಳಿಗಾಗಿ ಚಿನ್ನ ಮತ್ತು ವಜ್ರಾಭರಣ ಖರೀದಿಸಲು ಯೋಜಿಸುತ್ತಿರುವವರಿಗೆ ಈ ಆಫರ್ ಸುವರ್ಣಾವಕಾಶವಾಗಿದೆ. ಪಾರಂಪರಿಕ ವಿನ್ಯಾಸಗಳಿಂದ ಹಿಡಿದು ಅತ್ಯಾಧುನಿಕ ಆಭರಣಗಳವರೆಗೆ, ವಿಶಾಲ ಸಂಗ್ರಹವನ್ನು ಗ್ರಾಹಕರು ಈ ಸಂದರ್ಭದಲ್ಲಿ ವೀಕ್ಷಿಸಿ ಖರೀದಿಸಬಹುದಾಗಿದೆ.

ಈ ಕುರಿತು ಮಾತನಾಡಿದ ಸಂಸ್ಥೆಯ ಪ್ರತಿನಿಧಿಗಳು, ಶಿವಮೊಗ್ಗದ ಗ್ರಾಹಕರು ನಮ್ಮ ಮೇಲೆ ತೋರಿರುವ ಪ್ರೀತಿ ಮತ್ತು ವಿಶ್ವಾಸಕ್ಕೆ ಕೃತಜ್ಞತೆ ಸಲ್ಲಿಸುವ ಉದ್ದೇಶದಿಂದ ಈ ವಿಶೇಷ ಆಫರ್ ಅನ್ನು ಪರಿಚಯಿಸಿದ್ದೇವೆ. ನಮ್ಮ ನೂತನ ಶೋರೂಮ್‌ನಲ್ಲಿ ಪ್ರತಿಯೊಬ್ಬ ಗ್ರಾಹಕರಿಗೂ ವಿಶಿಷ್ಟ ಖರೀದಿ ಅನುಭವವನ್ನು ನೀಡಲು ನಾವು ಬದ್ಧರಾಗಿದ್ದೇವೆ ಎಂದು ತಿಳಿಸಿದ್ದಾರೆ.

ಗ್ರಾಹಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ 'ದ ಒರಿಜಿನಲ್ ಆಭರಣ' ಮನವಿ ಮಾಡಿದೆ.

- ಈ ವಿಶೇಷ ಆಫರ್ ಜೂನ್ 24ರಿಂದ 26ರವರೆಗೆ ಮಾತ್ರ ಲಭ್ಯವಿದೆ.
- ನಿಯಮಗಳು ಮತ್ತು ಷರತ್ತುಗಳು ಅನ್ವಯ.
- ಕಲ್ಲಿನ ಮೌಲ್ಯ ಮತ್ತು ಜಿಎಸ್ಟಿ ಹೆಚ್ಚುವರಿಯಾಗಿ ಅನ್ವಯಿಸುತ್ತದೆ.

THE ORIGINAL
ಆಭರಣ®
SINCE 1935

ಏಳುನೂರುಕಾನು ಕಾಫಿ ತೋಟದಲ್ಲಿ ಮಾರಕಾಸ್ತ್ರಧಾರಿ ಅಪರಿಚಿತರ ಚಲನವಲನ ಪತ್ತೆ

• **ಚಿಕ್ಕಮಗಳೂರು:** ಮಲ್ಲಂದೂರು ಸಮೀಪದ ಏಳುನೂರುಕಾನು ಕಾಫಿ ತೋಟದಲ್ಲಿ ರಾತ್ರಿವೇಳೆ ಬಂದೂಕು ಹಾಗೂ ಮಾರಕಾಸ್ತ್ರಧಾರಿ ಅಪರಿಚಿತರ ಚಲನವಲನ ಪತ್ತೆಯಾಗಿದ್ದು, ಸ್ಥಳೀಯರು ಆತಂಕಕ್ಕೀಡಾಗಿದ್ದಾರೆ.

ಸಚಿವ ಕೆ.ಜೆ. ಜಾರ್ಜ್ ಅವರಿಗೆ ಸೇರಿದ ತೋಟ ಇದಾಗಿದ್ದು, ಬಂದೂಕು ಧಾರಿಗಳು ತೋಟದಲ್ಲಿ ನುಸುಳಿ ಹೊಂಚು ಹಾಕುತ್ತಿರುವ ದೃಶ್ಯಗಳು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಮುತ್ತೋಡಿ ವನ್ಯಜೀವಿ ಅಭಯಾರಣ್ಯದ ತಪ್ಪಲಿಗೆ ಹೊಂದಿಕೊಂಡಂತಿರುವ ಈ ಕಾಫಿ ಎಸ್ಟೇಟ್‌ನಲ್ಲಿ ಜೂನ್ 17, 21 ಮತ್ತು 22ರ ಮಧ್ಯರಾತ್ರಿ ಅಪರಿಚಿತ ಶಸ್ತ್ರಸಜ್ಜಿತ ವ್ಯಕ್ತಿಗಳು ಓಡಾಡಿದ್ದಾರೆ. ಹೆಗಲಿಗೆ ಬಂದೂಕು ಹಾಗೂ ಕೈಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಅನುಮಾನಾಸ್ಪದವಾಗಿ ತಿರುಗಾಡುತ್ತಿರುವುದು ದೃಶ್ಯಗಳಲ್ಲಿ ಕಂಡು ಬಂದಿದೆ.

ಅಪರಿಚಿತರ ಈ ಅಕ್ರಮ ಪ್ರವೇಶ ಮತ್ತು ಚಲನವಲನಗಳು ತೋಟದ ಸಿಬ್ಬಂದಿ ಹಾಗೂ ವ್ಯವಸ್ಥಾಪಕರಲ್ಲಿ ತೀವ್ರ ಆತಂಕ ಮೂಡಿಸಿದೆ. ಈ ಎಸ್ಟೇಟ್ ಮುತ್ತೋಡಿ ಅಭಯಾರಣ್ಯದ ಗಡಿಯಲ್ಲೇ ಇರುವುದರಿಂದ, ಈ ತಂಡವು ಕಾಡುಪ್ರಾಣಿಗಳನ್ನು ಬೇಟೆಯಾಡಲು ಬಂದಿರಬಹುದು ಅಥವಾ ಬೇರೆನಾದರೂ ಕಾನೂನುಬಾಹಿರ ಚಟುವಟಿಕೆಗೆ ಸಂಚು ರೂಪಿಸಿರಬಹುದು ಎಂಬ ವ್ಯಕ್ತವಾಗಿದೆ.

ಘಟನೆಗೆ ಸಂಬಂಧಿಸಿದಂತೆ ಎಸ್ಟೇಟ್‌ನ ಹಿರಿಯ ವ್ಯವಸ್ಥಾಪಕಿ ದಿವ್ಯಾ ಅವರು ಸಿಸಿಟಿವಿ ದೃಶ್ಯಾವಳಿಗಳ ಸಮೇತ ಮಲ್ಲಂದೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಮಲ್ಲಂದೂರು ಪೊಲೀಸರು, ಸಿಸಿಟಿವಿ ಫೂಟೇಜ್ ಆಧರಿಸಿ ಅಕ್ರಮ ನುಸುಳುಕೋರರ ಪತ್ತೆಗಾಗಿ ಜಾಲ ಬೀಸಿದ್ದು, ತನಿಖೆಯನ್ನು ಚುರುಕುಗೊಳಿಸಿದ್ದಾರೆ.

ಮ್ಯಾಮ್ಕೋಸ್‌ನಿಂದ ಚೆಕ್ ವಿತರಣೆ

• **ಶೃಂಗೇರಿ:** ಮಲೆನಾಡು ಅಡಿಕೆ ಮಾರಾಟ ಸಹಕಾರ ಸಂಘದಿಂದ ಷೇರುದಾರರಿಗೆ ನೀಡುವ ಅಂತ್ಯ ಸಂಸ್ಕಾರ ಯೋಜನೆಯಡಿ ಪರಿಹಾರ ಧನದ ಚೆಕ್ ಅನ್ನು ಬೆಂಕಿಕೊಡಿಗೆ ಶಿವಸ್ವಾಮಿ ಕುಟುಂಬಕ್ಕೆ ನೀಡಲಾಯಿತು.

ವಿದ್ಯಾರಣ್ಯಪುರ ಗ್ರಾಮ ಪಂಚಾಯಿತಿ ಶ್ಯಾವಣ ಗ್ರಾಮದ ಬೆಂಕಿಕೊಡಿಗೆ ಶಿವಸ್ವಾಮಿ ಇತ್ತೀಚೆಗೆ ನಿಧನರಾಗಿದ್ದರು. ಪರಿಹಾರದ ಚೆಕ್ ಅನ್ನು ಸಂಸ್ಥೆ ನಿರ್ದೇಶಕ ಸುರೇಶ್ಚಂದ್ರ ಅಂಬ್ಲೂರು ನೀಡಿದರು. ಈ ಸಂದರ್ಭದಲ್ಲಿ ಶಾರದಾ ಪಿಎಸಿಎಸ್ ಅಧ್ಯಕ್ಷ ನರೇಂದ್ರ ಹೆಗ್ಡೆ ಗ್ರಾಮಸ್ಥರಾದ ಶಿವ್ರನಮಕ್ಕಿ ವಿಜಯ ಶಾಖಾ ವ್ಯವಸ್ಥಾಪಕ ಚರಣ್‌ಕುಮಾರ್ ಇದ್ದರು.

ಗೃಹಿಣಿಯೊಬ್ಬರ ಫೋಟೋ ಅಶ್ಲೀಲವಾಗಿ ಎಡಿಟ್: 30 ಲಕ್ಷ ರೂ.ಗೆ ಬೇಡಿಕೆ

• **ಚಿಕ್ಕಮಗಳೂರು:** ಎಐ ತಂತ್ರಜ್ಞಾನವನ್ನು ದುರ್ಬಳಕೆ ಮಾಡಿಕೊಂಡು ಗೃಹಿಣಿಯೊಬ್ಬರ ಫೋಟೋಗಳನ್ನು ಅಶ್ಲೀಲವಾಗಿ ಎಡಿಟ್ ಮಾಡಿ, 30 ಲಕ್ಷ ರೂ. ಹಣಕ್ಕೆ ಬೇಡಿಕೆ ಇಟ್ಟಿರುವ ಪ್ರಕರಣ ತರೀಕೆರೆ ತಾಲೂಕಿನಲ್ಲಿ ನಡೆದಿದೆ.

ಬಾವಿಕೆರೆ ಗ್ರಾಮದವರೇ ಆದ ಅಕ್ಷಯ್ ಮತ್ತು ಸಾಹುಲ್ ಅಹಮದ್ ಎಂಬುವವರಿಂದ ಈ ಬ್ಲ್ಯಾಕ್‌ಮೇಲ್ ನಡೆದಿದ್ದು, ಲಕ್ಕವಳ್ಳಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಆರೋಪಿಗಳ ಬೆದರಿಕೆಗೆ ಗೃಹಿಣಿ ಹಾಗೂ ಅವರ ಕುಟುಂಬದವರು ಬಗ್ಗದಿದ್ದಾಗ, ಕಿರಾತಕರು ಇನ್‌ಸ್ಟಾಗ್ರಾಮ್‌ನಲ್ಲಿ ನಕಲಿ ಖಾತೆಯೊಂದನ್ನು ತೆರೆದಿದ್ದಾರೆ. ಅದರಲ್ಲಿ ಎಡಿಟ್ ಮಾಡಿದ ಗೃಹಿಣಿಯ ಫೋಟೋಗಳನ್ನು ಅಪ್‌ಲೋಡ್ ಮಾಡಿ, ಅಶ್ಲೀಲ ಬರಹಗಳೊಂದಿಗೆ ಪೋಸ್ಟ್ ಮಾಡಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ತನ್ನ ಫೋಟೋಗಳನ್ನು ನೋಡಿ ತೀವ್ರ ಅವಮಾನ ಹಾಗೂ ಮಾನಸಿಕ ನೊಂದ ಗೃಹಿಣಿ ಆತ್ಮಹತ್ಯೆಗೂ ಯತ್ನಿಸಿದ್ದರು ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಅವರ ಪತಿ ತಿಳಿಸಿದ್ದಾರೆ.

ಈ ಹಿಂದೆ ಸಹ ಇದೇ ಯುವಕರು ಬೇರೆ ಮಹಿಳೆಯರಿಗೂ ಇದೇ ರೀತಿ ಬೆದರಿಕೆ ಹಾಕಿ ಹಣಕ್ಕೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದ್ದು, ಈ ಜಾಲದ ಹಿಂದೆ ಇವರದ್ದೇ ಕೈವಾಡವಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಸಾಮಾಜಿಕ ಜಾಲತಾಣದಲ್ಲಿ ವಿಕೃತ ಫೋಟೋಗಳನ್ನು ಹರಿಬಿಟ್ಟು ಗೃಹಿಣಿಯ ಆತ್ಮಹತ್ಯೆ ಯತ್ನಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಕುಟುಂಬಸ್ಥರು ಹಾಗೂ ಸ್ಥಳೀಯರು ಒತ್ತಾಯಿಸಿದ್ದಾರೆ. ತಲೆಮರೆಸಿಕೊಂಡಿರುವ ಕಿಡಿಗೇಡಿಗಳ ಬಂಧನಕ್ಕಾಗಿ ಪೊಲೀಸರು ಜಾಲ ಬೀಸಿದ್ದಾರೆ.

ಅಡಿಕೆ ಸಹಕಾರ ಸಂಘಗಳ ಸಹಕಾರ ಮಹಾಮಂಡಳದ ಅಧ್ಯಕ್ಷ ಹಾಗೂ ಶಾಸಕ ಆರಗ ಆಗ್ರಹ

ಅಡಿಕೆಗೆ ಕೃತಕ ಬಣ್ಣ: ನಿಯಂತ್ರಣಕ್ಕೆ ಕಾಯ್ದೆ ಅಗತ್ಯ

> ನಮ್ಮಂತಹ ಪಕ್ಷದಲ್ಲಿ ಅಶಿಸ್ತು ನಡೆಯುವುದಿಲ್ಲ, ಹಾಗೆಂದು ಊಹಾಪೋಹ ಮಾಡಿ ಹೇಳಿಕೆ ಕೊಡುವುದು ಸರಿಯಲ್ಲ, ಕೆ.ಎಸ್.ಈಶ್ವರಪ್ಪನವರು ಬಿಜೆಪಿಯಲ್ಲಿದ್ದಾಗಲೇ 17 ಜನ ಶಾಸಕರು ಬಂದಿದ್ದು ನಿಜ. ಆ ಸಂದರ್ಭದಲ್ಲಿ ಯಾರಿಗೆ ಎಷ್ಟು ಹಣ ಕೊಡಲಾಗಿತ್ತೆಂದು ಅವರೇ ಬಹಿರಂಗ ಮಾಡಲಿ. ಇಲ್ಲದಿದ್ದರೆ ಹೇಳಿಕೆಯನ್ನು ಪರಿಶೀಲಿಸಿಕೊಳ್ಳಲಿ.
>
> ■ ಆರಗ ಜ್ಞಾನೇಂದ್ರ, ಶಾಸಕ

• **ಶಿವಮೊಗ್ಗ :** ಅಡಿಕೆಗೆ ಬೆಲೆ ಇದೆ ಎಂಬ ಕಾರಣಕ್ಕೆ ಕೆಲವು ವ್ಯಾಪಾರಿಗಳು ಹಾಗೂ ಬೆಳೆಗಾರರು ಕೃತಕ ಬಣ್ಣ ಹಾಕಿ ವಿಷ ತಿನ್ನಿಸುವ ಕೆಲಸ ಮಾಡುತ್ತಿದ್ದು, ಅದನ್ನು ನಿಯಂತ್ರಿಸುವ ಸಲುವಾಗಿ ಸರ್ಕಾರ ಕಾಯಿದೆ ತರಬೇಕಿದೆ ಎಂದು ಶಾಸಕರೂ ಆಗಿರುವ ರಾಜ್ಯ ಅಡಿಕೆ ಸಹಕಾರ ಸಂಘಗಳ ಸಹಕಾರ ಮಹಾಮಂಡಳದ ಅಧ್ಯಕ್ಷ ಆರಗ ಜ್ಞಾನೇಂದ್ರ ಆಗ್ರಹಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಡಿಕೆಗೆ ಕೃತಕ ಬಣ್ಣ ಹಾಕಿ ರೈತರಿಗೆ ವಂಚನೆ ಮಾಡಲಾಗುತ್ತಿದೆ. ಅಡಿಕೆಯಲ್ಲಿ ವಿಷಕಾರಕ ಅಂಶವಿದೆ ಎಂಬ ಕಾರಣಕ್ಕೆ ಹೊರರಾಜ್ಯಗಳಿಂದ ಅಡಿಕೆ ವಾಪಾಸ್ ಬರುತ್ತಿದೆ. ಕೆಲವು ರಾಜ್ಯಗಳ ಅಧಿಕಾರಿಗಳು ಕೃತಕ ಬಣ್ಣದ ಅಡಿಕೆಯನ್ನು ವಾಪಾಸ್ ಕಳಿಸದೆ ಅಲ್ಲೇ ಸುಟ್ಟು ಹಾಕುತ್ತಿರುವುದು ದುರ್ದೈವದ ಸಂಗತಿ ಎಂದರು.

ಇಲ್ಲಿಂದ ಹೊರರಾಜ್ಯಕ್ಕೆ ಹೋಗುವ ಅಡಿಕೆಯನ್ನು ಫುಡ್ ಅಂಡ್ ಡ್ರಗ್ಸ್ (ಎಫ್‌ಡಿಎ) ಅಧಿಕಾರಿ ಮಹಾರಾಷ್ಟ್ರದಲ್ಲಿ ತಡೆದು ಅಲ್ಲಿಯೇ ನಿಲ್ಲಿಸಿಕೊಂಡಿದ್ದಾರೆ. ಕಳೆದ ಮೂರ್‍ನಾಲ್ಕು ತಿಂಗಳಿನಿಂದ 50ಕ್ಕೂ ಹೆಚ್ಚು ಲೋಡ್ ಲಾರಿಗಳನ್ನು ನಿಲ್ಲಿಸಿಕೊಳ್ಳಲಾಗಿದೆ. ಮಹಾರಾಷ್ಟ್ರದಲ್ಲಿ ಬಳಕೆಗೆ ಹೋದ ಅಡಿಕೆ ಗುಣಮಟ್ಟ ಪರೀಕ್ಷೆ ಮಾಡಿ ವಿಷಕಾರ ಅಂಶ ವಿದ್ದರೆ ವಾಪಸ್ ಕಳಿಸಲಿ. ಅದನ್ನು ಬಿಟ್ಟು ಬೇರೆ ರಾಜ್ಯಗಳಿಗೆ ಹೋಗುವ ಲಾರಿಗಳನ್ನು ತಡೆದು ನಿಲ್ಲಿಸಿಕೊಳ್ಳಲಾಗಿದೆ. ಇದರಿಂದಾಗಿ ರಾಜ್ಯದ ಅಡಿಕೆ ಮಾರುಕಟ್ಟೆಯಲ್ಲಿ ದರ ನಿರಂತರವಾಗಿ ಕುಸಿಯುತ್ತಿದೆ ಎಂದರು.

ಮಹಾಮಂಡಳದಿಂದ ದೆಹಲಿಗೆ ನಿಯೋಗ ತೆರಳಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ನೇತೃತ್ವದಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳೊಂದಿಗೆ ಮಾತುಕತೆ ನಡೆಸಲಾಗಿದೆ. ಬೇರೆ ರಾಜ್ಯಗಳಿಗೆ ಹೋಗುವ ಲಾರಿಗಳನ್ನು ತಡೆದು ಮಹಾರಾಷ್ಟ್ರದಲ್ಲಿ ತಪಾಸಣೆ ನಡೆಸದಂತೆ ಮನವಿ ಮಾಡಲಾಗಿದೆ. ಅದಕ್ಕೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಮಹಾರಾಷ್ಟ್ರದ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸುವ ಸಲುವಾಗಿ ಮಾಮ್ಕೋಸ್ ಹಾಗೂ ಕ್ಯಾಂಪ್ಕೋ ವ್ಯವಸ್ಥಾಪಕ ನಿರ್ದೇಶಕರನ್ನು ಕಳಿಸಲಾಗಿದೆ ಎಂದರು.

ಮಹಾರಾಷ್ಟ್ರದಲ್ಲಿನ ನಡೆಯುತ್ತಿರುವ ಬೆಳವಣಿಗೆಯಿಂದಾಗಿ ಕಳೆದ ಮೂರ್‍ನಾಲ್ಕು ದಿನಗಳಿಂದ ಈಚೆಗೆ ಪ್ರತೀ ಕ್ವಿಂಟಾಲ್ ಅಡಿಕೆ ಬೆಲೆ 2 ಸಾವಿರ ಕಡಿಮೆಯಾಗಿದೆ. ಇದು ರೈತರಲ್ಲಿ ಆತಂಕವನ್ನುಂಟು ಮಾಡಿದೆ. ಬೆಲೆ ಕಡಿಮೆಯಾಗುತ್ತಿದೆ ಎಂಬ ಕಾರಣಕ್ಕೆ ರೈತರು ಪ್ಯಾನಿಕ್ ಆಗಿ ಅಡಿಕೆ ಮಾರಾಟ ಮಾಡಲು ಮುಂದಾಗದಂತೆ ಮನವಿ ಮಾಡಿದರು.

ವಿದೇಶಗಳಿಂದ ಅಕ್ರಮವಾಗಿ ಆಮದಾಗುತ್ತಿರುವ ಅಡಿಕೆಯನ್ನು ತಡೆಗಟ್ಟಬೇಕು. ಕನಿಷ್ಠ ಆಮದು ಬೆಲೆಯನ್ನು 351 ರೂ. ನಿಂದ 450ಕ್ಕೆ ಹೆಚ್ಚಳ ಮಾಡುವಂತೆ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರಿಗೆ ಮನವಿ ಮಾಡಲಾಗಿದೆ. ಸ್ವೀಟ್ ಸುಪಾರಿ ವರ್ಗೀಕರಣವನ್ನು ಕೈ ಬಿಡುವಂತೆ, ಅಡಿಕೆ ಸಂಶೋಧನೆ ನಡೆಸುವಂತೆಯೂ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದರು.

ಉತ್ತರ ಪ್ರದೇಶ ಸರ್ಕಾರವು ಇತರೆ ರಾಜ್ಯಗಳಿಂದ ಹೋಗುವ ಅಡಿಕೆಗೆ ಶೇ.1.5 ಮಂಡಿ ತೆರಿಗೆ ವಿಧಿಸುತ್ತಿದೆ. ಇದು ಅಡಿಕೆ ವ್ಯಾಪಾರಿಗಳಿಗೆ ಹೊರೆಯಾಗುತ್ತಿದೆ. ಈ ಶುಲ್ಕವನ್ನು ರೈತರ ಮೇಲೆ ವಿಧಿಸುತ್ತಿರುವುದರಿಂದ ಬೆಲೆ ಕಡಿಮೆಯಾಗುತ್ತಿರುವುದರಿಂದ ಅದನ್ನು ಕೈ ಬಿಡುವಂತೆ ಅಲ್ಲಿನ ಮುಖ್ಯಮಂತ್ರಿ ಸ್ವಾಮಿ ಆದಿತ್ಯನಾಥ್ ಅವರಿಗೆ ಮನವಿ ಮಾಡಲಾಗಿದೆ ಎಂದರು.

ಅಡಿಕೆಗೆ ಕೃತಕ ಬಣ್ಣ ಹಾಕದಂತೆ ಮನವಿ ಮಾಡುವ ಸಲುವಾಗಿ ಜೂ.26 ರಂದು ತೀರ್ಥಹಳ್ಳಿಯಲ್ಲಿ ವ್ಯಾಪಾರಿಗಳು ಹಾಗೂ ಬೆಳೆಗಾರರ ಸಭೆ ಕರೆಯಲಾಗಿದೆ. ಅವರೊಂದಿಗೂ ಸಮಾಲೋಚನೆ ನಡೆಸುವುದಾಗಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಹಾಮಂಡಲದ ಪ್ರಮುಖರಾದ ಸೂರ್ಯನಾರಾಯಣ ಕೆ.ಎಂ., ಶಿವಶಂಕರ್ ಎಚ್.ಎಸ್., ಗೋಪಾಲಕೃಷ್ಣ ವಿ. ವೈದ್ಯ, ಅಶೋಕ್‌ನಾಯಕ್,

ಸಿಎಂ ಡಿ.ಕೆ. ಶಿವಕುಮಾರ್‌ಗೆ ಸಂಸದ ಬಿ.ವೈ. ರಾಘವೇಂದ್ರ ನಿಯೋಗ ಮನವಿ

ಶಿವಮೊಗ್ಗದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ಕ್ರಮ ಕೈಗೊಳ್ಳಿ

ಶಿವಮೊಗ್ಗ: ಶಿವಮೊಗ್ಗದಲ್ಲಿ ಹೈಕೋರ್ಟ್ ಸರ್ಕ್ಯೂಟ್ ಪೀಠ ಸ್ಥಾಪನೆಗೆ ರಾಜ್ಯ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಜಿಲ್ಲೆಯ ಶಾಸಕರು ಮತ್ತು ಕಾನೂನು ಪ್ರತಿನಿಧಿಗಳ ನಿಯೋಗದೊಂದಿಗೆ ಸಂಸದ ಬಿ.ವೈ. ರಾಘವೇಂದ್ರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಕೋರಿಕೆ ಸಲ್ಲಿಸಿದರು.

ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ಸಂಸದ ಬಿ.ವೈ. ರಾಘವೇಂದ್ರ ನೇತೃತ್ವದ ನಿಯೋಗ, ಶಿವಮೊಗ್ಗದಲ್ಲಿ ಹೈಕೋರ್ಟ್ ಪೀಠದ ಬೇಡಿಕೆಗೆ ವ್ಯಕ್ತವಾಗುತ್ತಿರುವ ಜನಾಗ್ರಹವನ್ನು ಮುಖ್ಯಮಂತ್ರಿಗಳಿಗೆ ತಿಳಿಸಿತು. ಶಿವಮೊಗ್ಗದಲ್ಲಿ ಹೈಕೋರ್ಟ್ ಸರ್ಕ್ಯೂಟ್ ಪೀಠ ಸ್ಥಾಪನೆಯ ಬೇಡಿಕೆ, ಜಿಲ್ಲೆಯ ಸಮಗ್ರ ಕಾನೂನು ವಲಯ ಹಾಗೂ ಮಲೆನಾಡು ಮತ್ತು ಮಧ್ಯ ಕರ್ನಾಟಕದ ಸಾರ್ವಜನಿಕರ ದೀರ್ಘಕಾಲೀನ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತದೆ ಎಂದು ತಿಳಿಸಿದರು.

ಶಿವಮೊಗ್ಗದಲ್ಲಿ ಹೈಕೋರ್ಟ್ ಸರ್ಕ್ಯೂಟ್ ಪೀಠ ಸ್ಥಾಪನೆ ಆಗಬೇಕು:

ಮಲೆನಾಡು ಮತ್ತು ಮಧ್ಯ ಕರ್ನಾಟಕದಾದ್ಯಂತ ಕಾನೂನು ಸಮುದಾಯ, ವಕೀಲರ ಸಂಘಗಳು, ನಾಗರಿಕ ಸಂಸ್ಥೆಗಳು ಮತ್ತು ಸಾರ್ವಜನಿಕರ ದೀರ್ಘಕಾಲದ ಬೇಡಿಕೆ ಮತ್ತು ಅದಕ್ಕೆ ಸಕಾರಣಗಳೊಂದಿಗೆ ಮುಖ್ಯಮಂತ್ರಿಗಳಿಗೆ ವಿವರವಾದ ಪತ್ರದೊಂದಿಗೆ ಮುಖ್ಯಮಂತ್ರಿಗಳಿಗೆ ವಿವರಿಸಿದರು. ಶಿವಮೊಗ್ಗದಲ್ಲಿ ಹೈಕೋರ್ಟ್ ಸರ್ಕ್ಯೂಟ್ ಪೀಠ ಸ್ಥಾಪಿಸಲು ಕ್ರಮ ತೆಗೆದುಕೊಳ್ಳುವಂತೆ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದರು. ಸಂವಿಧಾನದ ಸದಾಶಯದಂತೆ ಇದು ನ್ಯಾಯವನ್ನು ಜನರಿಗೆ ಹತ್ತಿರ ತರುವ ಜೊತೆಗೆ ಪ್ರದೇಶದಲ್ಲಿ ನ್ಯಾಯಾಂಗ ಸೇವೆಗಳ ಲಭ್ಯತೆಯನ್ನು ಗಮನಾರ್ಹವಾಗಿ ಸುಧಾರಿಸುತ್ತದೆ ಎಂದು ತಿಳಿಸಿದರು.

ಶಿವಮೊಗ್ಗದ ಭೌಗೋಳಿಕ ಅನುಕೂಲಗಳು, ಉತ್ತಮ ಸಂಪರ್ಕ ವ್ಯವಸ್ಥೆ ಹಾಗೂ ಮಲೆನಾಡು ಮತ್ತು ಮಧ್ಯ ಕರ್ನಾಟಕದ ಶೈಕ್ಷಣಿಕ, ವಾಣಿಜ್ಯ ಮತ್ತು ಸಾಂಸ್ಕೃತಿಕ ಕೇಂದ್ರವಾಗಿ ಬೆಳೆಯುತ್ತಿರುವ ಪ್ರಾಮುಖ್ಯತೆಯನ್ನು ವಿವರಿಸಿದರು. ಜಿಲ್ಲೆಗೆ ಮಾತ್ರವಲ್ಲ, ಮಧ್ಯಕರ್ನಾಟಕದ ಹಲವಾರು ಜಿಲ್ಲೆಗಳಿಗೆ ಶಿವಮೊಗ್ಗದಲ್ಲಿ ಹೈಕೋರ್ಟ್ ಸರ್ಕ್ಯೂಟ್ ಪೀಠ ಸ್ಥಾಪನೆಗೆ ಸೂಕ್ತ ಸ್ಥಳವಾಗಿದೆ. ಇದರಿಂದ ಶಿವಮೊಗ್ಗ ಜಿಲ್ಲೆಯ ಜನರಿಗೆ ಮಾತ್ರವಲ್ಲದೆ ಚಿಕ್ಕಮಗಳೂರು, ದಾವಣಗೆರೆ ಮತ್ತು ಚಿತ್ರದುರ್ಗ ಸೇರಿದಂತೆ ನೆರೆಯ ಜಿಲ್ಲೆಗಳ ಸಾರ್ವಜನಿಕರಿಗೆ ಮತ್ತು ದಾವೆದಾರರಿಗೂ ನ್ಯಾಯಿಕ ಸೇವೆ ಪಡೆಯಲು ಅನುಕೂಲವಾಗುತ್ತದೆ. ಪ್ರಯಾಣದ ಸಮಯ, ವೆಚ್ಚ ಮತ್ತು ಇನ್ನಿತರ ಅಡಚಣೆಗಳನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ ಎಂದು ತಿಳಿಸಿದರು.

ಶಿವಮೊಗ್ಗದಲ್ಲಿ ಸರ್ಕ್ಯೂಟ್ ಪೀಠ ಸ್ಥಾಪನೆ ಆಗುವವರೆಗೆ, ಶಿವಮೊಗ್ಗ ಜಿಲ್ಲೆಯನ್ನು ಬೆಂಗಳೂರಿನ ಹೈಕೋರ್ಟ್ ಪ್ರಧಾನ ಪೀಠದ ವ್ಯಾಪ್ತಿಯಲ್ಲಿ ಮುಂದುವರಿಯುವಂತೆ ನೋಡಿಕೊಳ್ಳಬೇಕೆಂದು ಸಿಎಂರನ್ನು ಒತ್ತಾಯಿಸಿದ್ದಾರೆ.

ಪಶ್ಚಿಮ ಘಟ್ಟಗಳ ಕಠಿಣ ಭೂಪ್ರದೇಶ ಮತ್ತು ಮಳೆಗಾಲದಲ್ಲಿ ಪದೇ ಪದೇ ಸಂಭವಿಸುವ ನೈಸರ್ಗಿಕ ಅಡಚಣೆಗಳಿಂದಾಗಿ ಶಿವಮೊಗ್ಗವನ್ನು ಪ್ರಸ್ತಾವಿತ ಮಂಗಳೂರು ಸಂಚಾರಿ ಪೀಠದ ವ್ಯಾಪ್ತಿಗೆ ಸೇರಿಸುವುದು ಬೇಡ. ಹಾಗೆ ಮಾಡುವುದರಿಂದ ದಾವೆದಾರರು, ವಕೀಲರು ಮತ್ತು ಸಾರ್ವಜನಿಕರ ಮೇಲೆ ಅನಗತ್ಯವಾಗಿ ಹೆಚ್ಚಿನ ಹೊರೆ ಹೊರಿಸಿದಂತಾಗುತ್ತದೆ ಎಂದು ಗಮನಸೆಳೆದರು.

ಬಿ.ವೈ.ರಾಘವೇಂದ್ರ ನೇತೃತ್ವದ ನಿಯೋಗದಲ್ಲಿ, ಶಿವಮೊಗ್ಗ ಶಾಸಕ ಚನ್ನಬಸಪ್ಪ, ಸಾಗರ ಶಾಸಕ ಬೇಳೂರು ಗೋಪಾಲಕೃಷ್ಣ, ವಿಧಾನ ಪರಿಷತ್ ಸದಸ್ಯರಾದ ಡಾ. ಧನಂಜಯ್ ಸರ್ಜಿ ಮತ್ತು ಅರುಣ್ ಡಿ.ಎಸ್, ಶಿವಮೊಗ್ಗ ವಕೀಲರ ಸಂಘದ ಅಧ್ಯಕ್ಷ ಜಿ.ಆರ್.ರಾಘವೇಂದ್ರ ಸ್ವಾಮಿ, ಸಾಗರ ವಕೀಲರ ಸಂಘದ ಅಧ್ಯಕ್ಷ ಎಂ.ಬಿ. ಗಿರೀಶ್ ಗೌಡ, ಶಿಕಾರಿಪುರ ವಕೀಲರ ಸಂಘದ ಅಧ್ಯಕ್ಷ ಎಂ.ಜಿ. ಉಮೇಶ್, ಹಿರಿಯ ವಕೀಲರು ಉಪಸ್ಥಿತರಿದ್ದರು.

ಬೆಳೆ ವಿಮಾ ಪರಿಹಾರದ ವೈಪರೀತ್ಯಗಳನ್ನು ಸರಿಪಡಿಸಿ...

ಮುಖ್ಯಮಂತ್ರಿಗಳ ಭೇಟಿ ಸಂದರ್ಭದಲ್ಲಿ ಸಂಸದ ರಾಘವೇಂದ್ರ, 2024-25ನೇ ಸಾಲಿನ ಪುನರ್ ರಚಿಸಿದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ ಅಡಿಯಲ್ಲಿ ಶಿವಮೊಗ್ಗ ಜಿಲ್ಲೆಯ ರೈತರಿಗೆ ನೀಡಲಾದ ಪರಿಹಾರದಲ್ಲಿನ ಗಂಭೀರ ವ್ಯತ್ಯಾಸಗಳ ವಿಷಯ ಪ್ರಸ್ತಾಪಿಸಿದರು.

ಅವೈಜ್ಞಾನಿಕ ಮೇಲ್ವಿಚಾರಣೆ ಮತ್ತು ಟೆಲಿಮೆಟ್ರಿಕ್ ಮಳೆ ಮಾಪಕಗಳು ಮತ್ತು ಟೆಲಿಮೆಟ್ರಿಕ್ ಹವಾಮಾನ ಕೇಂದ್ರಗಳ ಅಸಮರ್ಪಕ ನಿರ್ವಹಣೆಯಿಂದಾಗಿ ಪರಿಹಾರದ ಮೊತ್ತದಲ್ಲಿ ಗಮನಾರ್ಹ ವ್ಯತ್ಯಾಸಗಳು ಉಂಟಾಗಿವೆ. ಒಂದೇ ರೀತಿಯ ಹವಾಮಾನ ಪರಿಸ್ಥಿತಿಗಳನ್ನು ಎದುರಿಸಿದ ನೆರೆಯ ಹಳ್ಳಿಗಳ ರೈತರು ಪಡೆದ ಬೆಳೆ ನಷ್ಟಗಳ ವಿಭಿನ್ನ ಪಾವತಿಗಳ ಕುರಿತು ಮುಖ್ಯಮಂತ್ರಿಗಳಿಗೆ ಸಂಸದ ರಾಘವೇಂದ್ರ ತಿಳಿಸಿದರು.

ಪರಿಹಾರದಲ್ಲಿ ಆಗಿರುವ ವೈಪರೀತ್ಯಗಳನ್ನು ಸರಿಪಡಿಸಲು ಶಿವಮೊಗ್ಗ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿದ್ದ ವಿವರವಾದ ಪ್ರಸ್ತಾವನೆಯು ಹಲವಾರು ತಿಂಗಳುಗಳಿಂದ ರಾಜ್ಯ ಸರ್ಕಾರದೊಂದಿಗೆ ಬಾಕಿ ಇದೆ ಎಂದು ಅವರು ಮುಖ್ಯಮಂತ್ರಿಗಳ ಗಮನಕ್ಕೆ ತಂದರು. ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಪರಿಹರಿಸಬೇಕು ಮತ್ತು

ಬಾಧಿತ ರೈತರು ಮತ್ತಷ್ಟು ವಿಳಂಬವಿಲ್ಲದೆ ನ್ಯಾಯಯುತ ಪರಿಹಾರ ಪಡೆಯುವಂತೆ ನೋಡಿಕೊಳ್ಳಬೇಕು ಎಂದು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದಾರೆ.